ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 3 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 257 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಬಿಜಿಯವರ ಛೂಮಂತ್ರ...



ದಾರಿ ತಪ್ಪಿದ ಮೈಸೂರು ಪಾಲಿಕೆ

ಸಿದ್ದರಾಮಯ್ಯನವರನ್ನು ಸಂತುಷ್ಟಿಗೊಳಿಸುವ ಭರದಲ್ಲಿ ತಪ್ಪು ದಾರಿ ಹಿಡಿಯಬೇಡಿ

■ ಪುಟ–4

ಬನ್ನಿಮಂಟಪದಲ್ಲಿ ಅತ್ಯಾಧುನಿಕ ಹೊಸ ಬಸ್ ನಿಲ್ದಾಣ

120 ಕೋಟಿ ವೆಚ್ಚದಲ್ಲಿ ನಿರ್ಮಾಣಕ್ಕೆ ಸಂಪುಟ ಸಭೆ ಒಪ್ಪಿಗೆ

ಏಕಕಾಲದಲ್ಲಿ 100 ಬಸ್‌ಗಳ ನಿಲುಗಡೆ; 30 ಇವಿ ಬಸ್ ಚಾರ್ಜಿಂಗ್‌ಗೆ ಸ್ಥಳಾವಕಾಶ; ನಗರ ಸಾರಿಗೆ ಬಸ್‌ಗಳ ನಿಲುಗಡೆಗೂ ಪ್ರತ್ಯೇಕ ವ್ಯವಸ್ಥೆ



ಬೆಂಗಳೂರು,ಜ.2(ಕೆಎಂಶಿ)– ಮೈಸೂರಿನ ಬನ್ನಿಮಂಟಪದಲ್ಲಿ 120 ಕೋಟಿ ರೂ. ವೆಚ್ಚದಲ್ಲಿ ಅತ್ಯಾಧುನಿಕ ಬಸ್ ನಿಲ್ದಾಣ ನಿರ್ಮಾಣಕ್ಕೆ ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಹಸಿರು ನಿಶಾನೆ ತೋರಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ತವರು ಜಿಲ್ಲೆಯಲ್ಲಿ ವಿವಿಧ ಸೌಲಭ್ಯಗಳನ್ನು ಹೊಂದಿದ, ಇಡೀ ರಾಷ್ಟ್ರದಲ್ಲೇ ಅತ್ಯಾಧುನಿಕ ಬಸ್ ನಿಲ್ದಾಣ ನಿರ್ಮಾಣ ಮಾಡುವ ನಿರ್ಧಾರದ ಮೂಲಕ ಮೈಸೂರಿನ ಜನತೆಗೆ ಹೊಸ ವರ್ಷದ ಕೊಡುಗೆ ನೀಡಿದ್ದಾರೆ.

ಮೈಸೂರಿನ ಬನ್ನಿಮಂಟಪದಲ್ಲಿರುವ ಸಾರಿಗೆ ಸಂಸ್ಥೆ ಡಿಪೋ ಸಮೀಪ ಕೆಎಸ್ಆರ್‌ಟಿಸಿಗೆ ಸೇರಿದ 61 ಎಕರೆ ಜಾಗವಿದ್ದು, ಅದರಲ್ಲಿ ನೆಲ್ಸನ್ ಮಂಡೇಲಾ ರಸ್ತೆಗೆ ಹೊಂದಿಕೊಂಡಂತೆ 14 ಎಕರೆ ಪ್ರದೇಶದಲ್ಲಿ ನೂತನ ಬಸ್ ನಿಲ್ದಾಣ ತಲೆ ಎತ್ತಲಿದ್ದು, ನಿರ್ಮಾಣದ ನಂತರ ಪ್ರಸ್ತುತ ನಗರದ ಮಧ್ಯಭಾಗದಲ್ಲಿರುವ ಬಸ್ ನಿಲ್ದಾಣ ಹೊಸ ನಿಲ್ದಾಣಕ್ಕೆ ಸ್ಥಳಾಂತರಗೊಳ್ಳಲಿದೆ. ಹೊಸ ಬಸ್‌ನಿಲ್ದಾಣದಲ್ಲಿ ಏಕಕಾಲದಲ್ಲಿ 100 ಬಸ್ ನಿಲುಗಡೆ, 30 ಎಲೆಕ್ಟ್ರಿಕಲ್ ಬಸ್ ಚಾರ್ಜಿಂಗ್ ಮಾಡಿಕೊಳ್ಳಲು ನಿಲ್ಲಿಸುವುದಕ್ಕೆ ಸ್ಥಳಾವಕಾಶ ಇರುವಂತೆ ನೀಲನಕ್ಷೆ ಸಿದ್ಧಪಡಿಸಲಾಗಿದೆ. ಮೊದಲ ಹಂತದಲ್ಲಿ ನೆಲ ಮಹಡಿ, ಕೆಳ ಮಹಡಿ, ಪಾರ್ಕಿಂಗ್ ಸ್ಥಳ ನಿರ್ಮಾಣಕ್ಕೆ 65 ಕೋಟಿ ರೂ. ಯೋಜನೆ ಹಾಗೂ 2ನೇ ಹಂತದಲ್ಲಿ ವಾಣಿಜ್ಯ ಕೇಂದ್ರ ಸೇರಿದಂತೆ ಇನ್ನಿತರ ಸೌಲಭ್ಯ ನೀಡಲು 35 ಕೋಟಿ ರೂ. ಹಾಗೂ ಇತರೆ ಸೇರಿದಂತೆ ಒಟ್ಟು 120 ಕೋಟಿ ರೂ. ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಿಸಲಾಗುತ್ತದೆ. ಅಲ್ಲದೆ, ಪ್ರಯಾಣಿಕರಿಗಾಗಿ ಬಸ್ ನಿಲ್ದಾಣದಲ್ಲೇ ಎಲ್ಲಾ ಮೂಲಸೌಕರ್ಯ ಕಲ್ಪಿಸುವುದಲ್ಲದೆ, ಪಕ್ಕದಲ್ಲೇ ಉದ್ಯಾನವನ ನಿರ್ಮಾಣಕ್ಕೂ ಕ್ರಿಯಾ ಯೋಜನೆ ರೂಪಿಸಲಾಗಿದೆ.

■ 6ನೇ ಪುಟಕ್ಕೆ

> **ಮೈಸೂರು ನಗರ ಬೆಳೆಯುತ್ತಿದೆ. ಮೈಸೂರಿಗೆ ಬರುವ ಹಾಗೂ ಬೇರೆ ಬೇರೆ ಜಿಲ್ಲೆ, ನಗರಕ್ಕೆ ಹೋಗುವ ಬಸ್‌ಗಳ ಸಂಖ್ಯೆಯೂ ಹೆಚ್ಚಾಗಿದೆ. ಇದರಿಂದ ಗ್ರಾಮಾಂತರ ಬಸ್ ನಿಲ್ದಾಣ ಕಿಷ್ಕಿಂಧೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಬನ್ನಿಮಂಟಪದ ಬಸ್ ಡಿಪೋ ಬಳಿ 14 ಎಕರೆ ಜಾಗದಲ್ಲಿ 100 ಬಸ್ ನಿಲುಗಡೆ ಮಾಡುವ ಹಾಗೂ 35 ಇವಿ ಬಸ್‌ಗಳು ಬ್ಯಾಟರಿ ಚಾರ್ಜ್‌ಗೆ ನಿಲ್ಲಿಸಲು ವ್ಯವಸ್ಥೆಯುಳ್ಳ ಹೊಸ ಬಸ್ ನಿಲ್ದಾಣ ನಿರ್ಮಿಸಲು ಉದ್ದೇಶಿಸಿ, ಡಿಪಿಆರ್ ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಇತ್ತೀಚೆಗೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಅವರು ಮೈಸೂರಿಗೆ ಆಗಮಿಸಿ ಹೊಸ ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಬನ್ನಿಮಂಟಪದ ಬಸ್ ಡಿಪೋಗೆ ಸೇರಿದ ಜಾಗವನ್ನು ಪರಿಶೀಲನೆ ನಡೆಸಿದ್ದರು.**
>
> –ಬಿ.ಶ್ರೀನಿವಾಸ್, ಸಾರಿಗೆ ಸಂಸ್ಥೆಯ ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿ

ಬಸ್ ಪ್ರಯಾಣ ದರ ಶೇ.15ರಷ್ಟು ಹೆಚ್ಚಳ

* ಜನವರಿ 5ರಿಂದ ಹೊಸ ದರ ಜಾರಿಗೆ
* ಸಿಎಸ್ ಮಾಡಿದ ಶಿಫಾರಸಿಗೆ ಸಂಪುಟ ಅಸ್ತು



ಬೆಂಗಳೂರು, ಜ.2(ಕೆಎಂಶಿ)– ರಾಜ್ಯ ರಸ್ತೆ ಸಾರಿಗೆ ನಿಗಮಗಳು ಶೇಕಡ 15ರಷ್ಟು ಪ್ರಯಾಣ ದರ ಹೆಚ್ಚಿಸಲು ಸಚಿವ ಸಂಪುಟ ಇಂದಿಲ್ಲಿ ಅನುಮತಿ ನೀಡಿದ್ದು, ಜನವರಿ 5ರಿಂದ ಜಾರಿಗೆ ಬರಲಿದೆ. ಪರಿಷ್ಕೃತ ಪ್ರಯಾಣ ದರವು ಎಲ್ಲಾ 4 ನಿಗಮಗಳ ಎಲ್ಲಾ ಬಸ್‌ಗಳಿಗೆ ಅನ್ವಯವಾಗಲಿದೆ.

ಮುಖ್ಯ ಕಾರ್ಯದರ್ಶಿ (ಸಿಎಸ್) ನೇತೃತ್ವದ ಉನ್ನತಮಟ್ಟದ ಸಮಿತಿ ಬಸ್ ಪ್ರಯಾಣ ದರ ಹೆಚ್ಚಳ ಸೇರಿದಂತೆ ಸಾರಿಗೆ ಸಂಸ್ಥೆ ಅಭಿವೃದ್ಧಿ ಮತ್ತು ಪ್ರಯಾಣಿಕರಿಗೆ ಮೂಲಸೌಕರ್ಯ ಸಂಬಂಧ ಮಾಡಿರುವ ಎಲ್ಲಾ ಶಿಫಾರಸುಗಳಿಗೆ ಸಂಪುಟ ಸಮ್ಮತಿಸಿದೆ.

ಡೀಸೆಲ್ ಸೇರಿದಂತೆ ವಾಹನ ಬಿಡಿ ಭಾಗಗಳು, ಮತ್ತಿತರ ಸಾಮಗ್ರಿಗಳ ಬೆಲೆ, ಕಾರ್ಮಿಕರ ಭತ್ಯೆ ಹೆಚ್ಚಳ, ಹೊಸ ಬಸ್‌ಗಳ ಖರೀದಿಯಿಂದ ನಿಗಮಗಳ ಮೇಲೆ ಭಾರಿ ಹೊರೆ ಬಿದ್ದಿದೆ.

ವಾರ್ಷಿಕ 3,650 ಕೋಟಿ ರೂ.ನಷ್ಟು ನಾಲ್ಕು ನಿಗಮಗಳಿಂದ ನಷ್ಟ ಉಂಟಾಗುತ್ತಿದ್ದು, ಇದರಲ್ಲಿ ಕನಿಷ್ಠ ಶೇ.50 ರಷ್ಟನ್ನು ಪ್ರಯಾಣ ದರ ಹೆಚ್ಚಳದಿಂದ ಭರಿಸಲು ಅವಕಾಶ ನೀಡಿದೆ. ನಗರ ಮತ್ತು ಗ್ರಾಮೀಣ ಪ್ರಯಾಣ ದರ ಯಾವ ಪ್ರಮಾಣದಲ್ಲಿ ಇರಬೇಕು ಎಂಬ ನಿರ್ಧಾರಗಳನ್ನು ನಿಗಮವೇ ಕೈಗೊಳ್ಳಲಿದೆ. ಮುಂದಿನ ದಿನಗಳಲ್ಲಿ ತನ್ನ ಸಂಪನ್ಮೂಲ ವೃದ್ಧಿಗೆ ಸಮಿತಿ ಶಿಫಾರಸುಗಳನ್ನು ಚಾಚೂ ತಪ್ಪದೆ ಅನುಷ್ಠಾನಗೊಳಿಸುವ ಹಾಗೂ ಎಲೆಕ್ಟ್ರಿಕ್ ಬಸ್‌ಗಳ ಖರೀದಿಗೆ ಒತ್ತು ನೀಡಲು ನಿರ್ಧರಿಸಿದೆ. ಶಕ್ತಿ ಯೋಜನೆ ಜಾರಿ ನಂತರ ಪ್ರತಿನಿತ್ಯ ಪ್ರಯಾಣಿಕರ ಸಂಖ್ಯೆ 80 ಲಕ್ಷದಿಂದ 1.05 ಕೋಟಿಗೆ ಏರಿಕೆಯಾಗಿದೆ. ಅದರಲ್ಲಿ 26 ಲಕ್ಷ ಮಹಿಳೆ ಪ್ರಯಾಣಿಕರು ಸೇರಿದ್ದಾರೆ. ಇದರಿಂದ ಬಸ್‌ಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಹೆಚ್ಚಾಗಿದ್ದು, ಪ್ರಯಾಣಿಕರ ದಟ್ಟಣೆಯಿಂದಾಗಿ ಬಸ್‌ಗಳ ಕೊರತೆ ಎದುರಾಗಿದೆ. ಮುಂದಿನ ದಿನಗಳಲ್ಲಿ ಈ ಕೊರತೆ ನೀಗಿಸಲು ಹೆಚ್ಚುವರಿ ಬಸ್‌ಗಳ ಖರೀದಿಗೂ ಸಮಿತಿ ಸೂಚಿಸಿದೆ.

ಕ್ಷುಲ್ಲಕ ವಿಚಾರಕ್ಕೆ ಎರಡು ಕೊಲೆ

ಮಗುವಿಗೆ ಸೌತೆಕಾಯಿ ತಿನ್ನಿಸುವ ವಿಚಾರವಾಗಿ ಕೊಳ್ಳೇಗಾಲದಲ್ಲಿ ಮಹಿಳೆ; ಕುಡಿಯಲು ಹಣ ನೀಡದ್ದಕ್ಕೆ ವ್ಯಕ್ತಿಯೊಬ್ಬರು ನಂಜನಗೂಡಲ್ಲಿ ಮರ್ಡರ್



ಐಮನ್ ಬಾನು



ಸೈಯದ್ ಫರ್ಹಾನ್

ಕೊಳ್ಳೇಗಾಲ/ನಂಜನಗೂಡು, ಜ.2– ಸೌತೆಕಾಯಿ ವಿಚಾರಕ್ಕೆ ಒಡಹುಟ್ಟಿದ ತಂಗಿಯ ಕುತ್ತಿಗೆಯನ್ನೇ ಕೊಯ್ದು ಕೊಲೆ ಮಾಡಿರುವ ಘಟನೆ ಕೊಳ್ಳೇಗಾಲ ನಗರದ ಈದ್ಗಾ ಮೊಹಲ್ಲಾದಲ್ಲಿ ನಡೆದಿದ್ದರೆ, ಕುಡಿಯಲು ಹಣ ಕೊಡಲಿಲ್ಲ ಎಂಬ ಕಾರಣಕ್ಕೆ ಆಟೋ ಚಾಲಕನ್ನು ಬಿಯರ್ ಬಾಟಲಿಯಿಂದ ಇರಿದು ಕೊಲೆ ಮಾಡಿದ ಘಟನೆ ನಂಜನಗೂಡಿನಲ್ಲಿ ನಡೆದಿದೆ.

ಕೊಳ್ಳೇಗಾಲ ವರದಿ: ಐಮನ್ ಬಾನು(25), ತನ್ನ ಅಣ್ಣ ಸೈಯದ್ ಫರ್ಹಾನ್ ಪಾಷಾನಿಂದ ಕೊಲೆಯಾಗಿದ್ದು, ಈತ ತಡೆಯಲು ಬಂದ ತಂದೆ ಹಾಗೂ ಅತ್ತಿಗೆ ಮೇಲೂ ಹಲ್ಲೆ ಮಾಡಿದ್ದಾನೆ. ಕೊಲೆ ಮಾಡಿದ ಆರೋಪಿ ಫರ್ಹಾನ್ ಪಾಷಾನನ್ನು ಕೊಳ್ಳೇಗಾಲ ಟೌನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಿನ್ನೆ (ಬುಧವಾರ)ರಾತ್ರಿ ಮನೆಯಲ್ಲಿ ಊಟ ಮಾಡುತ್ತಿದ್ದ ವೇಳೆ ಆರೋಪಿ ಫರ್ಹಾನ್ ತನ್ನ ಅಣ್ಣನ 5 ವರ್ಷದ ಮಗುವಿಗೆ ಸೌತೆಕಾಯಿ ತಿನ್ನಿಸುತ್ತಿದ್ದನಂತೆ. ಆಗ ಆತನ ಅತ್ತಿಗೆ ಮಗುವಿಗೆ ಮೊದಲೇ ಜ್ವರವಿದೆ. ನೀನು ಸೌತೆಕಾಯಿ ತಿನ್ನಿಸ ಬೇಡ, ಅದು ಶೀತ ಪದಾರ್ಥ ಎಂದು ಹೇಳಿದ್ದಾರೆ. ಇದೇ ವೇಳೆ ತಂಗಿಯೂ ಮಧ್ಯೆ ಪ್ರವೇಶಿಸಿ, ಇವನದು ಇದೇ ಕೆಲಸವಾಯಿತು. ಮಗುವನ್ನು ಎತ್ತಿ ಕೊಂಡು ಹೋಗಿ ಔಷಧಿ ಕುಡಿಸಿ ಮಲಗಿಸಿ ಎಂದು ಅತ್ತಿಗೆಗೆ ಹೇಳಿದ್ದಾಳೆ. ಇದರಿಂದ ಕೋಪಗೊಂಡ ಫರ್ಮಾನ್, ತಂಗಿ ಜೊತೆ ಜಗಳವಾಡಿದ್ದಲ್ಲದೇ, ಚಾಕುವಿನಿಂದ ಆಕೆಯ ಕತ್ತು ಕೊಯ್ದು ಕೊಲೆ ಮಾಡಿದ್ದಾನೆ. ತಡೆಯಲು ಬಂದ ತಂದೆ ಸೈಯದ್ ಪಾಶಾ, ಅತ್ತಿಗೆ ತಸ್ಲಿಂ ಭಾನು ಮೇಲೂ ಹಲ್ಲೆ ನಡೆಸಿದ್ದು, ಅವರಿಬ್ಬರೂ ತೀವ್ರವಾಗಿ ಗಾಯಗೊಂಡಿದ್ದಾರೆ.

ಈ ವೇಳೆ ಅಕ್ಕಪಕ್ಕದ ನಿವಾಸಿಗಳು ತಕ್ಷಣ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ತೀವ್ರ ಗಾಯಗೊಂಡ ಸೈಯದ್ ಪಾಶಾ, ತಸ್ಲಿಂ ಭಾನು ಅವರಿಗೆ ಕೊಳ್ಳೇಗಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಸೈಯದ್ ಪಾಶಾ ಅವರನ್ನು ಚಾಮರಾಜನಗರಕ್ಕೆ ಮತ್ತು ತಸ್ಲಿಂ ಬಾನು ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ ಈ ಸಂಬಂಧ ಆರೋಪಿ ಅಣ್ಣ ಸೈಯದ್ ರೋಷನ್ ಪಟ್ಟಣ ಠಾಣೆಗೆ ದೂರು ನೀಡಿದ ಹಿನ್ನೆಲೆ ಪೊಲೀಸರು ಆರೋಪಿಯನ್ನು ಬಂಧಿಸಿ ಮುಂದಿನ ಕ್ರಮಕೈಗೊಂಡಿದ್ದಾರೆ.

ನಂಜನಗೂಡು ವರದಿ: ಕುಡಿದ ಮತ್ತಿನಲ್ಲಿ ಬಿಯರ್ ಬಾಟಲಿಯಿಂದ ಆಟೋ ಚಾಲಕನ ಇರಿದು ಹತ್ಯೆಗೈದಿರುವ ಘಟನೆ ನಗರದ ಸರಸ್ವತಿ ಕಾಲೋನಿ ಬಳಿ ನಡೆದಿದೆ.

ಸರಸ್ವತಿ ಕಾಲೋನಿ ನಿವಾಸಿ ರಫೀಕ್ ಪಾಷ (40) ಕೊಲೆಯಾದವರಾಗಿದ್ದು, ಬುಧವಾರ ರಾತ್ರಿ 11.30ರಲ್ಲಿ ಸರಸ್ವತಿ ಕಾಲೋನಿ ರಸ್ತೆಯಲ್ಲಿರುವ ಬಿವಿ ಪಂಡಿತ್‌ರ ಕಾರ್ಖಾನೆ ಪಕ್ಕದಲ್ಲಿರುವ ಗುಜರಿ ಮುಂಭಾಗ ನಡೆದು ಕೊಂಡು ಮನೆಗೆ ಹೋಗುತ್ತಿದ್ದ ವೇಳೆ ನೀಲಕಂಠ ನಗರ ನಿವಾಸಿ ಸಲೀಂ ಮತ್ತು ಆತನ ಸ್ನೇಹಿತ ಕುಡಿದ ಮತ್ತಿನಲ್ಲಿ ರಫೀಕ್ ಪಾಷನನ್ನು ಅಡ್ಡಗಟ್ಟಿ ಕುಡಿಯಲು ಹಣ ಕೊಡು, ಇಲ್ಲದಿದ್ದರೆ ಕೊಲೆ ಮಾಡುವುದಾಗಿ ಜಗಳ ತೆಗೆದಿದ್ದಾರೆ.



ರಫೀಕ್ ಪಾಷ

ನಂತರ ಬಿಯರ್ ಬಾಟಲಿಯಿಂದ ರಫಿಕ್‌ಗೆ ಇರಿದು ಪರಾರಿಯಾಗಿದ್ದಾರೆ. ಈ ವೇಳೆ ರಕ್ತದ ಮಡುವಿನಲ್ಲಿ ಬಿದ್ದಿದ್ದ ರಫೀಕ್ ಪಾಷನನ್ನು ನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಗುರುವಾರ ಮಧ್ಯಾಹ್ನ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ವೃತ್ತ ನಿರೀಕ್ಷಕ ಸುನೀಲ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿ, ಸಲೀಂ ಮತ್ತು ಆತನ ಸ್ನೇಹಿತನನ್ನು ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ

ನಾಳೆ ಮೈಸೂರು ವಿಜಯನಗರದ ನಾರಾಯಣ ಮೆಡಿಕಲ್ ಸೆಂಟರ್‌ನಲ್ಲಿ ಬ್ರೆಸ್ಟ್ ಕ್ಲಿನಿಕ್ ಆರಂಭ

ಒಂದು ತಿಂಗಳು ಉಚಿತ ತಪಾಸಣೆ; ವೈದ್ಯರೊಂದಿಗೆ ಸಮಾಲೋಚನೆ

ಮೈಸೂರು, ಜ.2–ಮೈಸೂರು ವಿಜಯನಗರದ ನಾರಾಯಣ ಮೆಡಿಕಲ್ ಸೆಂಟರ್‌ನಲ್ಲಿ ಜ.4ರಂದು ಬ್ರೆಸ್ಟ್ ಕ್ಲಿನಿಕ್ ಪ್ರಾರಂಭಿಸಲಾಗುತ್ತಿದೆ. ಇದರ ಅಂಗವಾಗಿ ಜ.4ರಿಂದ ಬರೋಬ್ಬರಿ ಒಂದು ತಿಂಗಳ ಕಾಲ ಉಚಿತ ಸ್ತನ ತಪಾಸಣೆ ಮತ್ತು ವೈದ್ಯರ ಸಲಹೆ ಸೇವೆ ಲಭ್ಯವಿದೆ.


ಈ ಬ್ರೆಸ್ಟ್ ಕ್ಲಿನಿಕ್‌ನಲ್ಲಿ ಥರ್ಮಲ್ ಮ್ಯಾಮೊಗ್ರಫಿ ಸ್ಕ್ರೀನಿಂಗ್‌ನಂತಹ ಅತ್ಯಾಧುನಿಕ, ಆಕ್ರಮಣಶೀಲವಲ್ಲದ, ವಿಕಿರಣ–ಮುಕ್ತ ವಿಧಾನ ಸೇರಿದಂತೆ ಸುಧಾರಿತ ರೋಗ ನಿರ್ಣಯ ಸೇವೆಗಳನ್ನು ಒದಗಿಸಲಾಗುತ್ತಿದೆ. ಇದು ಸ್ತನ ಅಂಗಾಂಶದಲ್ಲಿನ ಅಸಹಜತೆಗಳನ್ನು ಗುರುತಿಸಲು, ಪತ್ತೆ ಹಚ್ಚಲು ಪರಿಣಾಮಕಾರಿಯಾಗಿದೆ. ಈ ಅತ್ಯಾಧುನಿಕ ತಂತ್ರಜ್ಞಾನವು ಸುರಕ್ಷಿತ ಮತ್ತು ಆರಾಮದಾಯಕ ಸ್ಕ್ರೀನಿಂಗ್ ಪ್ರಕ್ರಿಯೆಯನ್ನು ಖಾತ್ರಿಗೊಳಿಸುತ್ತದೆ. ಮಹಿಳೆಯರು ತಮ್ಮ ಆರೋಗ್ಯಕ್ಕೆ ಆದ್ಯತೆ ನೀಡಲು ಪ್ರೋತ್ಸಾಹಿಸುತ್ತದೆ.

ಉಚಿತ ಸ್ಕ್ರೀನಿಂಗ್ ಮತ್ತು ಸಮಾಲೋಚನೆಗಳು ಸ್ತನ ಆರೋಗ್ಯದಲ್ಲಿ ಆರಂಭಿಕ ಪತ್ತೆ ಮತ್ತು ಸಮಯೋಚಿತ ಹಸ್ತಕ್ಷೇಪದ ಪ್ರಾಮುಖ್ಯತೆಯ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿವೆ. ಮೈಸೂರು ಮತ್ತು ಹತ್ತಿರದ ಪ್ರದೇಶಗಳಲ್ಲಿ ಮಹಿಳೆಯರು ಈ ಅವಕಾಶದ ಲಾಭಪಡೆಯಲು ಮತ್ತು ಉದ್ಘಾಟನಾ ಕೊಡುಗೆ ಅವಧಿಯಲ್ಲಿ ಅಪಾಯಿಂಟ್‌ಮೆಂಟ್ ಪಡೆಯಲು ಪ್ರೋತ್ಸಾಹಿಸಲಿದೆ.

ಈ ಉಪಕ್ರಮವು ಮಹಿಳೆಯರ ಆರೋಗ್ಯವನ್ನು ಸುಧಾರಿಸುವ ನಾರಾಯಣ ಹೆಲ್ತ್‌ನ ಬದ್ಧತೆಯ ಭಾಗವಾಗಿದೆ. ಈ ವರ್ಷದ ವಿಶ್ವ ಕ್ಯಾನ್ಸರ್ ದಿನದ ಧ್ಯೇಯ ವಾಕ್ಯ "ಯುನೈಟೆಡ್ ಬೈ ಯುನಿಕ್‌ನೊಂದಿಗೆ ಹೊಂದಿಕೆಯಾಗುತ್ತದೆ. ಇದು ಕ್ಯಾನ್ಸರ್ ವಿರುದ್ಧದ ಸಾಮೂಹಿಕ ಹೋರಾಟವನ್ನು ಒತ್ತಿಹೇಳುತ್ತದೆ

'ಬ್ರೆಸ್ಟ್ ಕ್ಲಿನಿಕ್ ಕುರಿತು ಹೆಚ್ಚಿನ ಮಾಹಿತಿಗಾಗಿ ಅಥವಾ ಸಮಾಲೋಚನೆ ನಿಗದಿಪಡಿಸಲು, ವಿಜಯನಗರದ ನಾರಾಯಣ ವೈದ್ಯಕೀಯ ಕೇಂದ್ರವನ್ನು ಸಂಪರ್ಕಿಸಿ ದೂರವಾಣಿ 89040 04606.

ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ವೀರ ಮಡಿವಾಳ ಮಾಚಿ ದೇವರ ಸಂಘದ 2025ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು. ಪಿಕೆಟಿವಿ ಮತ್ತು ಸಿಡಿ ಆಸ್ಪತ್ರೆ ಅಧೀಕ್ಷಕ ಡಾ. ಸಿ.ಪ್ರಶಾಂತ್, ಸಂಘದ ಅಧ್ಯಕ್ಷ ಸಿ.ಎಸ್.ಮಹೇಶ್, ಉಪಾಧ್ಯಕ್ಷ ಬಿ.ಜಿ.ಕೇಶವ್, ಮೈಸೂರು ನಗರ ಕಾಂಗ್ರೆಸ್ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ವೀರ ಮಡಿವಾಳ ಯುವ ವೇದಿಕೆ ಉಪಾಧ್ಯಕ್ಷ ವೆಂಕಟೇಶ್, ಕುಂಬಾರ ಸಂಘದ ಅಧ್ಯಕ್ಷ ರವಿಕುಮಾರ್, ಪ್ರತಿಭಾವಂತ ವಿದ್ಯಾರ್ಥಿಗಳಾದ ಸಿ.ಎಂ.ರಕ್ಷಿತ, ಪಿ.ಎಂ.ಚಂದನ್, ಆರ್.ಐಶ್ವರ್ಯ, ಎಸ್.ವರುಣ್, ಎ.ಆರ್.ಪುಣ್ಯವತಿ ಇನ್ನಿತರರಿದ್ದರು.

ಎಎಪಿ ಮೈಸೂರು ನಗರ ಅಧ್ಯಕ್ಷರಾಗಿ ಸೋಮಶೇಖರ್



ಮೈಸೂರು,ಜ.2–ಆಮ್ ಆದ್ಮಿ ಪಾರ್ಟಿ(ಎಎಪಿ) ಮೈಸೂರು ನಗರ (ಜಿಲ್ಲೆ) ಅಧ್ಯಕ್ಷರಾಗಿ ಎಂ.ಸೋಮಶೇಖರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಎಎಪಿ ಮೈಸೂರು ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಮುಖಂಡರಾಗಿದ್ದ ಸೋಮಶೇಖರ್ ಅವರು ಇತ್ತೀಚೆಗೆ ಮೈಸೂರಿಗೆ ಭೇಟಿ ನೀಡಿದ್ದ ಎಎಪಿ ರಾಜ್ಯಾಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಸಮ್ಮುಖದಲ್ಲಿ ಕಾಂಗ್ರೆಸ್ ತೊರೆದು ಎಎಪಿ ಸೇರಿದ್ದರು.

ಪ್ರಥಮ ಬಹುಮಾನ



ಮೈಸೂರು,ಜ.2–ನಾಟ್ಯ ಪ್ರದರ್ಶಕ ಕಲೆಗಳ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಕಥಾ ಸ್ಪರ್ಧೆಯಲ್ಲಿ ನಂಜನಗೂಡಿನ ಕವಯಿತ್ರಿ ಲೇಖಕಿ, ವ್ಯಂಗ್ಯ ಚಿತ್ರಗಾರ್ತಿ ಎಸ್.ಎಲ್.ವರಲಕ್ಷ್ಮೀ ಮಂಜುನಾಥ್ ಅವರ ಮಗಳು.. ಮಣ್ಣಿನ ಋಣ.. ಕಥೆ ಪ್ರಥಮ ಸ್ಥಾನ ಪಡೆದುಕೊಂಡಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಸಂತೋಷ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ಸುಳ್ಳು ಆರೋಪ

ಮೈಸೂರಲ್ಲಿ ಕೋರ್ಟ್ ಮುಂದಿನ ಗಾಂಧಿ ಪುತ್ಥಳಿ ಬಳಿ ದಲಿತ ಸಂಘಟನೆಗಳ ಒಕ್ಕೂಟ ಪ್ರತಿಭಟನೆ



ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ನಾಯಕರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಆರೋಪಿಸಿ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಮೈಸೂರಿನ ನ್ಯಾಯಾಲಯ ಮುಂಭಾಗದ ಗಾಂಧಿ ಪುತ್ಥಳಿ ಬಳಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜ.2(ಜಿಎ)– ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ನಾಯಕರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಆರೋಪಿಸಿ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಮೈಸೂರಿನ ಕೃಷ್ಣರಾಜ ಬುಲೇ ವಾರ್ಡ್ ರಸ್ತೆಯಲ್ಲಿರುವ ನ್ಯಾಯಾಲಯ ಮುಂಭಾಗದ ಗಾಂಧಿ ಪುತ್ಥಳಿ ಬಳಿ ಪ್ರತಿಭಟನೆ ನಡೆಸಲಾಯಿತು.

ಇತ್ತೀಚೆಗೆ ಬೀದರ್‌ನಲ್ಲಿ ನಡೆದ ಗುತ್ತಿಗೆದಾರ ಸಚಿನ್ ಪಾಂಚಾಳ್ ಅವರ ಆತ್ಮಹತ್ಯೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖಂಡರಾದ ಸಿ.ಟಿ.ರವಿ ಅವರುಗಳು ಪ್ರಿಯಾಂಕ್ ಖರ್ಗೆ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಚಿನ್ ಪಾಂಚಾಳ್ ಮನೆಗೆ ತೆರಳಿ ಸಾಂತ್ವನ ಹೇಳುವ ನೆಪದಲ್ಲಿ ಹೋಗಿ ಪ್ರಕರಣದ ಪೂರ್ವಾಪರ ಅವಲೋಕಿಸದೆ, ರಾಜಕೀಯ ಲಾಭಕ್ಕಾಗಿ ಮನ ಬಂದಂತೆ ಹೇಳಿಕೆ ನೀಡುತ್ತಿರುವುದು ಸರಿಯಲ್ಲ. ಸಚಿನ್ ಪಾಂಚಾಳ್ ಬರೆದಿರುವ ಡೆತ್‌ನೋಟ್‌ನಲ್ಲಿ ರಾಜು ಕಪ್ಪನೂರು ಹಾಗೂ ಅವರ ಸೋದರ ಸಂಬಂಧಿಗಳ ಹೆಸರು ಮಾತ್ರ ಉಲ್ಲೇಖವಿದೆ. ಇದರ ವಿರುದ್ಧ ತನಿಖೆ ನಡೆಯುತ್ತಿದೆ. ಆದರೆ, ಬಿಜೆಪಿ ಮುಖಂಡರು ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ಕಾಣಿಸಿಕೊಂಡಿರುವ ರಾಜು ಕಪ್ಪನೂರು ಫೋಟೋಗಳನ್ನು ಉದ್ದೇಶಪೂರ್ವಕವಾಗಿ ಪ್ರದರ್ಶಿಸಿ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯ, ಕೇಂದ್ರ ಸರ್ಕಾರದ ಅನೇಕ ಹಗರಣ ಗಳನ್ನು ಹೊರತಂದು, ಇವರ ಭ್ರಷ್ಟತೆಯನ್ನು ಬೀದಿಗೆ ಎಳೆದು ತಂದ ಪ್ರಿಯಾಂಕ್ ಖರ್ಗೆ ಏಳಿಗೆ ಸಹಿಸದ ಬಿಜೆಪಿಯ ದಲಿತ ವಿರೋಧಿ ನಾಯಕರು ಅನಗತ್ಯ ವಾಗಿ ಸಚಿವರ ಹೆಸರನ್ನು ಎಳೆದು ತಂದು ರಾಜೀ ನಾಮೆಗೆ ಆಗ್ರಹಿಸುತ್ತಿದ್ದಾರೆ. ಬಿಜೆಪಿ ನಾಯಕರಿಗೆ ಸಚಿವರ ರಾಜೀನಾಮೆ ಕೇಳುವ ನೈತಿಕತೆ ಇಲ್ಲ. ಹಿಂದಿನಿಂದಲೂ ದಲಿತ ವಿರೋಧಿ ನೀತಿ ಅನು ಸರಿಸುತ್ತಿರುವ ಇವರಿಗೆ ಸದನದ ಒಳಗೆ, ಹೊರಗೆ ಗಟ್ಟಿಧ್ವನಿಯಾಗಿರುವ ಇಲಾಖೆಯಲ್ಲಿ ಉತ್ತಮ ಕೆಲಸ ಮಾಡುತ್ತಿರುವ ಪ್ರಿಯಾಂಕ್ ಖರ್ಗೆಯವರನ್ನು ಸಹಿಸಿಕೊಳ್ಳಲಾಗದೆ, ರಾಜೀನಾಮೆ ಕೇಳುತ್ತಿರುವುದು ಇವರ ದಲಿತ ವಿರೋಧಿ ನೀತಿ ತೋರಿ ಸುತ್ತದೆ. ಇದು ಹೀಗೆ ಮುಂದುವರೆದರೆ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಅಖಿಲ ಕರ್ನಾಟಕ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ಸಿ.ನರೇಂದ್ರ, ಶ್ರೀ ನರೇಂದ್ರ ಖರ್ಗೆ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ರಘು, ಡಿಎಸ್‌ಎಸ್ ಸಂಚಾಲಕರಾದ ಉಮಾ ಮಾದೇವ್, ಬಿಳಿಕೆರೆ ಸ್ವಾಮಿ, ಪೈಲ್ವಾನ್ ಕೃಷ್ಣಪ್ಪ, ವಕೀಲರಾದ ಕಾಂತರಾಜು, ನಾಗರಾಜ್ ಬಂಡಿಪಾಳ್ಯ, ವಿಜಯ್‌ಕುಮಾರ್, ಈಶ್ವರ್ ಚಿಕ್ಕಡಿ, ವಿದ್ಯಾರ್ಥಿ ಮುಖಂಡ ಮರಿದೇವಯ್ಯ, ಎಸ್ಸಿ ಜಿಲ್ಲಾಧ್ಯಕ್ಷ ರಮೇಶ್, ಎಸ್ಟಿ ಜಿಲ್ಲಾಧ್ಯಕ್ಷ ಮಹೇಶ್, ಹಿನಕಲ್ ಮಂಜು, ಬಂಡಿಪಾಳ್ಯ, ಭಾಸ್ಕರ್, ರಘು, ಶಿವರಾಜ್ ಕ್ಯಾತನಹಳ್ಳಿ ಕನಕಮೂರ್ತಿ, ಧನಗಳ್ಳಿ ಪ್ರವೀಣ್, ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಯುಜಿಸಿ ನೆಟ್ ಪುಸ್ತಕ ಬಿಡುಗಡೆ



ಯುಜಿಸಿ ನೆಟ್ ಪುಸ್ತಕವನ್ನು ಜ್ಞಾನಬುತ್ತಿಯಲ್ಲಿ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಎಂ.ಜಿ.ಮಂಜುನಾಥ್, ಮಹಾಜನ ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಆರ್.ಜಯಕುಮಾರಿ, ಪ್ರೊ.ಬಾಲಸುಬ್ರಹ್ಮಣ್ಯಂ, ಶಿಕ್ಷಣ ತಜ್ಞರಾದ ಪ್ರೊ. ಎನ್.ಎಸ್.ಪ್ರಹ್ಲಾದ್, ಪ್ರೊ.ಮಲ್ಲಿಕಾರ್ಜುನಸ್ವಾಮಿ, ಪ್ರೊ.ಆರ್.ಎನ್.ಪ್ರದ್ಮನಾಭ, ಪ್ರೊ. ಕೃ.ಪಾ.ಗಣೇಶ್, ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ, ಜೈನಹಳ್ಳಿ ಸತ್ಯನಾರಾಯಣಗೌಡ, ಹೆಚ್.ಬಾಲಕೃಷ್ಣ ಗುರುವಾರ ಬಿಡುಗಡೆ ಮಾಡಿದರು.

ಇಂದು ಸನ್ಮಾನ ಸಮಾರಂಭ

ಮೈಸೂರು,ಜ.2(ಪಿಎಂ)– ಮೈಸೂರು ಕಲ್ಚರಲ್ ಅಸೋಸಿಯೇಷನ್ ವತಿಯಿಂದ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಸಭಾಂಗಣದಲ್ಲಿ ಜ.3ರಂದು ಬೆಳಗ್ಗೆ 11ಕ್ಕೆ ಸಾಧಕರಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ರಾಜ್ಯ ಸರ್ಕಾರದ ಅಭಿವೃದ್ಧಿ ಪತ್ರಿಕೋದ್ಯಮದ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಚೀ.ಜ.ರಾಜೀವ, ರಾಜ್ಯ ಸರ್ಕಾರದ ಪರಿಸರ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ವಿನೋದ್ ಕುಮಾರ್ ನಾಯಕ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಮೈಸೂರು ವಿವಿಯಿಂದ ಪತ್ರಿಕೋದ್ಯಮದಲ್ಲಿ ಪಿಹೆಚ್‌ಡಿ ಪದವಿ ಪಡೆದ ಪತ್ರಕರ್ತ ನಾಗರಾಜ ನವೀಮನೆ ಅವರನ್ನು ಸನ್ಮಾನಿಸಲಾಗುವುದು. ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಕಸಾಪ ಮೈಸೂರು ನಗರಾಧ್ಯಕ್ಷ ಕೆ.ಎಸ್.ಶಿವರಾಮು, ಸಂಘಟನೆಯ ಸಂಚಾಲಕ ಐತಿಚಂಡ ರಮೇಶ್ ಉತ್ತಪ್ಪ, ಅಧ್ಯಕ್ಷ ಎ.ಪಿ.ನಾಗೇಶ್ ಹಾಜರಿರುವರು.

ರಾಜ್ಯದಲ್ಲಿ ಇನ್ನು ಹೊಸ ಗೋಶಾಲೆ ಪ್ರಾರಂಭ ಇಲ್ಲ

ಇರುವ 14 ಗೋಶಾಲೆಗಳ ಅಭಿವೃದ್ಧಿಗೆ 10.50 ಕೋಟಿ ವೆಚ್ಚ

ಬೆಂಗಳೂರು, ಜ.2(ಕೆಎಂಶಿ)– ರಾಜ್ಯದಲ್ಲಿ ಮತ್ತೆ ಹೊಸದಾಗಿ ಗೋಶಾಲೆಗಳನ್ನು ಪ್ರಾರಂಭಿಸದಿರಲು ಸಚಿವ ಸಂಪುಟ ನಿರ್ಧರಿಸಿದೆ. ಹಾಲಿ 14 ಜಿಲ್ಲೆಗಳಲ್ಲಿನ ಗೋಶಾಲೆಗಳ ಬಲವರ್ಧನೆ ಮತ್ತು ಅಭಿವೃದ್ಧಿಗೆ 10.50 ಕೋಟಿ ರೂ.ಗಳನ್ನು ವೆಚ್ಚ ಮಾಡಲು ತೀರ್ಮಾನಿಸಿದೆ.

ಕಳೆದ 2022–23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿರುವ ಹೊಸ ಗೋಶಾಲೆ ಪ್ರಾರಂಭ, ನಿರ್ಮಾಣ ಎಂಬುದನ್ನು ಕೈಬಿಡಲು ತೀರ್ಮಾನಿಸಿದ್ದು, ಬಿಜೆಪಿ ಸರ್ಕಾರ ಕೈಗೆತ್ತಿಕೊಂಡಿದ್ದ ಕಾರ್ಯಕ್ರಮವನ್ನು ದೂರ ಮಾಡಿದೆ.


ಕೈಗಾರಿಕೆಗಳಿಗೆ ಉತ್ತೇಜನ ಮತ್ತು ಮೂಲಸೌಕರ್ಯ ಕಲ್ಪಿಸುವ ಉದ್ದೇಶದಿಂದ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ 5,000 ಕೋಟಿ ರೂ.ವರೆಗೂ ಸಾಲ ಪಡೆಯಲು ಸಂಪುಟ ಸಮ್ಮತಿಸಿದೆ.

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯನ್ನು ವಿಭಜಿಸಿ ಪ್ರತ್ಯೇಕವಾಗಿ ಧಾರವಾಡ ಮಹಾನಗರ ಪಾಲಿಕೆ ರಚಿಸಲು ಸಂಪುಟ ನಿರ್ಧರಿಸಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಚಿಕ್ಕಬಳ್ಳಾಪುರ ಘಟಕದ ಕಾಲೇಜು ಕಟ್ಟಡ ನಿರ್ಮಾಣವನ್ನು 149.75 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ನಬಾರ್ಡ್ ನೆರವಿನಲ್ಲಿ 100 ಕೋಟಿ ರೂ. ವೆಚ್ಚದಲ್ಲಿ 200 ಪಶು ವೈದ್ಯ ಆಸ್ಪತ್ರೆಗಳ ಕಟ್ಟಡ ನಿರ್ಮಾಣಕ್ಕೆ ಅನುಮತಿ ಕೊಟ್ಟಿದೆ. ಸಾರಿಗೆ ಸಂಸ್ಥೆಗಳಲ್ಲಿನ ಭವಿಷ್ಯ ನಿಧಿ ಹಾಗೂ ಇಂಧನ ಬಾಕಿ ಪಾವತಿಸಲು 2,000 ಕೋಟಿ ರೂ. ಸಾಲ ಪಡೆಯಲು ಸರ್ಕಾರ ಗ್ಯಾರಂಟಿ ನೀಡಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.01.2025 ಶುಕ್ರವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯಮಾಸ ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ವಿಶ್ವ ಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ನವ ವಿಶ್ವಮಾನವ ಟ್ರಸ್ಟ್ :** ರಾಷ್ಟ್ರಕವಿ ಕುವೆಂಪುರವರ ಭಾವಚಿತ್ರಕ್ಕೆ ಮಾಲಾರ್ಪಣೆ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರೊ.ಎನ್. ನಾಗರಾಜ, ಡಾ. ಬಿ.ಜೆ. ವಿಜಯಕುಮಾರ್, ಡಾ. ಟಿ.ಆರ್. ಚಂದ್ರಶೇಖರ್, ಸ್ಥಳ: ಕುವೆಂಪು ಮುಖ್ಯ ದ್ವಾರ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.


■ **ಮೈಸೂರು ವಿಶ್ವವಿದ್ಯಾನಿಲಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ :** ಜೈನಧರ್ಮದ ತಾತ್ವಿಕ ಅನುಸಂಧಾನ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಅಧ್ಯಕ್ಷತೆ : ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕ ಪ್ರೊ. ಸುತ್ತೂರು ಎಸ್. ಮಾಲಿನಿ, ಉಪಸ್ಥಿತರು : ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ.ಎಸ್.ಡಿ. ಶಶಿಕಲಾ, ಸ್ಥಳ: ಜೈನಶಾಸ್ತ್ರ ವಿಭಾಗದ ಸೆಮಿನಾರ್ ಹಾಲ್, ಬೆಳಗ್ಗೆ 10ಕ್ಕೆ.

■ **ಶ್ರೀ ದುರ್ಗಾ ಫೌಂಡೇಶನ್ :** ಸಾವಿತ್ರಿಬಾಯಿ ಫುಲೆ 194ನೇ ಜನ್ಮ ದಿನಾಚರಣೆ, ಮುಖ್ಯ ಅತಿಥಿಗಳು : ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾದ ಡಾ. ಆರ್ ಎಚ್ ಪವಿತ್ರ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ರೇಣುಕಾ ರಾಜ್, ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷರಾದ ಹೇಮಾ ನಂದೀಶ್, ಹಿರಿಯ ಸಮಾಜ ಸೇವಕ ಕೆ ರಘುರಾಮ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರಮೀಳಾ, ಕೆ ಆರ್ ಬ್ಯಾಂಕ್ ಅಧ್ಯಕ್ಷ ಬಸವರಾಜ ಬಸಪ್ಪ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅಂಬಾಭವಾನಿ ಸಮಾಜ ಮಹಿಳಾ ಅಧ್ಯಕ್ಷರಾದ ಸವಿತಾ ಘಾಟ್ಕೆ, ಸಮೃದ್ಧಿ ಟ್ರಸ್ಟ್ ಅಧ್ಯಕ್ಷರಾದ ಸಹನಾ ಗೌಡ, ಸ್ಥಳ: ಚಾಮರಾಜಪುರಂನಲ್ಲಿರುವ ವಿಷ್ಣುವರ್ಧನ ರಸ್ತೆಯ ಕಚೇರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ವೀರಕೇಸರಿ ಪಡೆ :** ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಉಪಸ್ಥಿತರು :ಗಣಪತಿ ದೇವಸ್ಥಾನದ ಪ್ರಧಾನ ಅರ್ಚಕ ಸುನೀಲ್ ಕುಮಾರ್, ಕನ್ನಡ ವೇದಿಕೆಯ ಬಾಲಕೃಷ್ಣ, ಸಾಹಿತಿ ಬನ್ನೂರು ರಾಜು, ತೇಜಸ್ ಲೋಕೇಶ್‌ಗೌಡ, ಸ್ಥಳ: 101 ಗಣಪತಿ ದೇವಸ್ಥಾನದ ಆವರಣ, ಅಗ್ರಹಾರ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಕೃಷ್ಣ ಸೇವಾ ಸಂಘ, ರಾಮಕೃಷ್ಣ ವಿದ್ಯಾಕೇಂದ್ರ :** ಮಿನುಗು ನಕ್ಷತ್ರಗಳ ಅನಾವರಣ, ಅಂತರ ಶಾಲಾ ಸ್ಪರ್ಧೆಗಳು, ಅಧ್ಯಕ್ಷತೆ : ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು : ಶ್ರೀ ರಾಮಕೃಷ್ಣ ವಿದ್ಯಾಶಾಲಾ ನಿವೃತ್ತ ಉಪನ್ಯಾಸಕ ಎಸ್.ಎಸ್. ರಮೇಶ್, ಉಪಸ್ಥಿತರು: ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಜಿ. ಚಂದ್ರಶೇಖರ್, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ.ಎನ್. ವಿಶ್ವನಾಥ್, ಶ್ರೀಮತಿ ವೀಣಾ ಕೆ. ಹೆಗಡೆ, ಸ್ಥಳ: ಶ್ರೀ ಶಾರದಾ ಸಭಾಂಗಣ, ಮಧ್ಯಾಹ್ನ 12.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು– ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಪ್ರೊ. ಶರಣಪ್ಪ. ವಿ. ಹಲಸೆ, ಮಾನ್ಯ ಕುಲಪತಿಗಳು, ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABHI-ಕರ್ನಾಟಕ –ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ 'ಮಕ್ಕಳಲ್ಲಿ ಮಧುಮೇಹ– ನಿರ್ವಹಣೆ ಮತ್ತು ಚಿಕಿತ್ಸೆ' ಡಾ. ತೃಪ್ತಿ. ಎಸ್ ಅವರೊಂದಿಗೆ ಮಾತುಕತೆ. ನಂತರ 'ಸಂಧಿವಾತ ಅಂದರೆ ಆರ್‌ಥ್ರೈಟಿಸ್‌ಗೆ ಆಯುರ್ವೇದ ಚಿಕಿತ್ಸೆ' ಕುರಿತು ಡಾ. ಬೀನಾ. ಎಂ. ಡಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.40 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸೈಕಲ್ ಸವಾರಿ ಮಾತಿನ ಲಹರಿ', ಪ್ರಸ್ತುತಿ : ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ.ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, 4.30 'ಮೈಸೂರಿನ ಸಿ.ಎಸ್.ಐ.ಆರ್–ಸಿ.ಎಫ್.ಟಿ.ಆರ್.ಐನ ಅಮೃತ ಮಹೋತ್ಸವದ ಸಂದರ್ಭದಲ್ಲಿ 'ಸಿ.ಎಫ್.ಟಿ.ಆರ್.ಐ ನಡೆದು ಬಂದ ದಾರಿ' ಕುರಿತು ಪದ್ಮಶ್ರೀ ಪುರಸ್ಕೃತರು, ಸಿ.ಎಫ್.ಟಿ.ಆರ್.ಐ ನ ನಿವೃತ್ತ ನಿರ್ದೇಶಕರು ಹಾಗೂ ನವದೆಹಲಿಯ ಸಿ.ಎಸ್.ಐ.ಆರ್ ಇಂಡಿಯಾದ ಪ್ರತಿಷ್ಠಿತ ವಿಜ್ಞಾನಿಗಳೂ ಆದ ಡಾ. ವಿಶ್ವೇಶ್ವರಯ್ಯ ಪ್ರಕಾಶ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ : ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, ಪ್ರಾಯೋಜಕರು: ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, 7.20 ಕೃಷಿ ಹಾಡುಗಳು, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ : ಕೃತಕ ಬುದ್ಧಿ ಮತ್ತೆ– ಪಾರದರ್ಶಕತೆ ಮತ್ತು ನೈತಿಕತೆಯನ್ನು ತರುವಲ್ಲಿ ಇತ್ತೀಚಿನ ಬೆಳವಣಿಗೆಗಳು. ಈ ಬಗ್ಗೆ ಮಾತನಾಡುತ್ತಾರೆ ಶಶಿಧರ ಡೋಂಗ್ರೆ, ಉಪವಾಸದ ಅನುಕೂಲತೆಗಳು ಈ ಕುರಿತು ಮಾಹಿತಿ ನೀಡಲಿದ್ದಾರೆ ಡಾ. ಎಂ.ಪಿ., ರಾಘವೇಂದ್ರ. ಪ್ರಸ್ತುತಿ: ಜಿ. ಶಾಂತಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ತತ್ವ ಸಂಚಾರ : ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ : ಡಾ. ಮೈಸೂರು ಉಮೇಶ್, 10.30 ಸವಿನೆನಪು

■ **ಜನ ಚೈತನ್ಯ ಫೌಂಡೇಷನ್ :** ಸಂಗೀತ ಕಾರ್ಯಕ್ರಮ, ನನ್ನ ಹಾಡು ನನ್ನದು... ನನ್ನ ರಾಗ ನನ್ನದು... ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4 ರಿಂದ.

■ **ಗಾಣಿಗ ಮಹಾಸಭಾ :** ಕ್ಯಾಲೆಂಡರ್ ಬಿಡುಗಡೆ, ಅಭಿನಂದನಾ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ಮಾಜಿ ಮೇಯರ್ ಅನಂತು, ಮಾಜಿ ಎಂಎಲ್‌ಸಿ ಧರ್ಮಸೇನಾ, ಹಿಂದುಳಿದ ವರ್ಗಗಳ ಅಧ್ಯಕ್ಷ ಕೆ. ಶಿವರಾಮು, ಮುಡಾ ಮಾಜಿ ಅಧ್ಯಕ್ಷ ಕೆ. ಮರೀಗೌಡ, ಡಾ. ಪೂರ್ಣಿಮಾ, ಎ.ಸಿ. ಪೂರ್ಣಚಂದ್ರ, ಅಧ್ಯಕ್ಷತೆ : ಡಾ. ಕೆ. ವಿಜಯಕುಮಾರ್, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ, ಸಂಜೆ 4.30ಕ್ಕೆ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ಶ್ರೀ ಮದ್ಭಾಗವತ ಸಪ್ತಾಹ, ವಿದುಷಿ ಡಾ.ಜ್ಯೋತಿ ಶಂಕರ್ ಅವರಿಂದ ಕಂಸವಧೆ ಕುರಿತು ಪ್ರವಚನ, ರಾಮಕೃಷ್ಣನಗರದ ಸವಿಗಾನ ಸಂಗೀತ ಶಾಲೆಯವರಿಂದ ಹಾಡುಗಾರಿಕೆ, ಸ್ಥಳ: ರಜತ ಸಭಾ ಮಂಟಪ, ಗಣಪತಿ ದೇವಸ್ಥಾನ, ಐ–ಬ್ಲಾಕ್, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ.

ಮೈಸೂರು ಮಿತ್ರ
ಶುಕ್ರವಾರ 3 ಜನವರಿ 2025

ಪಾಲಿಕೆ ಆಯುಕ್ತರಿಗೆ ‘ಪ್ರಿನ್ಸೆಸ್ ರಸ್ತೆ’ ಪುರಾವೆ ನೀಡಿದ ಸಂಸದ ಯದುವೀರ್

● ರಸ್ತೆ ಹೆಸರು ಬದಲಿಸುವ ನಿಲುವು ಬದಲಿಸಲು ಮನವಿ ● ತಪ್ಪಿದ್ದಲ್ಲಿ ಕಾನೂನು ಹೋರಾಟ ಅನಿವಾರ್ಯವಾದರೆ ಅದಕ್ಕೂ ಸಿದ್ಧ ● ಈಗಾಗಲೇ ನ್ಯಾಯಾಲಯ ಹಿಂದೆ ಇದ್ದ ಹೆಸರು ಬದಲಿಸದಂತೆ ಆದೇಶಿಸಿದೆ

ಮೈಸೂರು, ಜ.2(ಎಸ್‌ಬಿಡಿ)– ಮೈಸೂರು–ಕೆಆರ್‌ಎಸ್ ಮಾರ್ಗಕ್ಕೆ ಪ್ರಿನ್ಸೆಸ್ ರಸ್ತೆ ಎಂಬ ಹೆಸರಿದೆ ಎಂದು ಸಂಸದ ಯದುವೀರ್ ಅವರು ನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರಿಗೆ ಪೂರಕ ದಾಖಲೆಗಳನ್ನು ನೀಡಿ, ತಮ್ಮ ನಿಲುವು ಬದಲಿಸಿಕೊಳ್ಳುವಂತೆ ಮನವಿ ಮಾಡಿದರು.

ಗುರುವಾರ ಸಂಜೆ ಕಾಡಾ ಸಂಕೀರ್ಣದಲ್ಲಿರುವ ತಮ್ಮ ಕಚೇರಿಯಿಂದ ಬಿಜೆಪಿ ಮುಖಂಡರೊಂದಿಗೆ ಕಾಲ್ನಡಿಗೆ ಮೂಲಕ ಪಾಲಿಕೆ ಕಚೇರಿಗೆ ಆಗಮಿಸಿದ ಯದುವೀರ್, ಜಯಚಾಮರಾಜೇಂದ್ರ ಸಭಾಂಗಣ (ಹಳೇ ಕೌನ್ಸಿಲ್ ಸಭಾಂಗಣ)ದಲ್ಲಿ ಪಾಲಿಕೆ ಆಯುಕ್ತರಿಗೆ ದಾಖಲೆಗಳ ಸಹಿತ ಜ್ಞಾಪಕ ಪತ್ರ ನೀಡಿದರು. ಪಾಲಿಕೆ ದಾಖಲೆಗಳಲ್ಲಿ ಪ್ರಿನ್ಸೆಸ್ ರಸ್ತೆ ಉಲ್ಲೇಖವಿಲ್ಲ ಎಂದು ಹೇಳಿಕೆ ನೀಡಿದ್ದರಿಂದ ಕೆಲವು ಐತಿಹಾಸಿಕ ಹಾಗೂ ಆಧುನಿಕ ದಾಖಲೆಗಳನ್ನು ನೀಡಿದ್ದೇವೆ. ಇವುಗಳನ್ನು ಪರಿಗಣಿಸಿ ನಿಮ್ಮ ನಿಲುವನ್ನು ಬದಲಿಸಿಕೊಳ್ಳುವಿರೆಂಬ ವಿಶ್ವಾಸವಿದೆ ಎಂದು ಇದೇ ವೇಳೆ ಹೇಳಿದರು.

ಹಲವು ದಾಖಲೆಗಳಲ್ಲಿ ಉಲ್ಲೇಖ: ಪಾಲಿಕೆ ಆಯುಕ್ತರ ಭೇಟಿ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಯದುವೀರ್, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರಿಗೆ ಮನವಿ ಪತ್ರ ಸಲ್ಲಿಸಿದ್ದೇವೆ. 1999ರ ನಂತರದ ಪಾಲಿಕೆ ದಾಖಲೆಗಳಲ್ಲಿ ಪ್ರಿನ್ಸೆಸ್ ರಸ್ತೆ ಉಲ್ಲೇಖವಿಲ್ಲ ಎಂದಿದ್ದರು. ಆ ಹಿನ್ನೆಲೆಯಲ್ಲಿ ‘ಪ್ರಿನ್ಸೆಸ್ ರಸ್ತೆ’ ಎಂಬ ಉಲ್ಲೇಖವಿರುವ ದಾಖಲೆಗಳು ಹಾಗೂ ಮಾಹಿತಿಯನ್ನು ಸಂಗ್ರಹಿಸಿ ಅವರಿಗೆ ನೀಡಿದ್ದೇವೆ. ರೈಲ್ವೆ ಮ್ಯೂಸಿಯಂ ವಿಳಾಸದಲ್ಲೂ ಈ ರಸ್ತೆಯ ಉಲ್ಲೇಖವಿದೆ. 1909ರ ದಶಕದಿಂದ ಈವರೆಗಿನ ಮ್ಯಾಪ್‌ಗಳಲ್ಲೂ ಪ್ರಿನ್ಸೆಸ್ ರಸ್ತೆ ಎಂದೇ ಗುರುತಿಸಲಾಗಿದೆ. ಆ ರಸ್ತೆಯ ನಿವಾಸಿಗಳ ಆಧಾರ್ ಕಾರ್ಡ್‌ನಲ್ಲೂ ಇದೇ ಹೆಸರಿದೆ. ಒಟ್ಟಾರೆ ಐತಿಹಾಸಿಕ ಹಾಗೂ ಆಧುನಿಕ ದಾಖಲೆಗಳನ್ನು ಆಯುಕ್ತರಿಗೆ ನೀಡಿದ್ದು, ಈ ದಾಖಲೆಗಳನ್ನು ಪರಿಗಣಿಸಿ ನಿಲುವನ್ನು ಬದಲಿಸಿಕೊಳ್ಳುವರೆಂಬ ವಿಶ್ವಾಸವಿದೆ. ಪುನರ್‌ಪರಿಶೀಲನೆ ಮಾಡುವುದಾಗಿ ಅವರೂ ತಿಳಿಸಿದ್ದಾರೆ. ಅಧಿಕಾರಿ ವರ್ಗದ ಮೇಲೆ ನಮಗೆ ಗೌರವವಿದೆ ಎಂದರು.

ಕಾನೂನು ಹೋರಾಟ: ಸಿದ್ದರಾಮಯ್ಯನವರೇ ಬೇಡ ಎಂದು ಹೇಳಿದರೂ ‘ಸಿದ್ದರಾಮಯ್ಯ ಆರೋಗ್ಯ ಮಾರ್ಗ’ ಎಂದು ನಾಮಕರಣ ಮಾಡುತ್ತೇವೆ ಎಂಬ ಕಾಂಗ್ರೆಸ್ ನಾಯಕರ ಹೇಳಿಕೆಗೆ ಪ್ರತಿಕ್ರಿಯಿಸಿ, ನಮ್ಮ ನಿಲುವನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇವೆ. ಪ್ರಿನ್ಸೆಸ್ ರಸ್ತೆ ಎಂದಿರುವ ದಾಖಲೆಗಳನ್ನು ನೀಡಿದ ನಂತರವೂ ಅವರು ಮುಂದುವರೆದರೆ ನಾವೂ ಕೂಡ ಕಾನೂನಾತ್ಮಕ ಹೋರಾಟ ಮುಂದುವರೆಸುತ್ತೇವೆ. ಈ ಹಿಂದೆ ವಾಣಿವಿಲಾಸ ರಸ್ತೆಯ ಪುನರ್ ನಾಮಕರಣ ಮಾಡಬೇಕೆಂದು ಹೋದಾಗಲೂ ನ್ಯಾಯಾಲಯದಿಂದ ಬಹಳ ಒಳ್ಳೆಯ ತೀರ್ಮಾನ ಬಂದಿತ್ತು. ಐತಿಹಾಸಿಕ ಹೆಸರುಗಳಲ್ಲಿ ಯಾವುದೇ ಬದಲಾವಣೆ ಮಾಡಬಾರದು ಎಂದು ಆದೇಶಿಸಲಾಗಿತ್ತು ಎಂದು ತಿಳಿಸಿದರು.

ಮೂಲವೇ ರಾಜಕೀಯ: ಮೈಸೂರು–ಕೆಆರ್‌ಎಸ್ ಮಾರ್ಗಕ್ಕೆ ‘ಸಿದ್ದರಾಮಯ್ಯ ಆರೋಗ್ಯ ಮಾರ್ಗ’ ಎಂಬ ನಾಮಕರಣ ಪ್ರಸ್ತಾಪ ರಾಜಕೀಯ ತಿರುವು ಪಡೆದಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಇದರ ಮೂಲವೇ ರಾಜಕೀಯ. ಎಲ್ಲಾ ವಿಷಯಗಳೂ ರಾಜಕೀಯವಾಗಿಯೇ ನಡೆದಿವೆ. ಹಾಗಾಗಿ ಇದು ರಾಜಕೀಯ ವಿಷಯವೇ ಆಗಿದೆ. ಮಹಾನಗರ ಪಾಲಿಕೆ ಚುನಾವಣೆ ನಡೆದಿಲ್ಲ. ಜನರ ಪ್ರತಿನಿಧಿ ಶಿಫಾರಸ್ಸು ಮಾಡಿದ ನಂತರ ಅಧಿಕಾರಿಗಳು ಕೌನ್ಸಿಲ್‌ಗೆ ತಂದು ಅನುಷ್ಠಾನ ಮಾಡುವುದು ಸರಿಯಾದ ಪ್ರಕ್ರಿಯೆ. ಆದರೆ ಜನಪ್ರತಿನಿಧಿಗಳು ಇಲ್ಲದಿರುವ ಸಂದರ್ಭದಲ್ಲಿ ಕೌನ್ಸಿಲ್ ತೀರ್ಮಾನ ಸಾಧ್ಯವೇ ಎನ್ನುವುದೂ ಪ್ರಶ್ನೆಯಾಗಿದೆ.

ಅವಲೋಕನ ಮಾಡಿಕೊಳ್ಳಲಿ: ಮುಡಾ, ವಾಲ್ಮೀಕಿ ನಿಗಮದ ಗಂಭೀರ ಹಗರಣಗಳು ಬಯಲಾಗಿವೆ. ಆರು ತಿಂಗಳಿಂದ ನಮ್ಮ ಹೋರಾಟ ನಡೆದಿದೆ. ಆ ಸಂಬಂಧ ತನಿಖೆಗಳು ನಡೆಯುತ್ತಿವೆ. ಮುಡಾ ಹಗರಣದಲ್ಲಿ ಮುಖ್ಯಮಂತ್ರಿಯವರ ಪಾತ್ರವಿದೆ. ಈ ಸಂದರ್ಭದಲ್ಲಿ ನಾಮಕರಣ ಮಾಡುವುದು ಸೂಕ್ತವೇ ಎಂದು ಕಾಂಗ್ರೆಸ್‌ನವರೇ ತೀರ್ಮಾನ ಮಾಡಬೇಕು. ತನಿಖೆ ನಡೆಯುತ್ತಿರುವುದರಿಂದ ಈ ಬಗ್ಗೆ ಅಧಿಕಾರಿಗಳೂ ಚಿಂತನೆ ನಡೆಸಬೇಕು ಎಂದು ಹೇಳಿದರು.

ನಾನು ಜನರಿಂದ ಆಯ್ಕೆಯಾದವನು: ತಮ್ಮನ್ನು ಕಾಂಗ್ರೆಸ್ ವಕ್ತಾರರೊಬ್ಬರು ಒರಿಜಿನಲ್ ಮಹಾರಾಜ ಅಲ್ಲ ಎಂದು ಟೀಕಿಸಿದ್ದರ ಬಗ್ಗೆ ಮಾತನಾಡಿ, ವೈಯಕ್ತಿಕ ಟೀಕೆಗಳು ಹಾಗೂ ಅವಮಾನಗಳಿಗೆ ಪ್ರತಿಕ್ರಿಯೆ ನೀಡುವ ಅವಶ್ಯಕತೆ ಇಲ್ಲ. ಆಧುನಿಕ ಭಾರತದಲ್ಲಿ ಇಂತಹ ಹೇಳಿಕೆಗಳಿಂದ ಯಾವುದೇ ಉಪಯೋಗವಿಲ್ಲ. ನಾವೂ ಕೂಡ ಜನರ ಮತದಿಂದ ಆಯ್ಕೆಯಾಗಿ ಈ ಸ್ಥಾನದಲ್ಲಿರುವುದು. ಅದಕ್ಕೆ ಗೌರವ ಕೊಡಬೇಕು. ಅದಕ್ಕಾಗಿಯೇ ನಾನೂ ಜನರ ಪರವಾಗಿ ಕೆಲಸ ಮಾಡುತ್ತಿರುವುದು ಎಂದು ಎದಿರೇಟು ನೀಡಿದರು.

ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮಾಜಿ ಕಾರ್ಪೊರೇಟರ್ ಸಾತ್ವಿಕ್ ಸಂದೇಶ್ ಸ್ವಾಮಿ, ಬಿಜೆಪಿ ಮುಖಂಡರಾದ ಬಿ.ಎಂ.ರಘು, ರಾಕೇಶ್‌ಗೌಡ, ಮಹೇಶ್ ರಾಜೇ ಅರಸ್ ಮತ್ತಿತರರಿದ್ದರು.



ಸಂಸದ ಯದುವೀರ್ ಮೈಸೂರು–ಕೆಆರ್‌ಎಸ್ ಮಾರ್ಗಕ್ಕೆ ಪ್ರಿನ್ಸೆಸ್ ರಸ್ತೆಯೆಂಬ ಹೆಸರಿತ್ತು ಎಂದು ದಾಖಲೆಗಳ ಸಹಿತ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್‌ಗೆ ಮನವಿ ಸಲ್ಲಿಸಿದರು. ಮಾಜಿ ಮೇಯರ್ ಸಂದೇಶ್‌ಸ್ವಾಮಿ ಸೇರಿದಂತೆ ಬಿಜೆಪಿ ಮುಖಂಡರು ಹಾಜರಿದ್ದರು.

ಬೆಲೆ ಏರಿಕೆ ಗ್ಯಾರಂಟಿ ಎಫೆಕ್ಟ್

ಮೈಸೂರು: ಬೆಲೆ ಏರಿಕೆ ಗ್ಯಾರಂಟಿ ಯೋಜನೆಗಳ ಪರಿಣಾಮ ಎಂದು ಸಂಸದ ಯದುವೀರ್ ಹೇಳಿದರು. ನಗರ ಪಾಲಿಕೆ ಬಳಿ ಬಸ್ ಪ್ರಯಾಣ ದರ ಏರಿಕೆ ಪ್ರಸ್ತಾಪದ ಬಗ್ಗೆ ಪ್ರತಿಕ್ರಿಯಿಸಿ, ಶೇ.15ರಷ್ಟು ದರ ಏರಿಕೆಗೆ ತೀರ್ಮಾನಿಸಲಾಗಿದೆ ಎಂದು ಮಾಧ್ಯಮಗಳಿಂದ ತಿಳಿದಿದ್ದೇನೆ. ಆದರೆ ಕ್ಯಾಬಿನೆಟ್ ಏನು ತೀರ್ಮಾನಿಸಿದೆ ಎಂದು ಅಧಿಕೃತವಾಗಿ ಓದಿಲ್ಲ. ಹಾಲು, ಇಂಧನ ಸೇರಿದಂತೆ ಅನೇಕ ಉತ್ಪನ್ನಗಳ ಬೆಲೆ ಏರಿಕೆಯಾಗುತ್ತಿರುವುದು ಖಂಡನೀಯ. ಇಂತಹ ಆರ್ಥಿಕ ಪರಿಸ್ಥಿತಿಯಲ್ಲಿ ಜನರಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡುವುದು ರಾಜ್ಯ ಸರ್ಕಾರದ ಕರ್ತವ್ಯ. ಬೆಲೆ ಏರಿಕೆಗೆ ಗ್ಯಾರಂಟಿ ಯೋಜನೆಗಳು ಎನ್ನುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಗ್ಯಾರಂಟಿಗಳನ್ನು ಮುಂದುವರೆಸಬೇಕಾದರೆ ಹೇಗಾದರೂ ಹಣ ಹೊಂದಿಸಬೇಕಾಗುತ್ತದೆ. ಚುನಾವಣೆ ಸಮಯದಿಂದಲೇ ಇದನ್ನೇ ಹೇಳುತ್ತಿದ್ದೇವೆ. ಈಗ ಅದರ ಪರಿಣಾಮ ಎಲ್ಲರಿಗೂ ಅನುಭವವಾಗುತ್ತಿದೆ ಎಂದರು.

ಎಲ್ಲದಕ್ಕೂ ದಾಖಲೆಗಳಿವೆಯೇ?

ಮನವಿ ಸಲ್ಲಿಕೆ ವೇಳೆ ಮಾತನಾಡಿದ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಹಲವು ವೃತ್ತ ಹಾಗೂ ರಸ್ತೆಗಳಿಗೆ ಆರೇಳು ವರ್ಷಗಳಿಂದ ಚಾಲ್ತಿಯಲ್ಲಿರುವ ಹೆಸರಿಗೆ ಪೂರಕವಾದ ದಾಖಲೆಗಳಿಲ್ಲ. ಪಾಲಿಕೆ ಕಚೇರಿಯ ಜಯಚಾಮರಾಜೇಂದ್ರ ಸಭಾಂಗಣ ಎಂದು ಫಲಕ ಹಾಕಿದ್ದೇವೆ. ಅದಕ್ಕೆ ದಾಖಲೆ ಇದೆಯೇ?. ನಾನು ಮೇಯರ್ ಆಗಿದ್ದಾಗ 90 ಸ್ಥಳಗಳಿಗೆ ನಾಮಕರಣ ಮಾಡಲಾಗಿತ್ತು. ಆದರೆ ಮೈಸೂರು–ಬೆಂಗಳೂರು ಹೆದ್ದಾರಿ ರಿಂಗ್‌ರಸ್ತೆ ಜಂಕ್ಷನ್‌ಗೆ ಕೆಂಪೇಗೌಡರ ವೃತ್ತ ಎಂಬ ಹೆಸರನ್ನು ಇಂದಿಗೂ ಬಳಕೆ ಮಾಡುತ್ತಿಲ್ಲ. ಹಿಂದಿನಿಂದ ಚಾಲ್ತಿಯಲ್ಲಿರುವ ಹೆಸರು ಬದಲಿಸಬಾರದು ಎಂದು ನ್ಯಾಯಾಲಯವೇ ಸೂಚಿಸಿದೆ. ಅಧಿಕಾರಿಗಳು ಮೈಸೂರಿನ ಪರಂಪರೆ ಹಾಗೂ ಇತಿಹಾಸದ ನೆಲೆಗಟ್ಟಿನಲ್ಲಿ ಗೊಂದಲ ನಿರ್ಮಾಣವಾಗದಂತೆ ಕಾರ್ಯ ನಿರ್ವಹಿಸಬೇಕು ಎಂದರು.


ಕೆರೆಗೆ ಉರುಳಿದ ಕಾರು: ಮೈಸೂರು ಯುವಕ ಸೇರಿ ಇಬ್ಬರು ಸಾವು

ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾ. ಕುಂತೂರು ಬಳಿ ಮುಂಜಾನೆ 2 ಗಂಟೆ ವೇಳೆಯಲ್ಲಿ ದುರ್ಘಟನೆ

ಕೊಳ್ಳೇಗಾಲ ಜ.2(ಆರ್‌ಕೆ, ಎಸ್‌ಎಸ್)– ಚಾಲಕನ ನಿಯಂತ್ರಣ ಕಳೆದುಕೊಂಡು ಕಾರು ಕೆರೆಗೆ ಉರುಳಿ ಬಿದ್ದ ಪರಿಣಾಮ ಮೈಸೂರು ಯುವಕ ಸೇರಿ ಇಬ್ಬರು ಸಾವನ್ನಪ್ಪಿರುವ ಘಟನೆ ಚಾಮರಾಜನಗರ ಜಿಲ್ಲೆ, ಕೊಳ್ಳೆಗಾಲ ತಾಲೂಕು ಕುಂತೂರು ಗ್ರಾಮದ ಬಳಿ ಇಂದು ಮುಂಜಾನೆ ಸಂಭವಿಸಿದೆ.

ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಹಾಗೂ ಖಾಸಗಿ ಕಂಪನಿಯ ಉದ್ಯೋಗಿ ಊರ್ಜಿತ್(25) ಮತ್ತು ಚಾಮರಾಜನಗರ ಬಳಿಯ ಗಣಗನೂರು ನಿವಾಸಿ ಹಾಗೂ ಖಾಸಗಿ ಕಂಪನಿಯ ಉದ್ಯೋಗಿ ಶುಭ (21) ಸಾವನ್ನಪ್ಪಿದವರು. ಈ ಸಂದರ್ಭ ಮೈಸೂರಿನ ವಿದ್ಯಾರಣ್ಯಪುರಂ ವಾಸಿ ಹಾಗೂ ಹೊಟೇಲ್‌ವೊಂದರ ನೌಕರ ಪುನೀತ್ (21) ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಚಿನ್ನದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಊರ್ಜಿತ್, ಪಿಜಿಯಲ್ಲಿ ವಾಸಿಸುತ್ತಿದ್ದ ಟೆಲಿಕಾಲರ್ ಶುಭ ಹಾಗೂ ಪುನೀತ್ ಟೊಯೋಟಾ ಕಾರಿನಲ್ಲಿ ಮೈಸೂರಿನಿಂದ ಮಲೆಮಹದೇಶ್ವರಬೆಟ್ಟಕ್ಕೆ ಹೋಗುತ್ತಿದ್ದಾಗ ತಿ.ನರಸೀಪುರ–ಕೊಳ್ಳೇಗಾಲ ರಸ್ತೆಯಲ್ಲಿನ ಕುಂತೂರು ಕೆರೆಗೆ ಮುಂಜಾನೆ 2 ಗಂಟೆಯಲ್ಲಿ ಕಾರು ಉರುಳಿ ಬಿದ್ದಿದೆ.

ಘಟನೆಯಲ್ಲಿ ಊರ್ಜಿತ್ ಮತ್ತು ಶುಭ ನೀರಲ್ಲಿ ಮುಳುಗಿ ಸಾವನ್ನಪ್ಪಿದರೆ, ಪುನೀತ್ ಕಾರಿನ ಗ್ಲಾಸ್ ಒಡೆದು ಕಾರಿನ ಮೇಲೆ ನಿಂತು ಕೂಗಿಕೊಂಡಿದ್ದಾನೆ. ಆ ಮಾರ್ಗ ಬಂದ ಆಂಬುಲೆನ್ಸ್ ಚಾಲಕ ಇದನ್ನು ನೋಡಿ ವಾಹನ ನಿಲ್ಲಿಸಿದ್ದಾರೆ. ನಂತರ 112ಕ್ಕೆ ಕರೆ ಮಾಡಿದ ಆಂಬುಲೆನ್ಸ್ ಚಾಲಕ ಅಗ್ನಿಶಾಮಕ ದಳ ಹಾಗೂ ಪೊಲೀಸ್ ಸಿಬ್ಬಂದಿಯೊಂದಿಗೆ ಪುನೀತ್‌ನನ್ನು ರಕ್ಷಿಸಿದ್ದಾರೆ. ನಂತರ ಕಾರ್ಯಾಚರಣೆ ನಡೆಸಿ ಮೃತದೇಹಗಳು ಮತ್ತು ಕಾರನ್ನು ಕೆರೆಯಿಂದ ಹೊರತೆಗೆದಿದ್ದಾರೆ. ಇನ್ಸ್‌ಪೆಕ್ಟರ್ ಶ್ರೀಕಾಂತ್ ಸ್ಥಳ ಪರಿಶೀಲಿಸಿ, ಕೊಳ್ಳೇಗಾಲ ಸಾರ್ವಜನಿಕ ಆಸ್ಪತ್ರೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹಗಳನ್ನು ವಾರಿಸುದಾರರಿಗೆ ಒಪ್ಪಿಸಿದರು.



ಕೆರೆಯಿಂದ ಮೃತ ದೇಹಗಳನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಹೊರತೆಗೆಯುತ್ತಿರುವುದು(ಎಡಚಿತ್ರ) ಕಾರನ್ನು ಕ್ರೇನ್ ಮೂಲಕ ಮೇಲೆತ್ತುತ್ತಿರುವುದನ್ನು (ಮಧ್ಯದ ಚಿತ್ರ) ಅದೃಷ್ಟವಶಾತ್ ಪಾರಾದ ಪುನೀತ್‌ನ್ನು ಬಲಚಿತ್ರದಲ್ಲಿ ಕಾಣಬಹುದು.


ಜ.5ರಿಂದ ಶ್ರವಣದೋಷವುಳ್ಳವರ ರಾಷ್ಟ್ರೀಯ ಚೆಸ್ ಪಂದ್ಯಾವಳಿ

ಮೈಸೂರು,ಜ.2(ಎಂಟಿವೈ)– ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಜ.5ರಿಂದ 8ರವರೆಗೆ ಇದೇ ಮೊದಲ ಬಾರಿಗೆ ಶ್ರವಣದೋಷವುಳ್ಳವರಿಗಾಗಿ 25ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್ ಪಂದ್ಯಾವಳಿಗೆ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಕಿವುಡರ ಸಂಸ್ಥೆಯ ಅಧ್ಯಕ್ಷ ಎಸ್. ಮೂರ್ತಿ ತಿಳಿಸಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 25ನೇ ರಾಷ್ಟ್ರೀಯ ಚೆಸ್ ಪಂದ್ಯಾವಳಿಯಲ್ಲಿ 22 ರಾಜ್ಯಗಳಿಂದ ಚೆಸ್ ಪಟುಗಳು 180 ಪಟುಗಳು ಪಾಲ್ಗೊಳ್ಳಲಿದ್ದಾರೆ. 18 ವರ್ಷ ಮೇಲ್ಪಟ್ಟ ಪುರುಷರು, ಮಹಿಳೆಯರು, 18 ವರ್ಷ ಕೆಳಗಿನ ಬಾಲಕ, ಬಾಲಕಿಯರಿಗಾಗಿ ಪ್ರತ್ಯೇಕ ವಿಭಾಗಗಳಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ. ಪಂದ್ಯ ವಿಜೇತರಿಗೆ ಟ್ರೋಫಿ ಹಾಗೂ ಎರಡು ಲಕ್ಷ ರೂ. ನಗದು ಬಹುಮಾನ ವಿತರಿಸಲಾಗುತ್ತದೆ. ಈ ಪಂದ್ಯಾವಳಿಗೆ ಲಯನ್ಸ್ ಕ್ಲಬ್ ಜಿಲ್ಲೆ 317ಜಿ ಪ್ರಾಂತೀಯ –1ರ ಅಧ್ಯಕ್ಷ ಲ.ವಿ.ಸಿ.ರವಿಕುಮಾರ್ ಚೆಸ್ ಪಂದ್ಯಾವಳಿಗೆ 5 ಲಕ್ಷ ರೂ. ನೆರವು ನೀಡಿದ್ದಾರೆ ಎಂದರು. ಚೆಸ್ ಪಂದ್ಯಾವಳಿಯ ಅಂಗವಾಗಿ ಜ.4ರಂದು ರಾಹುಲ್ ಕನ್ವೆನ್ಷನ್ ಹಾಲ್‌ನಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ವಿಶೇಷ ಚೇತನರಿಗಾಗಿ ಆಯೋಜಿಸಿರುವ ಈ ಮೇಳದಲ್ಲಿ 300ಕ್ಕೂ ಹೆಚ್ಚು ಮಂದಿ ಉದ್ಯೋಗಾಕಾಂಕ್ಷಿಗಳು ಹೆಸರು ನೊಂದಾಯಿಸಿಕೊಂಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂಖ್ಯೆ 9448315773 ಸಂಪರ್ಕಿಸುವಂತೆ ಕೋರಿದರು.

ಸಿದ್ದರಾಮಯ್ಯನವರೇ ಎಚ್ಚರ..., ಈಗಲಾದರೂ ಎಚ್ಚೆತ್ತುಕೊಳ್ಳಿ

ಮುಡಾ ಪ್ರಕರಣದಲ್ಲಿ ನಿಮ್ಮ ಹೆಸರು ಕೆಡಿಸಿದವರು ರಸ್ತೆಗೆ ನಾಮಕರಣ ವಿಷಯದಲ್ಲೂ ನಿಮ್ಮ ಹೆಸರಿಗೆ ಕಳಂಕ ತರುತ್ತಿದ್ದಾರೆ; ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಎಚ್ಚರಿಕೆ

● ಭಟ್ಟಂಗಿಗಳಿಂದ ದೂರವಿರಿ; ರಸ್ತೆ ಹೆಸರಿಗಾಗಿ ನಿಮ್ಮ ಹೆಸರು ಕೆಡಿಸಿಕೊಳ್ಳಬೇಡಿ
● ಕೇಂದ್ರ, ರಾಜ್ಯ ಸರ್ಕಾರದ ದಾಖಲಾತಿಯಲ್ಲಿ ‘ಪ್ರಿನ್ಸೆಸ್’ ಹೆಸರಿದೆ; ಪಾಲಿಕೆ ಆಯುಕ್ತರೂ ಚಮಚಾಗಿರಿ ಮಾಡ್ತಿದ್ದಾರೆ! ● ರಾಜ್ಯದ ಹಣಕಾಸು ಸ್ಥಿತಿ ಬಗ್ಗೆ ಶ್ವೇತ ಪತ್ರ ಹೊರಡಿಸಿ



ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್

ಮೈಸೂರು, ಜ.2(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಎಚ್ಚರ. ಮುಡಾ ಪ್ರಕರಣದಲ್ಲಿ ನಿಮ್ಮ ಹೆಸರು ಕೆಡಿಸಿದ ಭಟ್ಟಂಗಿಗಳು ಈಗ ಕೆಆರ್‌ಎಸ್ ರಸ್ತೆಗೆ ನಿಮ್ಮ ಹೆಸರು ನಾಮಕರಣ ಮಾಡಲು ಮುಂದಾಗಿ ನಿಮಗೆ ಕಳಂಕ ತರುತ್ತಿದ್ದಾರೆ. ನಿಮ್ಮ ಸ್ನೇಹಿತನಾಗಿ ಹೇಳುತ್ತಿರುವೆ ಈಗಲಾದರೂ ಎಚ್ಚೆತ್ತುಕೊಳ್ಳಿ.

ಇದು ಸಿದ್ದರಾಮಯ್ಯನವರಿಗೆ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರ ಗಂಭೀರ ಎಚ್ಚರಿಕೆ. ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 40 ವರ್ಷಗಳ ರಾಜಕೀಯ ಅನುಭವ ಇರುವ ನೀವು ಹೊಗಳು ಭಟ್ಟರ ಮಾತಿಗೆ ಮನ್ನಣೆ ನೀಡ ಬೇಡಿ ಎಂದು ಕಿವಿಮಾತು ಹೇಳಿದರು.

ಮುಡಾದಲ್ಲಿ ಶೇ.50:50 ಅನುಪಾತದಲ್ಲಿ ಹಗರಣ ನಡೆಸಿ ನಿಮ್ಮ ಹೆಸರು ಕೆಡಿಸಿದ ವ್ಯಕ್ತಿಗಳೇ ಈಗಲೂ ನಿಮ್ಮ ಹೆಸರಿಗೆ ಕಳಂಕ ತರಲು ಮುಂದಾಗಿದ್ದಾರೆ. ಮೈಸೂರು ರಾಜವಂಶಸ್ಥರ ಹೆಸರು ತೆಗೆದು ಅದಕ್ಕೆ ನಿಮ್ಮ ಹೆಸರು ಇಡಲು ಮುಂದಾಗಿದ್ದಾರೆ. ನಿಮ್ಮ ಹಿಂದೆ, ಮುಂದೆ ಓಡಾಡುವ ಶಿಷ್ಯರು ಹಾಗೂ ಭಟ್ಟಂಗಿಗಳ ಬಗ್ಗೆ ನೀವು ಎಚ್ಚರಿಕೆಯಿಂದ ಇರಬೇಕು ಎಂದು ವಿಶ್ವನಾಥ್ ಕಿವಿಮಾತು ಹೇಳಿದರು. ವಿಧಾನ ಸೌಧ ಕಟ್ಟಿಸಿದ ಕೆಂಗಲ್ ಹನುಮಂತಯ್ಯನವರು ಒಂದು ದಿನ ಕೂಡ ಅಲ್ಲಿ ಕೂರಲು ಸಾಧ್ಯವಾಗಲಿಲ್ಲ. ನಾನು ಬಡವರಿಗೆ ಅಕ್ಕಿ ಕೊಟ್ಟೆ ಎನ್ನುತ್ತೀರಾ. ಆದರೆ ದಿವಂಗತ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಅವರು ಅಕ್ಕಿ ಬದಲು ಅಕ್ಕಿ ಬೆಳೆಯುವ ಭೂಮಿಯನ್ನೆ ನೀಡಿದರು. ಯಕಶ್ಚಿತ್, ಒಂದು ರಸ್ತೆಗೆ ನಿಮ್ಮ ಹೆಸರಿಡುವ ವಿಚಾರವಾಗಿ ವ್ಯಕ್ತಿತ್ವಕ್ಕೆ ಧಕ್ಕೆ ತಂದುಕೊಳ್ಳಬೇಡಿ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರೆ, ಮಾದರಿ ರಾಜಕಾರಣಿಯಾಗಿ ಸಾಗಿ. ಅದು ಬಿಟ್ಟು ಕೇವಲ ಒಂದು ರಸ್ತೆಗೆ ಹೆಸರು ನಾಮಕರಣ ಮಾಡುವುದನ್ನು ನೋಡಿಕೊಂಡು ಏನು ಮಾಡುತ್ತೀರಾ. ರಾಜ್ಯ ಹಾಗೂ ದೇಶಕ್ಕೆ ಹಲವು ಸ್ಮರಣೀಯ ಕೊಡುಗೆ ನೀಡಿದ ಮೈಸೂರು ರಾಜವಂಶಸ್ಥರ ಹೆಸರು ತೆಗೆದು ಅಲ್ಲಿ ನಿಮ್ಮ ಹೆಸರು ಹಾಕಿಸಿಕೊಳ್ಳುವುದು ನಿಮ್ಮ ಘನತೆಗೆ ಹೊಂದುವಂತದ್ದಲ್ಲ ಎಂದು ಹೇಳಿದರು.

ಪ್ರಿನ್ಸೆಸ್ ರಸ್ತೆ ಉಲ್ಲೇಖದ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಲವು ದಾಖಲಾತಿಗಳು ಸಾರಿ ಸಾರಿ ಹೇಳುತ್ತವೆ. ಹೀಗಿರುವಾಗ ಪ್ರಿನ್ಸೆಸ್ ರಸ್ತೆ ಎಂಬುದನ್ನು ತೆಗೆದು ಅದಕ್ಕೆ ನಿಮ್ಮ ಹೆಸರು ಇಟ್ಟುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದ ವಿಶ್ವನಾಥ್, ಇದು ನಿಮಗೆ ತಕ್ಕದಾದ ಧೋರಣೆಯಲ್ಲ ಎಂದು ಅಭಿಪ್ರಾಯಪಟ್ಟರು.

ಆಯುಕ್ತರ ಚಮಚಾಗಿರಿ: ರಾಜಕಾರಣಿಗಳು ಚಮಚಾಗಿರಿ ಮಾಡುತ್ತಾರೆ. ಆದರೆ ‘ಪ್ರಿನ್ಸೆಸ್ ರಸ್ತೆ’ ಎಂಬ ಉಲ್ಲೇಖವಿಲ್ಲ ಎಂದು ಹೇಳುತ್ತಿರುವ ಮೈಸೂರು ನಗರಪಾಲಿಕೆ ಆಯುಕ್ತರು ಕೂಡ ಈಗ ಚಮಚಗಿರಿ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದ ಹಣಕಾಸು ಪರಿಸ್ಥಿತಿ ಅಧೋಗತಿಗೆ ಹೋಗಿದೆ. ಶಕ್ತಿ ಯೋಜನೆಯ ನಷ್ಟದ ಹಿನ್ನೆಲೆಯಲ್ಲಿ ಎರಡು ಸಾವಿರ ಕೋಟಿ ಸಾಲ ಪಡೆಯಲು ಕೆಎಸ್‌ಆರ್ ಟಿಸಿಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ. ಹಾಗಾಗಿ ಶೇ.18ರ ಬಡ್ಡಿದರದಲ್ಲಿ ಸಾಲ ಪಡೆಯಲು ಕೆಎಸ್ ಆರ್‌ಟಿಸಿ ಮುಂದಾಗಿದೆ. ಇದು ರಾಜ್ಯದ ಹಣಕಾಸು ಪರಿಸ್ಥಿತಿಗೆ ಸ್ಪಷ್ಟ ನಿದರ್ಶನ ಎಂದರು.

ರಾಜ್ಯದ ಹಣಕಾಸು ಪರಿಸ್ಥಿತಿ ಹದಗೆಟ್ಟಿರುವ ಈ ಸಂದರ್ಭದಲ್ಲಿ ಸಿದ್ದರಾಮಯ್ಯ 16 ನೇ ಬಜೆಟ್ ಮಂಡಿಸುತ್ತಿದ್ದಾರೆ. ಆರ್ಥಿಕ ನೀತಿಯಲ್ಲಿ ಯಾವುದೇ ಸುಧಾರಣೆ ತರದೆ ಆಯವ್ಯಯ ಮಂಡಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಜ್ಯದ ಜನತೆಗೆ ಹಣಕಾಸು ಪರಿಸ್ಥಿತಿ ತಿಳಿಯಬೇಕಿದೆ. ಈ ಹಿನ್ನೆಲೆಯಲ್ಲಿ ಯಾವುದೇ ವಿಚಾರವನ್ನು ಮುಚ್ಚಿಡದೆ ಶ್ವೇತ ಪತ್ರ ಹೊರಡಿಸಿ. ಆರ್ಥಿಕ ಪರಿಸ್ಥಿತಿಯ ಸತ್ಯಾಂಶ ತಿಳಿಸಿ ಎಂದು ಆಗ್ರಹಿಸಿದರು.

ಇಬ್ಬರು ಅಧಿಕಾರಿಗಳ ಜಗಳ ನಿಲ್ಲಿಸಲಾಗುತ್ತಿಲ್ಲ: ಸಿದ್ದರಾಮಯ್ಯ ಸರ್ಕಾರದಲ್ಲಿ ಅಧಿಕಾರಿಗಳು ಸ್ವೇಚ್ಛೆಯಾಗಿ ವರ್ತಿಸುತ್ತಿದ್ದಾರೆ. ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಐಪಿಎಸ್ ಅಧಿಕಾರಿ ರೂಪ ನಡುವೆ ಬೀದಿ ಕಾಳಗ ನಡೆಯುತ್ತಿದೆ. ಇವರಿಬ್ಬರ ಕದನ ನಿಲ್ಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಶಕ್ತಿ ಇಲ್ಲದಂತಾಗಿದೆ. ರಾಜ್ಯದ ಆಡಳಿತದಲ್ಲಿ ಮುಖ್ಯಮಂತ್ರಿಗೆ ಪರಮೋಚ್ಚ ಅಧಿಕಾರವಿದ್ದು, ಇಬ್ಬರು ಅಧಿಕಾರಿಗಳನ್ನು ದೆಹಲಿಯ ಕೇಂದ್ರ ಸರ್ಕಾರದ ಸೇವೆಗೆ ವಾಪಾಸು ಕಳುಹಿಸುವ ಅಧಿಕಾರವಿದೆ. ಆದರೆ ಸಿದ್ದರಾಮಯ್ಯ ಇದನ್ನು ಬಳಸದೆ ಮೌನ ವಹಿಸಿದ್ದಾರೆ ಎಂದು ಆರೋಪಿಸಿದರು.

ಅಲಮೇಲಮ್ಮನ ಶಾಪ ನೆನಪಿಸಿದ ವಿಶ್ವನಾಥ್

ಸಂಸದ ಯದುವೀರ್ ಬಗ್ಗೆ ಕಾಂಗ್ರೆಸ್ ನಾಯಕರ ಹೇಳಿಕೆ ಖಂಡಿಸಿರುವ ವಿಶ್ವನಾಥ್, ಮೈಸೂರು ರಾಜರಿಗೆ ಅಲಮೇಲಮ್ಮ ನೀಡಿರುವ ಶಾಪ ನೆನಪಿಸಿದ್ದಾರೆ. ತಲಕಾಡು ಮರಳಾಗಿ, ಮಾಲಂಗಿ ಮಡುವಾಗಿ, ಮೈಸೂರು ರಾಜರಿಗೆ ಮಕ್ಕಳಾಗದಿರಲಿ ಎಂದು ಮೈಸೂರು ರಾಜರಿಗೆ ಅಲಮೇಲಮ್ಮನ ಶಾಪವಿದೆ. ಈ ಹಿನ್ನೆಲೆಯಲ್ಲಿ ಯದುವೀರ್ ಅವರನ್ನು ದತ್ತು ಪಡೆಯಲಾಗಿದೆ. ಅದೂ ಅಲ್ಲದೆ ಯದುವೀರ್ ಮೈಸೂರು ರಾಜ ವಂಶಸ್ಥರಲ್ಲಿ ಒಬ್ಬರಾಗಿದ್ದಾರೆ. ಇದನ್ನು ತಿಳಿಯದ ಸಿದ್ದರಾಮಯ್ಯ ಬೆಂಬಲಿಗರು ಯದುವೀರ್ ಒರಿಜನಲ್ ರಾಜವಂಶಸ್ಥರಲ್ಲ ಎಂದು ಹೇಳಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮೈಸೂರು ರಾಜವಂಶಸ್ಥರ ಬಗ್ಗೆ ಮಾತನಾಡಿದರೆ ನೀವು ಕೆಳಮಟ್ಟಕ್ಕೆ ಹೋಗುತ್ತೀರಾ. ಇಂತಹ ಹೇಳಿಕೆಗಳಿಂದ ಸಿದ್ದರಾಮಯ್ಯ ಹೆಸರು ಹಾಳು ಮಾಡಬೇಡಿ ಎಂದು ವಿಶ್ವನಾಥ್ ಕಾಂಗ್ರೆಸ್ ನಾಯಕರಿಗೆ ಸಲಹೆ ನೀಡಿದರು.

ನಕ್ಕರೆ ಅದೇ ಸ್ವರ್ಗ

ರಂಗ : ನ್ಯೂಸ್ ನೋಡಿದ್ಯೇನೋ, ಹೆದ್ದಾರೀಲಿ ಬಾರ್ ಬೇಡ ಅಂತ ಕೋರ್ಟ್ ಹೇಳಿದೆ.

ಗಂಗ : ಓಹ್, ಹಾಗಾದ್ರೆ, ನಮ್ಮೂರಿಗೆ ಹೆದ್ದಾರಿನೇ ಬೇಡ ಬಿಡು!

ಮೈಸೂರು ಮಿತ್ರ

ಶುಕ್ರವಾರ, 3 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಸಮಸ್ಯೆ ಕಿರಿದಾಗಿರುವಾಗಲೇ ಚಿವುಟಿ ಹಾಕಬೇಕು. ಅದು ಬೆಳೆದು ನಿಂತರೆ ನಾವು ಕುಬ್ಜರಾಗಿ ಬಿಡುತ್ತೇವೆ. ಆಮೇಲೆ ಸಮಸ್ಯೆ ಹೇಳಿದಂತೆ ಕೇಳಿ ತಲೆಬಾಗಿ ನಡೆಯಬೇಕಷ್ಟೆ!


ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇತರರ ಕಣ್ಣಿನ ಕಸ ಕಾಣುವುದು, ತನ್ನ ಕಣ್ಣಿನ ಕಸ ಕಾಣುವುದಿಲ್ಲ.

ನಿಮ್ಮ ಪತ್ರಗಳು

ಹಾರ್ಡಿಂಜ್ ವೃತ್ತದಿಂದ ವರುಣ ಕೆರೆವರೆಗಿನ ರಸ್ತೆಗೆ ಸಿದ್ದರಾಮಯ್ಯರ ಹೆಸರಿಡಬಹುದು

ಮಾನ್ಯರೆ,


ಸಿದ್ದರಾಮಯ್ಯ


ಸ.ರ.ಸುದರ್ಶನ

ಸಿದ್ದರಾಮಯ್ಯನವರು ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಮೈಸೂರಿನಲ್ಲಿ ಜಯದೇವ ಆಸ್ಪತ್ರೆಗೆ ಮಂಜೂರಾತಿ ನೀಡಿ, ತಮ್ಮ ಅವಧಿ ಒಳಗೆ ಪೂರ್ಣಗೊಳಿಸಿದರು ಎಂದು ನನ್ನ ನೆನಪು.

ಇದು ಮೈಸೂರಿಗರು ಯಾವತ್ತೂ ನೆನಪಿಡಬೇಕಾದ ಒಂದು ಕೊಡುಗೆ. ಆದ್ದರಿಂದ ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂಬ ಹೆಸರಿಡಬೇಕೆಂಬ ಶಾಸಕ ಹರೀಶ್‌ಗೌಡರ ಸಲಹೆ ಉಚಿತವಾದುದೇ ಆಗಿದೆ.

ಕೆಆರ್‌ಎಸ್ ರಸ್ತೆಗೆ ಅಧಿಕೃತವಾಗಿ ಪ್ರಿನ್ಸೆಸ್ ರಸ್ತೆ ಎಂದು ನಾಮಕರಣವಾಗಿದೆಯೋ, ಇಲ್ಲವೋ ತಿಳಿಯದು. ಆದರೆ ನಾನು ಬಾಲಕನಾಗಿದ್ದಾಗ ಕ್ಷಯರೋಗ ಆಸ್ಪತ್ರೆಯಲ್ಲಿದ್ದ ನನ್ನ ತಾಯಿಗೆ ಸೈಕಲ್‌ನಲ್ಲಿ ಹೋಗಿ ಊಟ ಕೊಟ್ಟು ಬರುತ್ತಿದ್ದೆ. ಆಗ ದಾರಿಯಲ್ಲಿ ಎಲ್ಲೋ 'ಪ್ರಿನ್ಸೆಸ್ ರೋಡ್' ಎಂಬ ಕಲ್ಲಿನ ಫಲಕವನ್ನು ನೋಡಿದ್ದು ನೆನಪು. ವಿವಾದಾಸ್ಪದವಾಗಿ ಒಂದು ಹೆಸರನ್ನಿಡುವ ಬದಲು ಸರ್ವ ಸಮ್ಮತಿಯಿಂದ ಇಡುವುದು ಒಳ್ಳೆಯದು.

ಮೈಸೂರು ಕಡೆಯ ನೂರಾರು ರೈತರ ಬದುಕನ್ನು ಹಸನುಗೊಳಿಸಿದ ವರುಣ ನಾಲೆಯ ನಿರ್ಮಾಣಕ್ಕೆ ದಿವಂಗತ ಡಿ.ದೇವರಾಜ ಅರಸು ದಾರಿ ಮಾಡಿಕೊಟ್ಟರಾದರೂ ಅದು ಪೂರ್ಣಗೊಂಡು ನಾಲೆಯಲ್ಲಿ ನೀರು ಹರಿದು ಬರಲು ಕಾರಣರಾದವರು ಸಿದ್ದರಾಮಯ್ಯನವರು. (ಅಲ್ಲಿ ನೀರು ಹರಿದಾಗ ಸೋತರು ಎಂಬುದು ಬೇರೆ ವಿಷಯ) ಅದೊಂದು ಐತಿಹಾಸಿಕ ಸಂಗತಿ.

ಇದೀಗ ಟಿ.ನರಸೀಪುರದ ರಸ್ತೆ ವರುಣ ಕೆರೆಗೆ ತಲುಪುತ್ತದೆ. ಮೈಸೂರು ನಗರದ ಹಾರ್ಡಿಂಜ್ ವೃತ್ತದಿಂದ ಪ್ರಾರಂಭಿಸಿ ಆ ರಸ್ತೆಗೆ ಸಿದ್ದರಾಮಯ್ಯನವರ ಹೆಸರಿಟ್ಟರೆ ಅದಕ್ಕೆ ಯಾರೂ ಚಕಾರ ಎತ್ತಲಾಗದು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ.

–ಸ.ರ. ಸುದರ್ಶನ, ಪ್ರಧಾನ ಕಾರ್ಯದರ್ಶಿ, ಕನ್ನಡ ಕ್ರಿಯಾ ಸಮಿತಿ, ಮೈಸೂರು

ಅಷ್ಟೇಕೋ ಸರಿ ಕಾಣದು



ಮಾನ್ಯರೆ,

ಮೈಸೂರಿನ ಪ್ರಮುಖ ರಸ್ತೆಯೊಂದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೆಸರನ್ನು ಇಡಬೇಕೆಂದು ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಹರೀಶ್‌ಗೌಡರು ಒತ್ತಾಯಿಸಿ, ನಗರಪಾಲಿಕೆಗೆ ಮನವಿ ಸಲ್ಲಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ ಸದರಿ ರಸ್ತೆಗೆ ಈಗಾಗಲೇ ಪ್ರಿನ್ಸೆಸ್ ರಸ್ತೆ ಎಂಬ ಹೆಸರಿದ್ದು, ರಾಜಕೀಯ ಕಾರಣಕ್ಕೋಸ್ಕರವಾಗಿ ಈಗ ಮತ್ತೆ ಅದೇ ರಸ್ತೆಗೆ ಮರುನಾಮಕರಣ ಮಾಡುವುದು ಎಷ್ಟು ಸರಿ ಎಂಬ ಪ್ರಶ್ನೆ ಪ್ರಜ್ಞಾವಂತ ನಾಗರಿಕರನ್ನು ಕಾಡಿದರೆ ಅಚ್ಚರಿಯಿಲ್ಲ.

ಹಿಂದೆಲ್ಲಾ ಮೃತ ಹೊಂದಿದ ಖ್ಯಾತನಾಮ ವ್ಯಕ್ತಿಗಳ ಹೆಸರುಗಳನ್ನು ರಸ್ತೆ ಅಥವಾ ವೃತ್ತಗಳಿಗೆ ಇಡಲಾಗುತ್ತಿತ್ತು. ತನ್ಮೂಲಕ ಅವರ ಸೇವೆಗಳನ್ನು ಅಥವಾ ಕೊಡುಗೆಗಳನ್ನು ಸ್ಮರಿಸಲಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಬದುಕಿರುವ ವ್ಯಕ್ತಿಗಳ ಹೆಸರುಗಳನ್ನು ಸಹಾ ರಸ್ತೆಗಳಿಗೆ ಇಡುವ ಪರಿಪಾಠ ಪ್ರಾರಂಭವಾಗಿದೆ. ಇದು ಎಷ್ಟರಮಟ್ಟಿಗೆ ಸರಿ ಎಂಬುದು ಚರ್ಚಾರ್ಹ ವಿಚಾರ. ಇನ್ನು ಪ್ರಸ್ತುತ ವಿಷಯಕ್ಕೆ ಬಂದರೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೈಸೂರಿನಲ್ಲಿ ಹಲವಾರು ಪ್ರಮುಖ ಆಸ್ಪತ್ರೆಗಳ ಹಾಗೂ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಕಾರಣಕರ್ತರಾಗಿದ್ದಾರೆ. ಹಳೆ ಮೈಸೂರು ಭಾಗದಲ್ಲಿ ಸಹ ಸಿದ್ದರಾಮಯ್ಯನವರ ಪ್ರಾಬಲ್ಯವಿದೆ. ಆದರೆ, ಈಗಾಗಲೇ ನಾಮಕರಣವಾಗಿರುವ ಹೆಸರನ್ನು ಅಳಿಸಿ, ಸಿದ್ದರಾಮಯ್ಯನವರ ಹೆಸರನ್ನಿಡುವುದು ಅಷ್ಟೇಕೋ ಸರಿಕಾಣದು.


–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಆಶಾ ಕಾರ್ಯಕರ್ತೆಯರ ಗೌರವ ಧನ, ಪ್ರೋತ್ಸಾಹ ಧನ ಹೆಚ್ಚಿಸಿ

ಮಾನ್ಯರೆ,

ಆಶಾ ಕಾರ್ಯಕರ್ತೆಯರು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮೈಸೂರಿನಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿರುವುದು ತುಂಬಾ ಬೇಸರದ ಸಂಗತಿ. ಆಶಾ ಕಾರ್ಯಕರ್ತೆಯರು ಆರೋಗ್ಯ ಕ್ಷೇತ್ರದ ಆಧಾರಸ್ತಂಭ, ಬಡಜನರ ಆರೋಗ್ಯ ಸೇವೆಗೆ ಇವರು ಬಹಳ ಮುಖ್ಯ. 15 ವರ್ಷಗಳಿಂದ ತಾಯಿ ಹಾಗೂ ಶಿಶು ಮರಣ ಸಂಖ್ಯೆ ಇಳಿಕೆ, ವಿವಿಧ ರೋಗರುಜಿನಗಳ ತಡೆಗಟ್ಟುವಿಕೆ, ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿ, ಕೊರೊನಾ ಸಂದರ್ಭದಲ್ಲಿ ಅಮೋಘ ಸೇವೆ ಸಲ್ಲಿಸಿ ರಾಷ್ಟ್ರದಲ್ಲಿಯೇ ಅತ್ಯುತ್ತಮ ಸೇವೆ ಸಲ್ಲಿಸಿದ ಕೀರ್ತಿ ಜತೆಗೆ, ಕೇಂದ್ರ ಸರ್ಕಾರದಿಂದ ಪ್ರಶಂಸನಾ ಪತ್ರ ಸಿಕ್ಕಿದ್ದರೂ, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಆಶಾ ಕಾರ್ಯಕರ್ತೆಯರ ಸೇವೆಗೆ ತಕ್ಕನಾದ ಪ್ರೋತ್ಸಾಹಧನ ಹಾಗೂ ಗೌರವಧನ ನೀಡದೆ ಶೋಷಿಸುತ್ತಿರುವುದು ಅತ್ಯಂತ ಅಮಾನವೀಯ. ಕರ್ನಾಟಕದಲ್ಲಿ ವಿಶೇಷ ಪೋರ್ಟಲ್ ಆಶಾ ನಿಧಿ ಮೂಲಕ ಆನ್‌ಲೈನ್ ಎಂಟ್ರಿ ಮಾಡಿಸಿದ್ದರೂ, ಕಳೆದ 8–9 ವರ್ಷಗಳಿಂದ ಆಶಾ ಕಾರ್ಯಕರ್ತೆಯರು, ಈ ಸಮಸ್ಯೆ ಪರಿಹಾರಕ್ಕೆ ನಿರಂತರ ಹಾರಾಟ ನಡೆಸುತ್ತಾ ಬಂದಿದ್ದರೂ ಯಾವುದೇ ಪ್ರಯೋಜನವಾಗದೇ ಇರುವುದು ತುಂಬಾ ವಿಷಾದಕರ ಸಂಗತಿ. ಈಗಲಾದರೂ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಆಶಾ ಕಾರ್ಯಕರ್ತೆಯರ ನ್ಯಾಯಯುತವಾದ ಎಲ್ಲಾ ಬೇಡಿಕೆಗಳನ್ನು ಆದಷ್ಟು ಬೇಗನೆ ಈಡೇರಿಸಿ ಅವರ ಸೇವೆ ಸುಗಮವಾಗಿ ಜನತೆಗೆ ದೊರಕುವಂತಾಗುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ದಾರಿ ತಪ್ಪಿದ ಮೈಸೂರು ಪಾಲಿಕೆ

ಸಿದ್ದರಾಮಯ್ಯನವರನ್ನು ಸಂತುಷ್ಟಿಗೊಳಿಸುವ ಭರದಲ್ಲಿ ತಪ್ಪು ದಾರಿ ಹಿಡಿಯಬೇಡಿ


ಮುಖ್ಯಮಂತ್ರಿ ಸಿದ್ದರಾಮಯ್ಯ


ಶಾಸಕ ಕೆ.ಹರೀಶ್‌ಗೌಡ


ಸಂಸದ ಯದುವೀರ್ ಒಡೆಯರ್

ಮೈಸೂರು ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಹರೀಶ್‌ಗೌಡರು, ಕೆಆರ್‌ಎಸ್ ರಸ್ತೆ ಎಂದೇ ಜನಜನಿತವಾಗಿರುವ ಹಾಲಿ '**ಪ್ರಿನ್ಸೆಸ್ ರಸ್ತೆ**'ಗೆ ಮುಖ್ಯಮಂತ್ರಿಗಳಾದಂತಹ ಸಿದ್ದರಾಮಯ್ಯನವರ ಹೆಸರನ್ನ ಇಡಬೇಕೆಂದು ಒತ್ತಾಯಿಸಿದ್ದಾರೆ. ಅವರು, ನ.13, 2024ರಂದು ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ವಿಸ್ತರಣಾ ಕಟ್ಟಡ, ಹಾಗೆಯೇ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ ವೇಳೆ ಈ ಒಂದು ಒತ್ತಾಯವನ್ನ ಮಾಡಿದ್ದರು. ಸಹಜವಾಗಿ, ಈ ರೀತಿಯ ಒತ್ತಾಯ ಮಾಡುವುದಕ್ಕೆ ಅವರಿಗೆ ತಮ್ಮದೇ ಆದ ಕಾರಣಗಳಿದ್ದವು.

ಹರೀಶ್‌ಗೌಡರ ಪ್ರಕಾರ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಇಡೀ ದೇಶದಲ್ಲೇ ಅತೀ ಹೆಚ್ಚಿನ ಅನುದಾನವನ್ನು ಕಲ್ಪಿಸಿದ ಮುಖ್ಯಮಂತ್ರಿ ಎಂದರೆ ಅದು ಸಿದ್ದರಾಮಯ್ಯ. ಗೌಡರು ಮುಂದುವರೆದು, ತಮ್ಮ ಬೇಡಿಕೆಯನ್ನು ಸಮರ್ಥಿಸಿಕೊಳ್ಳುತ್ತಾ ಮೈಸೂರು ನಗರದಲ್ಲಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನಗಳ ಸಂಶೋಧನಾ ಸಂಸ್ಥೆ, ಕೆ.ಆರ್.ಆಸ್ಪತ್ರೆ ಮಾದರಿಯಲ್ಲಿ ಜಿಲ್ಲಾ ಆಸ್ಪತ್ರೆ, ರಾಜಮಾತೆ ಕೃಷ್ಣಾಜಮ್ಮಣ್ಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಅಪಘಾತ ಸಂತ್ರಸ್ತರಿಗಾಗಿ ಟ್ರಾಮಾ ಕೇರ್ ಸೆಂಟರ್, ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಸಂಸ್ಥೆ ಘಟಕ ಮುಂತಾದವುಗಳ ನಿರ್ಮಾಣಕ್ಕೆ ಸಿದ್ದರಾಮಯ್ಯನವರೇ ಕಾರಣಕರ್ತರು ಎಂಬುದು ಅವರ ವಾದವಾಗಿದೆ. ಈ ಎಲ್ಲಾ ಆಸ್ಪತ್ರೆಗಳ ಸಮೂಹವನ್ನು '**ಸಿದ್ದರಾಮಯ್ಯ ಹೆಲ್ತ್ ಹಬ್**' ಎಂದು ಕರೆಯಬೇಕೆಂಬುದೂ ಅವರ ಒತ್ತಾಯವಾಗಿದೆ.

ಹರೀಶ್‌ಗೌಡ ಅವರು ಏನೆಲ್ಲಾ ಹೇಳಿದ್ದಾರೋ ಅವೆಲ್ಲವೂ ಸತ್ಯ. ಮೈಸೂರಿನ ಪಡುವಾರಹಳ್ಳಿಯ ಮೈದಾನದಲ್ಲಿ ಹೊಸದಾಗಿ ಬೃಹತ್ ಪ್ರಮಾಣದಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಸಿದ್ದರಾಮಯ್ಯನವರೇ ಕಾರಣಕರ್ತರು.

ಸಿದ್ದರಾಮಯ್ಯನವರಿಗೆ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ಬಗ್ಗೆ ವಿಶೇಷ ಆಸಕ್ತಿ ಮತ್ತು ಕಾಳಜಿ ಇದ್ದಂತೆ ತೋರುತ್ತದೆ. ಮಾಜಿ ಐಜಿಪಿ ಕೆಂಪಯ್ಯ IPS ಅವರ ಚಿಂತನೆ ಕೂಸಾದ (brain child), ಉದಯಗಿರಿಯಲ್ಲಿರುವ, ಪೊಲೀಸ್ ಸಿಬ್ಬಂದಿಯ ಮಕ್ಕಳು ಹಾಗೂ ಸಾರ್ವಜನಿಕರಿಗೂ ಅತ್ಯುತ್ತಮ ಶಿಕ್ಷಣ ಸೌಕರ್ಯವುಳ್ಳ **ಪೊಲೀಸ್ ಪಬ್ಲಿಕ್ ಸ್ಕೂಲ್**‌ಗೆ 40 ಕೋಟಿ ರೂಪಾಯಿಗಳ ಅನುದಾನವನ್ನು ಸಿದ್ದರಾಮಯ್ಯ ನೀಡಿದ್ದಾರೆ.

ಹಾಗಾಗಿ ಶಾಸಕ ಹರೀಶ್‌ಗೌಡರು, ಮುಂದಿನ ತಲೆಮಾರು, ಸಿದ್ದರಾಮಯ್ಯರ ಸೂಕ್ತ ರೀತಿಯಲ್ಲಿ ಸ್ಮರಿಸಿಕೊಳ್ಳಲು ಅನುವಾಗುವಂತೆ ಸೂಚಿಸಿರುವುದು ಸರಿಯಾಗಿಯೇ ಇದೆ. **ಹರೀಶ್‌ಗೌಡರ ಭಾವನೆಗಳನ್ನು ಎಲ್ಲರೂ ಒಪ್ಪಬಹುದಾದರೂ ಅವರ ಸಲಹೆಗಳನ್ನು ಒಪ್ಪುವುದು ಕಷ್ಟವಾಗಬಹುದು.**

ಈ ಮಧ್ಯೆ, ರಾಜ್ಯದ ಚಳಿಗಾಲದ (Winter Capital) ರಾಜಧಾನಿ ಎಂದೇ ಕರೆಯಲ್ಪಡುವ ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ 50 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗುವುದು ಎಂಬ ಸುದ್ದಿ ಹೊರಬಿದ್ದಿದೆ. **ವಿಶ್ವಾದ್ಯಂತ ಇಂತಹ ಅದೆಷ್ಟೋ ರಾಜಕಾರಣಿಗಳ ಪ್ರತಿಮೆಗಳಿಗೆ ಒದಗಿಬಂದ ದುಸ್ಥಿತಿಗಳತ್ತ ಗಮನಹರಿಸಿದಾಗ ಈ ಪ್ರತಿಮೆಗಳ ಸಂಸ್ಕೃತಿ ಮತ್ತು ಗೀಳಿನಿಂದ ನಾವು ಹೊರ ಬರುವುದು ಒಳ್ಳೆಯದೇನೋ! ರಸ್ತೆಗಳು ಹಾಗೂ ವೃತ್ತಗಳಿಗೆ ಹೆಸರಿಡುವಾಗಲೂ ಇದೇ ಮಾತನ್ನು ಹೇಳಬಹುದು.**

ಮೈಸೂರು ನ್ಯಾಯಾಲಯದ ಮುಂಭಾಗದಿಂದ ಆರಂಭವಾಗುವ ಮಹಾತ್ಮಗಾಂಧಿ ರಸ್ತೆಯ (ಎಂ.ಜಿ. ರಸ್ತೆ) ದುರ್ಗತಿಯನ್ನು ನೋಡಿದರೆ, ಅಲ್ಲಿರುವ ಗಾಂಧೀಜಿಯವರ ಪುತ್ಥಳಿಯ ಕ್ಷಮೆ ಕೋರಬೇಕಿದೆ. **ಈ ವಿಚಾರ ನ್ಯಾಯಾಲಯಕ್ಕೂ ಹೋಯಿತು.** ಕೊನೆಗೆ ಈ ರಸ್ತೆಗೆ ಹಿಂದೆ ಇದ್ದ ವಾಣಿ ವಿಲಾಸ ಹೆಸರೇ ಉಳಿಯಿತು. ಹಾಗಾಗಿ ಎಂ.ಜಿ ರಸ್ತೆಯು ಜೆಎಸ್‌ಎಸ್ ಆಸ್ಪತ್ರೆಯಿಂದ ಎಂಆರ್‌ಸಿ (ರೇಸ್ ಕ್ಲಬ್) ಫೈವ್‌ಲೈಟ್ ವೃತ್ತದವರೆಗೆ ಕಿರಿದಾಯಿತು. ಅಲ್ಲಿಂದ, ನರಸಿಂಹರಾಜ ಬುಲೇವಾರ್ಡ್, ಜನಪ್ರಿಯ ಲಲಿತ ಮಹಲ್ ರಸ್ತೆಯಾಗಿ ಟಿ.ನರಸೀಪುರ ಜಂಕ್ಷನ್‌ನಲ್ಲಿ ಕೊನೆಗೊಳ್ಳುತ್ತದೆ.

ಕೆಆರ್‌ಎಸ್ ರಸ್ತೆಯ, ಪ್ರಸಿದ್ಧ ಶ್ರೀ ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಸ್ಥಾನ ಹಾಗೂ ಒಂಟಿಕೊಪ್ಪಲ್ ಪೊಲೀಸ್ ಠಾಣೆ ಬಳಿಯ ವೃತ್ತವನ್ನು ನೋಡಿದ್ದಿರಿ ಅಲ್ವಾ, ಇಲ್ಲಿ ಎರಡು ಫಲಕಗಳಿವೆ (signboards). ಅವುಗಳ ಪೈಕಿ ಒಂದರಲ್ಲಿ ಕಾಂಗ್ರೆಸ್ ರಾಜಕಾರಣಿ, ಮೈಸೂರು ಮಾಜಿ ಪುರಸಭಾಧ್ಯಕ್ಷರಾಗಿದ್ದ ಬಿ.ಸಿ.ಲಿಂಗಯ್ಯ ಹೆಸರಿದ್ದರೆ, ಮತ್ತೊಂದರಲ್ಲಿ ಶ್ರೀ ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ದಿವಂಗತ ಬಿ.ಎಸ್. ಚಿಕ್ಕಣ್ಣದಾಸ್ ಅವರ ಹೆಸರಿದೆ. ನಗರದ ವಿವಿಧ ಪ್ರದೇಶಗಳಲ್ಲಿ ಇಂತಹ ಸಾಕಷ್ಟು ವೈರುಧ್ಯಗಳು ಕಂಡು ಬರುತ್ತವೆ.

ನಿರೀಕ್ಷೆಯಂತೆ ಶಾಸಕ ಹರೀಶ್‌ಗೌಡರ ಪ್ರಸ್ತಾವನೆಗಳಿಗೆ ಅನೇಕರಿಂದ ವಿರೋಧ ವ್ಯಕ್ತವಾಗುತ್ತಿದೆ. ವಾಸ್ತವವಾಗಿ, ಹರೀಶ್‌ಗೌಡರು, ಈ ವಿಷಯವನ್ನು ಕಳೆದ ನವೆಂಬರ್ 13ರಂದು ಪ್ರಸ್ತಾಪಿಸಿದ ಬಳಿಕ, ಮೈಸೂರು ನಗರಪಾಲಿಕೆಯ ಕೌನ್ಸಿಲ್ ಸಭೆಯು ನವೆಂಬರ್ 22ರಂದು ಒಂದು ನಿರ್ಧಾರವನ್ನು ತೆಗೆದುಕೊಂಡು ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಸ್ಥಾನದಿಂದ ರಾಯಲ್ ಇನ್ ಹೋಟೆಲ್ (Royal Inn Hotel) ಜಂಕ್ಷನ್‌ವರೆಗಿನ ಕೆಆರ್‌ಎಸ್ ರಸ್ತೆಗೆ '**ಸಿದ್ದರಾಮಯ್ಯ ಆರೋಗ್ಯ ಮಾರ್ಗ**' ಎಂದು ಹೆಸರಿಡಲು ನಿರ್ಧರಿಸಿ, ಆಕ್ಷೇಪಣೆ ಸಲ್ಲಿಕೆಗೆ 30 ದಿನಗಳ ಕಾಲಾವಕಾಶ ನೀಡಿದೆ.

ಈ ನಿರ್ಧಾರಕ್ಕೆ ಮೊಟ್ಟ ಮೊದಲ ಆಕ್ಷೇಪ, ಮೈಸೂರು ಅರಮನೆಯಿಂದ, ಅದೂ ಮೈಸೂರು–ಕೊಡಗು ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಂದ ವ್ಯಕ್ತವಾಯಿತು. ಈ ರಸ್ತೆಗೆ ಅದಾಗಲೇ 'ಪ್ರಿನ್ಸೆಸ್ ರಸ್ತೆ' ಎಂದು ಮೈಸೂರು ರಾಜಮನೆತನದ ಇಬ್ಬರು ರಾಜಮಾತೆಯರಾದ ಕೃಷ್ಣಾಜಮ್ಮಣಿ ಹಾಗೂ ಚೆಲುವಾಜಮ್ಮಣ್ಣಿಯವರ ಸ್ಮರಣಾರ್ಥ ನಾಮಕರಣ ಮಾಡಲಾಗಿದೆಯೆಂದು ಅವರು ಹೇಳಿದರು. ಹಾಗೂ ಅದಕ್ಕೆ ಕಾರಣವನ್ನು ನೀಡುತ್ತ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ (ಟಿ.ಬಿ.ಆಸ್ಪತ್ರೆ), ಪಿಕೆ ಸ್ಯಾನಿಟೋರಿಯಂ ಎಂದು ಕರೆಯಲ್ಪಡುವ ಆಸ್ಪತ್ರೆಯನ್ನು ಅದೇ ರಸ್ತೆಯಲ್ಲಿ ಸ್ಥಾಪಿಸಿರುವುದರ ಔಚಿತ್ಯವನ್ನು ಅವರು ಪ್ರತಿಪಾದಿಸಿದರು.

ಆದ್ದರಿಂದ, ಈ **ಪ್ರಿನ್ಸೆಸ್ ರಸ್ತೆಯು** ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಮೈಸೂರು ರಾಜಮನೆತನ ನೀಡಿರುವ ದಾನಪರತೆ ಹಾಗೂ ಸೇವೆಯ ಕುರುಹಾಗಿದೆ. **ಮೈಸೂರು ರಾಜವಂಶದ ಭವ್ಯ ಪರಂಪರೆಯನ್ನು ನಂತರ ಬಂದ ರಾಜಕಾರಣಿಗಳು ಅಳಿಸಿ ಹಾಕಬಾರದೆಂದು ಯದುವೀರ್ ಒಡೆಯರ್ ಅವರು ಹೇಳಿರುವುದು ಸರಿಯಾಗಿಯೇ ಇದೆ.** ಈ ರಸ್ತೆಯಲ್ಲಿ ಬರುವ (ಸಾಮಾನ್ಯವಾಗಿ ಕೆಆರ್‌ಎಸ್ ರಸ್ತೆ ಎಂದು ಕರೆಯಲ್ಪಡುವ) ಮನೆಗಳು ಮತ್ತು ಆಸ್ತಿಗಳ ವಿಳಾಸದಲ್ಲಿ ಈಗಲೂ 'ಪ್ರಿನ್ಸೆಸ್ ರಸ್ತೆ' ಎಂದು ನಮೂದಿಸಿರುವುದುಂಟು. **ಅಂಚೆ ಕಚೇರಿಯಲ್ಲಿ ಕೂಡ ಈ ರಸ್ತೆಯ ಹೆಸರು 'ಪ್ರಿನ್ಸೆಸ್ ರಸ್ತೆ' ಎಂದೇ ನಮೂದಿಸಲಾಗಿದೆಯಂತೆ.**

ಸಾರ್ವಜನಿಕರ ಭಾವನೆ ಹಾಗೂ ಅನುಸರಣೆ ಹೀಗಿರುವಾಗ ನಿರಂಕುಶ ಮತಿಯಂತೆ ಹೆಸರನ್ನು ಬದಲಾಯಿಸುವುದು ಸರಿಯೇ, ನ್ಯಾಯಸಮ್ಮತವೇ? ಖಂಡಿತವಾಗಿಯೂ ಇಲ್ಲ. ಪಿಕೆ ಸ್ಯಾನಿಟೋರಿಯಂ ಆಸ್ಪತ್ರೆಯು ಕಳೆದ ಹಲವಾರು ದಶಕಗಳಿಂದ ಲಕ್ಷಗಟ್ಟಲೇ ಜನರ ಪ್ರಾಣವನ್ನು ಉಳಿಸಿದೆ. ಈಗ ಈ ಮಹಾರಾಣಿಯರ ಸ್ಮರಣೆಯನ್ನು (ಇವರ ಪೈಕಿ ಒಬ್ಬರು ತಮ್ಮ ಮೂವರು ಹೆಣ್ಣು ಮಕ್ಕಳೊಡನೆ ಸದರಿ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದರು) ಸಂಪೂರ್ಣವಾಗಿ ನಾಶಪಡಿಸುವ ಕೆಲಸ ತುಂಬಾ ಅನ್ಯಾಯ ಹಾಗೂ ಅಮಾನವೀಯ ಕ್ರಮವಾಗುತ್ತದೆ.

ಮತ್ತೊಂದು ಅಚ್ಚರಿಯ ಸಂಗತಿ ಎಂದರೆ ಮೈಸೂರಿನ ದಟ್ಟಗಳ್ಳಿ ಬಳಿ ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ಬಡಾವಣೆಯಲ್ಲಿ ಒಂದು ಸುವಿಶಾಲ, ಗಡಿಯಾರ ಗೋಪುರವುಳ್ಳ '**ಸಿದ್ದರಾಮಯ್ಯ ವೃತ್ತ**' ಇರುವುದು ಬಹುತೇಕರಿಗೆ ಗೊತ್ತಿಲ್ಲದೇ ಇರಬಹುದು. ಆದರೆ, ಮೈಸೂರಿನಲ್ಲಿ ಸಿದ್ದರಾಮಯ್ಯ ಅವರ ಹೆಸರಿನ ರಸ್ತೆ ಇಲ್ಲವೇ ವೃತ್ತ ಇಲ್ಲ ಎಂದು ಸ್ಥಳೀಯ ಕಾಂಗ್ರೆಸ್ ಮುಖಂಡರು ಹೇಳುತ್ತಾ ಬರುತ್ತಿದ್ದಾರೆ. ಇಂತಹ ವೇಳೆ ಯಾರೊಬ್ಬರೂ ಈ ವೃತ್ತದ ಬಗ್ಗೆ ಪ್ರಸ್ತಾಪಿಸದೇ ಇರುವುದು ಸೋಜಿಗದ ಸಂಗತಿ. ಕಾರಣ, ಈ ವೃತ್ತವನ್ನು ಉದ್ಘಾಟಿಸಿದವರೇ ಈ ಹಿಂದೆ ವಿರೋಧ ಪಕ್ಷದ ನಾಯಕರು, ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು. ಇದರ ಬಗ್ಗೆ ನಗರಪಾಲಿಕೆ ಆಯುಕ್ತರ ಗಮನ ಸೆಳೆದರೆ, ಅವರು ಹೇಳುವುದಿಷ್ಟೇ; ಅದು ಖಾಸಗಿ ಬಡಾವಣೆ. ಅಲ್ಲಿ ನಿರ್ಮಾಣ ಮಾಡಲಾಗಿರುವ ಸಿದ್ದರಾಮಯ್ಯ ವೃತ್ತ ಸರ್ಕಾರಿ ದಾಖಲೆ ಸೇರುವುದಿಲ್ಲ.

ಅಂದ ಹಾಗೆ ಮೈಸೂರು ವಿಶ್ವವಿದ್ಯಾನಿಲಯ ನೌಕರರ ಬಡಾವಣೆ ನಿರ್ಮಾಣಕ್ಕೆ ಮುಡಾ ಅನುಮೋದನೆ ನೀಡಿದೆ. ಇಲ್ಲಿನ ನಿವಾಸಿಗಳು ಮುಡಾಗೆ ತೆರಿಗೆ ಪಾವತಿಸುತ್ತಿದ್ದಾರೆ. ಇಲ್ಲಿರುವ ರಸ್ತೆ, ವೃತ್ತ, ಉದ್ಯಾನವನ ಎಲ್ಲವೂ ಮುಡಾ ನಿರ್ವಹಣೆಗೆ ಒಳಪಡುತ್ತದೆ ಎಂದ ಮೇಲೆ ಅದ್ಹೇಗೆ ಇದು ಖಾಸಗಿ ವೃತ್ತವಾದೀತು? ಇದಿರಲಿ.

ಇನ್ನು ಪ್ರಿನ್ಸೆಸ್ ರಸ್ತೆ ಎಂದು ಬಹಳ ಹಿಂದೆಯೇ ನಾಮಕರಣ ಮಾಡಿರುವ ಬಗ್ಗೆ ಮೈಸೂರು ನಗರಪಾಲಿಕೆ, ನಮ್ಮಲ್ಲಿ ದಾಖಲೆಗಳಿಲ್ಲ ಎಂದು ಕೈ ಚೆಲ್ಲುವ ಪ್ರಯತ್ನಕ್ಕೆ ಮುಂದಾಗಿದೆ. ಆದರೆ ಮಂಗಳವಾರವಷ್ಟೇ ಪತ್ರಿಕಾಗೋಷ್ಠಿ ನಡೆಸಿದ ಮಾಜಿ ಮೇಯರ್ ಸಂದೇಶ್‌ಸ್ವಾಮಿ, 1921ರಲ್ಲಿ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ 'ಪ್ರಿನ್ಸೆಸ್' ರಸ್ತೆ ಎಂದು ಕೆಆರ್‌ಎಸ್ ರಸ್ತೆಗೆ ಹೆಸರಿಸಿರುವ ನಕ್ಷೆಯನ್ನು ಪ್ರದರ್ಶಿಸಿದ್ದರು.

ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಖಂಡಿತವಾಗಿಯೂ ತಮಗೆ ಬೇಕಾದಂತೆ ನಿರ್ಧಾರವನ್ನು ಕೈಗೊಳ್ಳಬಹುದು. ಅದಕ್ಕೆ ಸಾಕ್ಷಿ ದೆಹಲಿಯಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಹತ್ತಾರು ರಸ್ತೆಗಳ ಹೆಸರನ್ನು ಬದಲಾವಣೆ ಮಾಡಲಾಯಿತು. ಈಗಲೂ ಮಾಡಲಾಗುತ್ತಿದೆ. ಅದೇ ರೀತಿ ಇಲ್ಲಿಯೂ ಮಾಡಬಹುದು. **ಆದರೆ ಸರ್ಕಾರ ಪ್ರತಿಯೊಂದು ನಿರ್ಧಾರವನ್ನು ನ್ಯಾಯಪರತೆ ಮತ್ತು ಬದ್ಧತೆಯಿಂದ ಕೈಗೊಳ್ಳಬೇಕಿದೆ.**

ಆದರೂ, ನಮ್ಮ ನಗರಕ್ಕೆ ಸಿದ್ದರಾಮಯ್ಯನವರು ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ, ಅವರನ್ನು ಇನ್ನೂ ಗೌರವಿಸುವ ಇರಾದೆ ಇದ್ದಲ್ಲಿ ಬೇಕಾದಷ್ಟು ಅನ್ಯ ಮಾರ್ಗಗಳಿವೆ. **ಒಂದು ವಿಶ್ವ ದರ್ಜೆಯ ಸಭಾಂಗಣ ಮುಂಬೈನ ನಾರಿಮನ್ ಪಾಯಿಂಟ್ ಮರಿನಾ ಡ್ರೈವ್ ಬಳಿಯ ಕಲಾ ಕೇಂದ್ರದ ಮಾದರಿ ನಿರ್ಮಿಸಲೂಬಹುದು.** ಇದರ ನಿರ್ಮಾಣ ರೂಪು–ರೇಷೆ ವೇಳೆ 1969ರಲ್ಲಿ ನಾನು ಮುಂಬೈ (ಆಗಿನ ಬಾಂಬೆ) ನಲ್ಲಿದ್ದೆ. ಈ ಭವ್ಯ ಕಟ್ಟಡವನ್ನು ಅಂದಿನ ದಿನಗಳಲ್ಲಿ ಪ್ರದರ್ಶಕ ಕಲೆಗಳ ರಾಷ್ಟ್ರೀಯ ಕೇಂದ್ರ (National Centre for Performing Arts-NCPA) ಅಥವಾ ಟಾಟಾ ಮಂದಿರ (Tata Theatre) ಎಂದು ಕರೆಯಲಾಗುತ್ತಿತ್ತು.

ಇದರಲ್ಲಿ 1,000 ಆಸನ ವ್ಯವಸ್ಥೆ ಇದ್ದು, ಅರ್ಧ ವೃತ್ತಾಕಾರದ ತಳ್ಳು ವೇದಿಕೆ ಒಳಗೊಂಡಿದೆ. **ಸದರಿ ಸಭಾಂಗಣವು ಸಂಗೀತ, ನೃತ್ಯ, ರಂಗಭೂಮಿ, ಚಲನಚಿತ್ರ ಸಾಹಿತ್ಯ, ವಾದ್ಯ ಗೋಷ್ಠಿ, ಜೊತೆಗೆ ಛಾಯಾಗ್ರಹಣ ಮುಂತಾದವುಗಳ ಪುನಶ್ಚೇತನ ಕೇಂದ್ರವಾಗಿದ್ದು, ಪ್ರಖ್ಯಾತ ಕಲಾವಿದರ ಕಲಾಕೃತಿಗಳನ್ನು ಪ್ರದರ್ಶಿಸುವ ಆರ್ಟ್ ಗ್ಯಾಲರಿಯನ್ನು ಒಳಗೊಂಡಿದೆ.** ಇಂತಹ ಒಂದು ಭವ್ಯವಾದ ಸ್ಮಾರಕವು ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಶಾಶ್ವತವಾಗಿರುತ್ತದೆ. ಇಂತಹ ಒಂದು ಭವ್ಯ ಭವನ ನಿರ್ಮಿಸಿ ಅದಕ್ಕೆ '**ಸಿದ್ದರಾಮಯ್ಯ ಕಲಾಕ್ಷೇತ್ರ**' ಎಂದು ನಾಮಕರಣ ಮಾಡಬಹುದು.

ರಸ್ತೆ, ವೃತ್ತಗಳಿಗೆ ಇಟ್ಟಂತಹ ಹೆಸರುಗಳನ್ನು ಬದಲಾಯಿಸಬಹುದು. ಪ್ರತಿಮೆಗಳನ್ನು ಉರುಳಿಸಬಹುದು. ಆದರೆ ಒಂದು ಭವ್ಯ ಕಲಾ ಕೇಂದ್ರವನ್ನು ಯಾವ ಸರಕಾರ ಅಥವಾ ಸರ್ವಾಧಿಕಾರಿ ಬಂದರೂ ಧ್ವಂಸಗೊಳಿಸಲಾರ. ಅದು ಅಬಾಧಿತ.

ಸಿದ್ದರಾಮಯ್ಯನವರ ಹಿತೈಷಿಗಳು, ಅಭಿಮಾನಿಗಳು, ತಮ್ಮ ನಾಯಕ ಹಾಗೂ ಆಪದ್ಬಾಂಧವನ ಹೆಸರನ್ನು ಶಾಶ್ವತಗೊಳಿಸಲು ಈ ರೀತಿಯ ಭವನಗಳ ಬಗ್ಗೆ ಹೆಚ್ಚಿನ ಗಮನಹರಿಸುವುದು ಒಳ್ಳೆಯದು. ಇಂತಹ ಭವನವನ್ನು ಯಾವುದೇ ಸರ್ವಾಧಿಕಾರಿಯೂ ಇಲ್ಲ ಅವರ ವಿರೋಧಿಯೂ ನೆಲಸಮಗೊಳಿಸಲಾರ. **ಸ್ವತಃ ಸಿದ್ದರಾಮಯ್ಯನವರೇ, ಈ ನಿಟ್ಟಿನಲ್ಲಿ ಚಿಂತಿಸುವಂತೆ ತಮ್ಮ ಬೆಂಬಲಿಗರಿಗೆ ಸಲಹೆ ನೀಡಲೂಬಹುದು.** ಹೀಗೆ ಮಾಡುವುದರಿಂದ ಇಲ್ಲಿಯ ಜನರು ಹಾಗೂ ಪ್ರವಾಸಿಗರು, ಅವರ ತವರು ಜಿಲ್ಲೆ ಹಾಗೂ ನಗರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯರ ಕೊಡುಗೆಯನ್ನು ಜ್ಞಾಪಿಸಿಕೊಳ್ಳುತ್ತಾರೆ. ಆದಾಗ್ಯೂ ಅಂತಿಮ ನಿರ್ಧಾರ ಸಿದ್ದರಾಮಯ್ಯನವರಿಗೇ ಬಿಟ್ಟಿದ್ದು ಎಂಬುದರಲ್ಲಿ ಸಂಶಯವಿಲ್ಲ.

Email: voice@starofmysore.com

ಚಿನ್ಮೋಯ್ ಕೃಷ್ಣದಾಸ್ ಜಾಮೀನು ಅರ್ಜಿ ತಿರಸ್ಕರಿಸಿದ ಬಾಂಗ್ಲಾ ಕೋರ್ಟ್

ಢಾಕಾ, ಜ.2– ದೇಶದ್ರೋಹದ ಪ್ರಕರಣದಲ್ಲಿ ಬಂಧಿತರಾಗಿರುವ ಹಿಂದೂ ಆಧ್ಯಾತ್ಮಿಕ ನಾಯಕ ಚಿನ್ಮೋಯ್ ಕೃಷ್ಣದಾಸ್ ಅವರಿಗೆ ಬಾಂಗ್ಲಾದೇಶ ನ್ಯಾಯಾಲಯ ಶಾಕ್ ನೀಡಿದೆ.

ದೇಶದ್ರೋಹದ ಆರೋಪ ಪ್ರಕರಣದಲ್ಲಿ ಬಂಧಿತರಾಗಿರುವ ಚಿನ್ಮೋಯ್ ಕೃಷ್ಣದಾಸ್ ಜಾಮೀನಿಗಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅದರಂತೆಯೇ ಗುರುವಾರ ಬಿಗಿ ಭದ್ರತೆಯ ನಡುವೆ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ಚಿತ್ತಗಾಂಗ್ ಕೋರ್ಟ್‌ನಲ್ಲಿ ಸುಮಾರು 30 ನಿಮಿಷಗಳ ಕಾಲ ಎರಡೂ ಕಡೆಯ



ವಾದವನ್ನು ಆಲಿಸಿದ ನ್ಯಾಯಾಧೀಶರು, ಚಿನ್ಮೋಯ್ ಕೃಷ್ಣದಾಸ್ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು.

ಢಾಕಾದಿಂದ ಚಟ್ಟೋಗ್ರಾಮ್‌ಗೆ ತೆರಳಿದ್ದ ಸುಪ್ರೀಂ ಕೋರ್ಟ್‌ನ 11 ವಕೀಲರ ತಂಡವು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ವಿಚಾರಣೆ ನಡೆಸಿದ ಮೆಟ್ರೋಪಾಲಿಟನ್ ಸೆಷನ್ಸ್ ನ್ಯಾಯಾಧೀಶ ಎಂಡಿ ಸೈಫುಲ್ ಇಸ್ಲಾಂ ಅವರು ಎರಡೂ ಕಡೆಯ ವಾದಗಳನ್ನು ಆಲಿಸಿದ ನಂತರ ಹಿಂದೂ ಸನ್ಯಾಸಿ ಚಿನ್ಮಯ್ ಕೃಷ್ಣದಾಸ್ ಬ್ರಹ್ಮಚಾರಿ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಶುಕ್ರವಾರ 3 ಜನವರಿ 2025

ಯಾದವಗಿರಿಯ ರೈಲ್ವೆ ಹಳಿ ಉದ್ದಕ್ಕೂ ತಂತಿ ಬೇಲಿ ನಿರ್ಮಿಸುವಂತೆ ಮಾಜಿ ಸಂಸದ ಪ್ರತಾಪ್ ಸಿಂಹ ಮನವಿ



ಮೈಸೂರಿನ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಅವರನ್ನು ಗುರುವಾರ ಭೇಟಿ ಮಾಡಿದ ಮಾಜಿ ಸಂಸದ ಪ್ರತಾಪ್ ಸಿಂಹ, ಮೈಸೂರಿನ ಯಾದವಗಿರಿಯಲ್ಲಿ ರೈಲ್ವೆ ಹಳಿ ಉದ್ದಕ್ಕೂ ತಂತಿ ಬೇಲಿ ನಿರ್ಮಾಣ ಮಾಡುವಂತೆ ಮನವಿ ಮಾಡಿದರು.

ಮೈಸೂರು, ಜ.2(ಬಿಎಲ್‌ಯು)– ಕಳ್ಳತನ ನಿಯಂತ್ರಿಸುವ ಸಲುವಾಗಿ ಮೈಸೂರಿನ ಯಾದವಗಿರಿಯ ರೈಲ್ವೆ ಹಳಿ ಉದ್ದಕ್ಕೂ ತಂತಿ ಬೇಲಿ ನಿರ್ಮಾಣ ಮಾಡುವಂತೆ ಮಾಜಿ ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದ್ದಾರೆ.


ಈ ಸಂಬಂಧ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಅವರನ್ನು ಭೇಟಿ ಮಾಡಿ ಕೋರಿದ್ದಾರೆ. ಯಾದವಗಿರಿಯಲ್ಲಿ ರೈಲ್ವೆ ಹಳಿ ದಾಟಿ ಕಳ್ಳತನ ನಡೆಯುತ್ತಿದ್ದು, ದರೋಡೆ ಬಳಿಕ ಚಲಿಸುವ ರೈಲು ಹತ್ತಿ ಪರಾರಿ ಆಗುತ್ತಿದ್ದಾರೆ. ಹಲವು ವರ್ಷಗಳಿಂದ ಈ ಕೃತ್ಯಗಳು ನಡೆಯುತ್ತಲೇ ಇವೆ. ಈ ಹಿನ್ನೆಲೆಯಲ್ಲಿ ರೈಲ್ವೆ ಹಳಿಗೆ ಹೊಂದಿಕೊಂಡಿರುವ ಸ್ಲಂ ಮನೆಗಳನ್ನು ತೆರವು ಮಾಡಿ ರೈಲ್ವೆ ಆಸ್ತಿ ಭದ್ರಪಡಿಸುವ ಕೆಲಸವನ್ನು ಸಂಸದನಾಗಿದ್ದಾಗ ನಾನು ಮಾಡಿದ್ದೆ ಎಂದು ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಕಳ್ಳತನ ನಿಯಂತ್ರಿಸುವ ಸಲುವಾಗಿ ಯಾದವಗಿರಿಯಲ್ಲಿ ರೈಲ್ವೆ ಹಳಿ ಉದ್ದಕ್ಕೂ ಬೇಲಿ ನಿರ್ಮಾಣ ಮಾಡಬೇಕೆಂದು ಪ್ರತಾಪ್ ಸಿಂಹ, ಡಿಆರ್‌ಎಂ ಶಿಲ್ಪಿ ಅಗರವಾಲ್ ಅವರನ್ನು ಕೋರಿದ್ದಾರೆ.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಎಸ್.ಕೆ.ದಿನೇಶ್, ಬೂತ್ ಅಧ್ಯಕ್ಷ ಪಿ.ಬೋಳಾರ್ ಉಪಸ್ಥಿತರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್–ಶಾಹು ಮಹಾರಾಜ್ ಸ್ನೇಹ ಭಾರತದ ರಾಜಕೀಯ, ಸಾಮಾಜಿಕ ದಿಕ್ಕನ್ನು ಬದಲಿಸಿತು

ಡಾ.ರಹಮತ್ ತರೀಕೆರೆ ಅಭಿಮತ





ಮೈಸೂರು ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ–ವಿಸ್ತರಣಾ ಕೇಂದ್ರದಲ್ಲಿ ನಡೆದ 'ಶಾಹು ಮಹಾರಾಜ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ವೈಚಾರಿಕ ಸ್ನೇಹ' ಕುರಿತ ಕಾರ್ಯಕ್ರಮದಲ್ಲಿ ವಿದ್ವಾಂಸ ಡಾ.ರಹಮತ್ ತರೀಕೆರೆ ಮಾತನಾಡಿದರು.

ಮೈಸೂರು, ಜ.2(ಎಂಟಿವೈ)– ಅಪಮಾನಿತ ದೊರೆ ಶಾಹು ಮಹಾರಾಜ್ ಹಾಗೂ ಅವಮಾನಿತ ವಿದ್ವಾಂಸ ಡಾ.ಬಿ.ಆರ್.ಅಂಬೇಡ್ಕರ್ ಅವರ ಅಪೂರ್ವ ಸ್ನೇಹ ಸಂಗಮ, ಭಾರತದ ರಾಜಕೀಯ ಮತ್ತು ಸಾಮಾಜಿಕ ಚರಿತ್ರೆಯ ದಿಕ್ಕನ್ನೇ ಬದಲಾಯಿಸಿತು ಎಂದು ವಿದ್ವಾಂಸ ಡಾ.ರಹಮತ್ ತರೀಕೆರೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರದಲ್ಲಿ ಗುರುವಾರ ಆಯೋಜಿಸಿದ್ದ ಶಾಹು ಮಹಾರಾಜ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ವೈಚಾರಿಕ ಸ್ನೇಹ ವಿಷಯ ಕುರಿತು ಉಪನ್ಯಾಸ ನೀಡಿದ ಅವರು, ಡಾ.ಅಂಬೇಡ್ಕರ್ ಮತ್ತು ಶಾಹು ಮಹಾರಾಜ್ ಅವರ 4 ವರ್ಷಗಳ ಸ್ನೇಹ ಭಾರತದ ರಾಜಕೀಯ ಮತ್ತು ಸಾಮಾಜಿಕ ಚರಿತ್ರೆಯ ದಿಕ್ಕನ್ನು ಬದಲಿಸಿದೆ. ಮುಂಬೈ ಕಾನೂನು ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದ ಡಾ.ಅಂಬೇಡ್ಕರ್ ಅವರನ್ನು ಶಾಹು ಮಹಾರಾಜರು ಹುಡುಕಿಕೊಂಡು ಬರುತ್ತಾರೆ. ತಮ್ಮ ಸುಧಾರಣಾ ಕಾರ್ಯಕ್ರಮಕ್ಕೆ ಮಾರ್ಗದರ್ಶನ ಮಾಡಬೇಕೆಂದು ಕೋರುತ್ತಾರೆ. ತಮ್ಮ ವಿರುದ್ಧ ತೇಜೋವಧೆ ಮಾಡುತ್ತಿದ್ದ ಕೇಸರಿ ಪತ್ರಿಕೆ ವಿರುದ್ಧ ಮೂಕನಾಯಕ ಪತ್ರಿಕೆ ಆರಂಭಕ್ಕೆ ನೆರವಾಗುತ್ತಾರೆ. ಅಂಬೇಡ್ಕರ್ ಅವರ ಬರಹಕ್ಕೆ ಬೇಕಾದ ಬುನಾದಿ ಮತ್ತು ತಾಲೀಮು ಆರಂಭವಾಗುತ್ತದೆ ಎಂದರು.

ಮಡಗಾವ್, ನಾಗಪುರ ಮತ್ತು ದೆಹಲಿಯ ಮೂರು ಸಮಾವೇಶಗಳು ಮತ್ತು ಮೂರು ಪತ್ರಗಳು ಅಂಬೇಡ್ಕರ್ ಮತ್ತು ಶಾಹೂ ಮಹಾರಾಜರ ಸ್ನೇಹ ಸಂಬಂಧಕ್ಕೆ ಆಧಾರಗಳಾಗಿವೆ. ನಾಗಪುರದ ಅಧಿವೇಶನದಲ್ಲಿ ಶಾಹು ಮಹಾರಾಜರು ಮಾತನಾಡುತ್ತ, ಅಂಬೇಡ್ಕರ್ ದಮನಿತರ ಬೆಳಕು. ರಾಜ್ಯ ಹೋದರೂ ಪರವಾಗಿಲ್ಲ ನಿಮ್ಮ ಪರವಾಗಿ ಹೋರಾಟ ಮಾಡುತ್ತೇನೆ ಎಂದರಲ್ಲದೆ, ದೆಹಲಿ ಸಮಾವೇಶದಲ್ಲಿ ಅಂಬೇಡ್ಕರ್ ಆದರ್ಶ ಪಾಲಿಸಬೇಕು ಎಂದು ಕರೆ ನೀಡುತ್ತಾರೆ. ನಾನು ನಿಮ್ಮ ದಾಸ ಎಂದೂ ಘೋಷಿಸುತ್ತಾರೆ. ರಾಜರಾಗಿ ಅವರದು ಅನಂತ ವಿನೀತತೆ ಎಂದರು.

ಅಂಬೇಡ್ಕರ್ ಅವರನ್ನು ವಿದ್ಯಾರ್ಥಿ ವೇತನ ಕೊಟ್ಟು ಇಂಗ್ಲೆಂಡ್‌ಗೆ ಕಳುಹಿಸುವ ಶಾಹು ಮಹಾರಾಜರು, ಇಂಗ್ಲೆಂಡಿನ ತಮ್ಮ ಪರಿಚಯಸ್ಥರಿಗೆಲ್ಲ ಪತ್ರ ಬರೆದು ಅಂಬೇಡ್ಕರ್ ವಿಚಾರಗಳಿಗೆ ಮಾನ್ಯತೆ ದೊರೆಯುವಂತೆ ಮಾಡಲು ತಿಳಿಸುತ್ತಾರೆ. ಇಂಗ್ಲೆಂಡಿನಿಂದ ಅಂಬೇಡ್ಕರ್ ಬರೆದ ಪತ್ರದಲ್ಲಿ ಶಾಹು ಮಹಾರಾಜರು ಹಿಂದೂಸ್ತಾನದ ಸಾಮಾಜಿಕ ಪ್ರಜಾಪ್ರಭುತ್ವದ ಮುಹೂರ್ತ ಕಂಬ ಎಂದು ಬರೆದರು. ಶಾಹು ಮಹಾರಾಜರು ನಿಧನರಾದಾಗ ಭಾರತದ ದಮನಿತರ ಪರವಾದ ಇಂಥ ಸಖನೊಬ್ಬ ಇನ್ನೆಂದೂ ಸಿಕ್ಕಿರಲಿಲ್ಲ ಎಂದು ವಿಷಾದದಿಂದ ಪತ್ರ ಬರೆಯುತ್ತಾರೆ ಎಂದು ವಿವರಿಸಿದರು.

ಇವರಿಬ್ಬರ ಸ್ನೇಹದಲ್ಲಿ ಬೇಟೆಯ ರೂಪಕಗಳಿವೆ. ಮುಗ್ಧ ಪ್ರಾಣಿಗಳನ್ನು ಬೇಟೆಯಾಡಲಿಲ್ಲ. ಸಂಪ್ರದಾಯವಾದಿಗಳನ್ನು ಬೇಟೆಯಾಡಿದರು. ಆದರ್ಶ, ಸಮಾನತೆ ಸಮಾಜ ರೂಪಿಸಲು ಸಂಘರ್ಷ ಎದುರಿಸಿದರು. ದಮನಿತರ ಸ್ನೇಹ ಸಂಪಾದಿಸಿದರು. ಎದುರಾಳಿಗಳ ಪ್ರತಿರೋಧಕ್ಕೂ ಮುಖಾಮುಖಿಯಾದರು. ಭಾರತದ ಚರಿತ್ರೆಯನ್ನು ಅವಲೋಕಿಸಿದರೆ ಸಾಮಾಜಿಕ ಚಳವಳಿಯನ್ನು ಪುರೋಹಿತಶಾಹಿ ನಿಯಂತ್ರಿಸುವುದು ತಿಳಿಯುತ್ತದೆ. ಇದನ್ನು ಬುದ್ಧ, ಬಸವ, ಕುವೆಂಪು ಎಲ್ಲ ದಾರ್ಶನಿಕರು ಎದುರಿಸಿದರು. ಸಾಮಾಜಿಕ ಸುಧಾರಣೆಯಾಗಬೇಕಾದರೆ ಧರ್ಮದ ಸುಧಾರಣೆಯೂ ಆಗಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು.

14 ಮಂದಿಗೆ ಅಭಿವೃದ್ಧಿ–ಪರಿಸರ ಪತ್ರಿಕೋದ್ಯಮ ಪ್ರಶಸ್ತಿ

ಬೆಂಗಳೂರು,ಜ.2–ಕರ್ನಾಟಕ ಸರ್ಕಾರವು ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಪತ್ರಕರ್ತರಿಗೆ ನೀಡುವ 2017 ರಿಂದ 2023ರ ವರ್ಷಗಳ ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಿಸಿದೆ.

ವಾರ್ತಾ ಇಲಾಖೆ ಆಯುಕ್ತರ ಅಧ್ಯಕ್ಷತೆಯ ಸಮಿತಿಯು ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡಿದೆ. ರಾಜ್ಯ ಸರ್ಕಾರವು 2017–2023ರ ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳಿಗಾಗಿ 14 ಹೆಸರುಗಳನ್ನು ಪ್ರಕಟಿಸಿದೆ. ಪ್ರಶಸ್ತಿ ಪುರಸ್ಕೃತರು 1 ಲಕ್ಷ ರೂ. ನಗದು ಪಡೆಯಲಿದ್ದಾರೆ. ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರಲ್ಲಿ ಜಿ.ಜಾ ರಾಜೀವ್ (2017), ದೇವಯ್ಯ ಗುತ್ತೇದಾರ್ (2018), ಅಂಕಣಕಾರ ಗಿರೀಶ್ ಲಿಂಗಣ್ಣ (2019), ಯೋಗೇಶ್ ಎಂಎನ್ (2020), ನೌಶಾದ್ ಬಿಜಾಪುರ (2021), ಸತೀಶ್ ಜಿಟಿ (2022) ಮತ್ತು ಎಸ್.ಗಿರೀಶ್‌ಬಾಬು (2023) ಸೇರಿದ್ದಾರೆ.

ಪರಿಸರ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರಲ್ಲಿ ವಿಜಯಲಕ್ಷ್ಮಿ ಶಿಬರೂರು (2017), ಬಿಎಂಟಿ ರಾಜೀವ್ (2018), ವಿನೋದ ನಾಯ್ಕ್ (2019), ಮಾಲ್ತೇಶ್ ಅಂಗೂರ (2020), ಸುಧೀರ್ ಶೆಟ್ಟಿ (2021), ಮಲ್ಲಿಕಾರ್ಜುನ್ ಹೊಸಪಾಳ್ಯ (2022) ಮತ್ತು ಆರ್.ಮಂಜುನಾಥ್ (20) ಸೇರಿದ್ದಾರೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ. ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆಗಳನ್ನು ತಿಳಿಸಿ ಆಶೀರ್ವದಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು,ಜ.2– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಎಸ್‌ಬಿಐ ಮತ್ತು ಇತರ ಬ್ಯಾಂಕ್ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಜ.8ರೊಳಗೆ ಕಚೇರಿ ದೂ.ಸಂ: 0821–2515944 ಅನ್ನು ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.


ಇಂದು ಸಾವಿತ್ರಿಬಾಯಿ ಫುಲೆ 194ನೇ ಜಯಂತಿ



ಮೈಸೂರು,ಜ.2–ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ 194ನೇ ಜನ್ಮ ದಿನಾಚರಣೆಯನ್ನು ಚಾಮರಾಜಪುರಂನಲ್ಲಿರುವ ವಿಷ್ಣುವರ್ಧನ ರಸ್ತೆಯ ಕಚೇರಿಯಲ್ಲಿ ಜ.3ರಂದು ಬೆಳಗ್ಗೆ 11 ಗಂಟೆಗೆ ಆಚರಿಸಲಾಗುವುದು ಎಂದು ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ತಿಳಿಸಿದ್ದಾರೆ

ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಹಾಗೂ ಪ್ರಾಧ್ಯಾಪಕಿ ಡಾ.ಆರ್.ಎಚ್ ಪವಿತ್ರ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ರೇಣುಕಾ ರಾಜ್, ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷರಾದ ಹೇಮಾ ನಂದೀಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ ವಾಜಪೇಯಿ, ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ ಬಸಪ್ಪ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅಂಬಾಭವಾನಿ ಸಮಾಜ ಮಹಿಳಾ ಅಧ್ಯಕ್ಷೆ ಸವಿತಾ ಘಾಟ್ಕೆ, ಸಮೃದ್ಧಿ ಟ್ರಸ್ಟ್ ಅಧ್ಯಕ್ಷೆ ಸಹನಾ ಗೌಡ ಇನ್ನಿತರರು ಭಾಗವಹಿಸಲಿದ್ದಾರೆ.

ಡಿ.ಟಿ.ಪ್ರಕಾಶ್‌ರಿಗೆ ಹುಟ್ಟುಹಬ್ಬದ ಶುಭಾಶಯ



ಬ್ರಾಹ್ಮಣ ಯುವ ವೇದಿಕೆಯಿಂದ ಮೈಸೂರು ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಬಾಲಕೃಷ್ಣ, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಕಡಕೊಳ ಜಗದೀಶ್, ರಂಗನಾಥ್, ಸುಚೀಂದ್ರ, ಪ್ರಶಾಂತ್ ಇನ್ನಿತರರು ಉಪಸ್ಥಿತರಿದ್ದರು.

ಮಂಡ್ಯ, ಮೈಸೂರು ಸೇರಿ ರಾಜ್ಯದ 19 ಜಿಲ್ಲೆಯ ಬೋರ್‌ವೆಲ್ ನೀರು ಕುಡಿಯಲು ಯೋಗ್ಯವಲ್ಲ

ಜೊತೆಗೆ ದೇಶದ 440 ಜಿಲ್ಲೆಗಳಲ್ಲೂ ಸೂಕ್ತವಿಲ್ಲ: CGWD ವರದಿ



(ಸಂಗ್ರಹ ಚಿತ್ರ)

ನವದೆಹಲಿ, ಜ.2– ಭಾರತದ 440 ಜಿಲ್ಲೆಗಳಲ್ಲಿ ಅಂತರ್ಜಲದಲ್ಲಿ ಹೆಚ್ಚಿನ ಮಟ್ಟದ ನೈಟ್ರೇಟ್ ಕಂಡು ಬಂದಿದ್ದು, ಇದು ಕುಡಿಯಲು ಯೋಗ್ಯವಲ್ಲ ಎಂದು ಕೇಂದ್ರೀಯ ಅಂತರ್ಜಲ ಮಂಡಳಿ (ಸಿಜಿಡಬ್ಲ್ಯುಬಿ) ವರದಿಯಲ್ಲಿ ಈ ಮಾಹಿತಿ ನೀಡಿದೆ. ಸಂಗ್ರಹಿಸಿದ ಮಾದರಿಗಳಲ್ಲಿ 20 ಪ್ರತಿಶತದಷ್ಟು ನೈಟ್ರೇಟ್ ಸಾಂದ್ರತೆಯು ಮಿತಿಗಿಂತ ಹೆಚ್ಚಿದೆ ಎಂದು ಮಂಡಳಿ ಹೇಳಿದೆ. ನೈಟ್ರೇಟ್ ಮಾಲಿನ್ಯವು ಪರಿಸರ ಮತ್ತು ಆರೋಗ್ಯಕ್ಕೆ ಗಂಭೀರ ಪರಿಣಾಮ ಉಂಟುಮಾಡುವುದು ಮಾತ್ರವಲ್ಲದೆ, ಸಾರಜನಕ ಆಧಾರಿತ ರಸಗೊಬ್ಬರಗಳು ಮತ್ತು ಪ್ರಾಣಿಗಳ ತ್ಯಾಜ್ಯವನ್ನು ಬಳಸುವ ಪ್ರದೇಶಗಳಲ್ಲಿ ಇದು ಪರಿಣಾಮ ಬೀರುತ್ತದೆ.

ಕರ್ನಾಟಕದ ಮೈಸೂರು, ಮಂಡ್ಯ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬಿಜಾಪುರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಗುಲ್ಬರ್ಗ, ಹಾವೇರಿ, ಕೋಲಾರ, ಕೊಪ್ಪಳ, ರಾಯಚೂರು, ರಾಮನಗರ, ತುಮಕೂರು, ವಿಜಯನಗರ, ಯಾದಗಿರಿ ಸೇರಿದಂತೆ 19 ಜಿಲ್ಲೆಗಳ ಅಂತರ್ಜಲದಲ್ಲಿ ಹೆಚ್ಚಿನ ಫ್ಲೋರೈಡ್ ಕಂಡುಬಂದಿದ್ದು, ಇಲ್ಲಿನ ಬೋರ್‌ವೆಲ್ ನೀರು ಕುಡಿಯಲು ಯೋಗ್ಯವಲ್ಲ ಎಂದು ವರದಿ ತಿಳಿಸಿದೆ.

ವಾರ್ಷಿಕ ಅಂತರ್ಜಲ ಗುಣಮಟ್ಟದ ವರದಿ: 2024ರಲ್ಲಿ ಶೇ.9.04 ಮಾದರಿಗಳು ಸುರಕ್ಷಿತ ಮಿತಿಗಿಂತ ಹೆಚ್ಚಿನ ಫ್ಲೋರೈಡ್ ಮಟ್ಟವನ್ನು ಹೊಂದಿದ್ದು, ಶೇ. 3.55 ಮಾದರಿಗಳಲ್ಲಿ 'ಆರ್ಸೆನಿಕ್' ಮಾಲಿನ್ಯ ಕಂಡುಬಂದಿದೆ ಎಂದು ಬಹಿರಂಗಪಡಿಸಿದೆ. ಮೇ. 2023ರಲ್ಲಿ ಅಂತರ್ಜಲ ಗುಣಮಟ್ಟವನ್ನು ಪರೀಕ್ಷಿಸಲು ದೇಶಾದ್ಯಂತ ಒಟ್ಟು 15,259 ಮೇಲ್ವಿಚಾರಣಾ ಸ್ಥಳಗಳನ್ನು ಆಯ್ಕೆ ಮಾಡಲಾಗಿತ್ತು. ಇವುಗಳಲ್ಲಿ 25 ಪ್ರತಿಶತ ಬಾವಿಗಳನ್ನು (ಬಿಐಎಸ್ 10500 ಪ್ರಕಾರ ಹೆಚ್ಚಿನ ಅಪಾಯ) ವಿವರವಾಗಿ ಅಧ್ಯಯನ ಮಾಡಲಾಗಿದೆ.

ಅಪಾಯಕಾರಿ ಮಟ್ಟ: ಮಾನ್ಸೂನ್ ಮೊದಲು ಮತ್ತು ನಂತರ 4,982 ಸ್ಥಳಗಳಿಂದ ಅಂತರ್ಜಲದ ಮಾದರಿ ಪರೀಕ್ಷೆ ಮಾಡಲಾಗಿದೆ. ಶೇ.20ರಷ್ಟು ನೀರಿನ ಮಾದರಿಗಳಲ್ಲಿ ನೈಟ್ರೇಟ್ ಸಾಂದ್ರತೆಯು ಪ್ರತಿ ಲೀಟರ್‌ಗೆ 45 ಮಿಲಿಗ್ರಾಂ (mg/L) ಮಿತಿಯನ್ನು ಮೀರಿದೆ ಎಂದು ವರದಿ ತಿಳಿಸಿದೆ. ಇದು ವಿಶ್ವ ಆರೋಗ್ಯ ಸಂಸ್ಥೆ (WHO) ಮತ್ತು ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ (BIS) ಕುಡಿಯುವ ನೀರಿಗೆ ನಿಗದಿಪಡಿಸಿದ ಮಿತಿಯಾಗಿದೆ.

ಯಾವ ರಾಜ್ಯದಲ್ಲಿ ಎಷ್ಟಿದೆ?: ರಾಜಸ್ಥಾನ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಶೇ.40 ಕ್ಕಿಂತ ಹೆಚ್ಚು ಮಾದರಿಗಳು ಮಿತಿಗಿಂತ ಹೆಚ್ಚಿನ ನೈಟ್ರೇಟ್ ಹೊಂದಿದ್ದರೆ, ಮಹಾರಾಷ್ಟ್ರದಲ್ಲಿ ಶೇ.35.74, ತೆಲಂಗಾಣ ಶೇ.27.48, ಆಂಧ್ರಪ್ರದೇಶ ಶೇ.23.5 ಮತ್ತು ಮಧ್ಯಪ್ರದೇಶದಲ್ಲಿ ಶೇ.22.58 ಮಾದರಿಗಳು ಕಲುಷಿತವಾಗಿವೆ. ಉತ್ತರ ಪ್ರದೇಶ, ಕೇರಳ, ಜಾರ್ಖಂಡ್ ಮತ್ತು ಬಿಹಾರದಲ್ಲಿ ಕಡಿಮೆ ಶೇಕಡಾವಾರು ಮಾಲಿನ್ಯವಿದೆ. ಅರುಣಾಚಲ ಪ್ರದೇಶ, ಅಸ್ಸಾಂ, ಗೋವಾ, ಮೇಘಾಲಯ, ಮಿಜೋರಾಂ ಮತ್ತು ನಾಗಾಲ್ಯಾಂಡ್‌ನ ಎಲ್ಲಾ ಮಾದರಿಗಳು ಸುರಕ್ಷಿತ ಮಿತಿಯಲ್ಲಿವೆ. ರಾಜಸ್ಥಾನ, ಮಧ್ಯಪ್ರದೇಶ ಮತ್ತು ಗುಜರಾತ್‌ನಂತಹ ರಾಜ್ಯಗಳಲ್ಲಿ 2015 ರಿಂದ 'ನೈಟ್ರೇಟ್' ಮಟ್ಟವು ಸ್ಥಿರವಾಗಿದೆ ಎಂದು CGWB ಹೇಳಿದೆ. ಆದರೆ, ಉತ್ತರ ಪ್ರದೇಶ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಹರಿಯಾಣದಲ್ಲಿ 2017 ರಿಂದ 2023 ರವರೆಗೆ ಮಾಲಿನ್ಯದ ಹೆಚ್ಚಳ ಕಂಡುಬಂದಿದೆ.

ನೈಟ್ರೇಟ್, ಫ್ಲೋರೈಡ್ ಮತ್ತು ಯುರೇನಿಯಂ ಅಂತರ್ಜಲದಲ್ಲಿ ಕರಗುತ್ತವೆ: ಅಂತರ್ಜಲದಲ್ಲಿ ಹೆಚ್ಚಿನ ಮಟ್ಟದ ನೈಟ್ರೇಟ್ ಕಂಡುಬಂದಿರುವ ಭಾರತದಲ್ಲಿ 15 ಜಿಲ್ಲೆಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ರಾಜಸ್ಥಾನದ ಬಾರ್ಮರ್, ಜೋಧಪುರ, ವಾರ್ಧಾ, ಬುಲ್ಢಾನ, ಅಮರಾವತಿ, ಮಹಾರಾಷ್ಟ್ರದ ನಾಂದೇಡ್, ಬೀಡ್, ಜಲಗಾಂವ್ ಮತ್ತು ಯವತ್ಮಾಲ್, ರಂಗಾರೆಡ್ಡಿ, ಆದಿಲಾಬಾದ್ ಮತ್ತು ತೆಲಂಗಾಣದ ಸಿದ್ದಿಪೇಟ್, ತಮಿಳುನಾಡಿನ ವಿಲ್ಲುಪುರಂ, ಆಂಧ್ರಪ್ರದೇಶದ ಪಲ್ನಾಡು ಮತ್ತು ಪಂಜಾಬ್‌ನ ಬಟಿಂಡಾ ಸೇರಿವೆ. ಅಂತರ್ಜಲದಲ್ಲಿ ಹೆಚ್ಚುತ್ತಿರುವ ನೈಟ್ರೇಟ್ ಮಟ್ಟಗಳು ಅತಿಯಾದ ನೀರಾವರಿಯ ಪರಿಣಾಮವಾಗಿರಬಹುದು, ಇದು ಮಣ್ಣಿನಲ್ಲಿ ಆಳವಾಗಿ ತಲುಪುವ ರಸಗೊಬ್ಬರಗಳಲ್ಲಿ ಇರುವ ನೈಟ್ರೇಟ್ ಕೂಡ ಆಗಿರಬಹುದು ಎಂದು ವರದಿ ಹೇಳಿದೆ.

ರಾಜಸ್ಥಾನ, ಹರಿಯಾಣ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ 'ಫ್ಲೋರೈಡ್' ಹೆಚ್ಚಿನ ಸಾಂದ್ರತೆಯು ಕಳವಳಕಾರಿ ವಿಷಯವಾಗಿದೆ. ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ಬಯಲು ಪ್ರದೇಶದಲ್ಲಿ ಆರ್ಸೆನಿಕ್ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದೆ ಎಂದು ಅದು ಹೇಳಿದೆ. ಈ ರಾಜ್ಯಗಳು ಪಶ್ಚಿಮ ಬಂಗಾಳ, ಜಾರ್ಖಂಡ್, ಬಿಹಾರ, ಉತ್ತರ ಪ್ರದೇಶ, ಅಸ್ಸಾಂ ಮತ್ತು ಮಣಿಪುರ. ಪಂಜಾಬ್‌ನ ಕೆಲವು ಭಾಗಗಳು ಮತ್ತು ಛತ್ತೀಸ್‌ಗಢದ ರಾಜ್‌ನಂದಗಾಂವ್ ಜಿಲ್ಲೆಯ ನೀರಿನಲ್ಲಿ ಹೆಚ್ಚಿನ ಪ್ರಮಾಣದ ಆರ್ಸೆನಿಕ್ ಕಂಡುಬಂದಿದೆ. ವರದಿಯಲ್ಲಿನ ಪ್ರಮುಖ ಕಳವಳವೆಂದರೆ ಹಲವು ಪ್ರದೇಶಗಳಲ್ಲಿ ಹೆಚ್ಚಿನ ಮಟ್ಟದ ಯುರೇನಿಯಂ. ರಾಜಸ್ಥಾನದ ಶೇ.42 ಮತ್ತು ಪಂಜಾಬ್‌ನ ಶೇ.30 ಮಾದರಿಗಳಲ್ಲಿ ಯುರೇನಿಯಂ ಮಾಲಿನ್ಯ ಕಂಡುಬಂದಿದೆ ಎಂದು ವರದಿ ಹೇಳುತ್ತದೆ.

ಆರೋಗ್ಯಕ್ಕೆ ಏಕೆ ಅಪಾಯಕಾರಿ?: ಹೆಚ್ಚಿನ 'ನೈಟ್ರೇಟ್' ಮಟ್ಟ ಶಿಶುಗಳಲ್ಲಿ 'ಬ್ಲೂ ಬೇಬಿ ಸಿಂಡ್ರೋಮ್' ನಂತಹ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡಬಹುದು. ಫ್ಲೋರೈಡ್ ಮತ್ತು ಆರ್ಸೆನಿಕ್ ಮಾಲಿನ್ಯಕಾರಕಗಳಿಗೆ ದೀರ್ಘಾವಧಿಯ ಆರೋಗ್ಯ ಪರಿಣಾಮಗಳನ್ನು ಉಂಟುಮಾಡಬಹುದು. ಫ್ಲೋರೈಡ್ ಮಾಲಿನ್ಯವು ಫ್ಲೋರೋಸಿಸ್‌ಗೆ ಕಾರಣವಾಗಬಹುದು ಮತ್ತು ಆರ್ಸೆನಿಕ್ ಮಾಲಿನ್ಯವು ಕ್ಯಾನ್ಸರ್ ಅಥವಾ ಚರ್ಮದ ಸಮಸ್ಯೆಗಳಿಗೆ ಕಾರಣವಾಗಬಹುದು. ಯುರೇನಿಯಂಗೆ ಮಿಶ್ರಿತ ನೀರನ್ನು ಕುಡಿಯುವುದರಿಂದ ಮೂತ್ರಪಿಂಡಗಳು ಹಾನಿಗೊಳಗಾಗಬಹುದು. ರಾಜಸ್ಥಾನ, ಗುಜರಾತ್, ಹರಿಯಾಣ, ಪಂಜಾಬ್, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕದ ಭಾಗಗಳಲ್ಲಿ ಅಂತರ್ಜಲದಲ್ಲಿ ಯುರೇನಿಯಂನ ಹೆಚ್ಚಿನ ಸಾಂದ್ರತೆಯು ಕಂಡುಬಂದಿದೆ.

ಜ.6, 8ರಂದು ದೇಸಿರಂಗ ನಾಟಕೋತ್ಸವ

ಮೈಸೂರು, ಜ.2(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಜ.6 ಮತ್ತು 8ರಂದು ಸಂಜೆ 6ಕ್ಕೆ ದೇಸಿರಂಗ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಕೃಷ್ಣ ಜನಮನ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನಾಟಕಾಸಕ್ತರಿಗಾಗಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ತರಬೇತಿ ಪಡೆದ ಶಿಬಿರಾರ್ಥಿಗಳು ಅಭಿನಯಿಸುವ ಎರಡು ನಾಟಕಗಳ ಪ್ರದರ್ಶನ ಏರ್ಪಡಿಸಲಾಗಿದೆ. ಜ.6ರಂದು ಸಂಜೆ 6ಕ್ಕೆ ಪ್ರಗತಿಪರ ಚಿಂತಕರಾದ ನಾ.ದಿವಾಕರ ದೇಸಿರಂಗ ನಾಟಕೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ರಂಗಕರ್ಮಿ ಡಿ. ನಾಗೇಂದ್ರ ಕುಮಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಚಿಂತಕ ಪ್ರೊ. ಲಿಂಗದೇವರು ಹಳೇಮನೆ ಅವರ 'ಅಕ್ಕ' ನಾಟಕ ಪ್ರದರ್ಶನಗೊಳ್ಳಲಿದೆ ಎಂದು ತಿಳಿಸಿದರು.

ಜ.8ರಂದು ಸಂಜೆ 6ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಸಮಾರೋಪ ನುಡಿ ಆಡುವರು. ಹಿರಿಯ ರಂಗಕರ್ಮಿ ಕೆ.ಜೆ.ಕಿಕ್ಕೇರಿ ನಾರಾಯಣ ಶೆಟ್ಟಿ ಪ್ರಮಾಣಪತ್ರ ವಿತರಿಸಲಿದ್ದಾರೆ. ಬಳಿಕ 'ಯಾನ' ನಾಟಕ ಪ್ರದರ್ಶನ ಜರುಗಲಿದೆ. ನಾಟಕಗಳಿಗೆ ಪ್ರವೇಶ ಶುಲ್ಕ ತಲಾ 100 ರೂ. ನಿಗದಿ ಮಾಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಕಾರ್ಯದರ್ಶಿ ಬಿ.ಎಸ್.ದಿನಮಣಿ ಉಪಸ್ಥಿತರಿದ್ದರು.

'ನಟನ'ದಲ್ಲಿ ಲಕ್ಷ್ಮೀಶ ತೋಳ್ಪಾಡಿ ಉಪನ್ಯಾಸ, ನಾಟಕ



ಮೈಸೂರು,ಜ.2–ಮೈಸೂರಿನ ಮತ್ತು ಸುತ್ತಮುತ್ತಲಿನ ಸದಭಿರುಚಿಯ, ಸಹೃದಯ ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಜ.5ರಂದು ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಬೆಳಗ್ಗೆ 11 ಗಂಟೆಗೆ 'ನಟನೆಯ ಆಧ್ಯಾತ್ಮ' ಕುರಿತು ಪ್ರಖ್ಯಾತ ವಾಗ್ಮಿಗಳು, ವಿದ್ವಾಂಸರೂ ಆದ ಲಕ್ಷ್ಮೀಶ ತೋಳ್ಪಾಡಿಯವರ ಉಪನ್ಯಾಸ ನಡೆಯಲಿದೆ. ಸಂಜೆ 06.30ಕ್ಕೆ ಸರಿಯಾಗಿ ಪ್ರಕಸಂ ಅರ್ಪಿಸುವ ಹಾಸ್ಯ ನಾಟಕ 'ಮಹಾಪೀಡೆ ಮಹಾಬ್ಲು' ಪ್ರದರ್ಶನಗೊಳ್ಳಲಿದೆ. ನಟ, ನಿರ್ದೇಶಕ, ನಾಟಕಕಾರ, ಸಂಘಟಕ ಎಲ್ಲವೂ ಆಗಿರುವ ರಾಜೇಂದ್ರ ಕಾರಂತರು ನಾಟಕವನ್ನು ರಚಿಸಿ, ನಿರ್ದೇಶನ ಮಾಡಿದ್ದಾರೆ. ಮಾಹಿತಿಗೆ 7259537777 ಸಂಪರ್ಕಿಸಬಹುದು.

ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ವಿಶ್ವಮಾನವ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಪ್ರಗತಿಪರ ಚಿಂತಕ ಪ್ರೊ.ಕೆ.ಕಾಳಚನ್ನೇಗೌಡ, ಉಪನ್ಯಾಸಕರಾದ ರಾಜೇಂದ್ರ ಪ್ರಸಾದ್ ಹೊನ್ನಲಗೆರೆ, ಸಂಘದ ಅಧ್ಯಕ್ಷ ಕೆ.ಎಸ್.ಕೃಷ್ಣ, ಉಪಾಧ್ಯಕ್ಷ ಜಯರಾಮೇಗೌಡ, ಒಕ್ಕಲಿಗ ಸಂಘದ ನಿರ್ದೇಶಕ ಡಾ.ಎಂ.ವಿ.ಮಂಚೇಗೌಡ ಅವರನ್ನು ಚಿತ್ರದಲ್ಲಿ ಕಾಣಬಹುದು.

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜ.2– ಜ.3ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ತುರ್ತು ಕಾಮಗಾರಿ ನಿಮಿತ್ತ ಹೆಚ್.ಡಿ.ಕೋಟೆ ಟೌನ್, ಮೇಟಿಕುಪ್ಪೆ, ಚಕ್ಕೂಡನಹಳ್ಳಿ, ಭೀಮನಹಳ್ಳಿ, ಹಿರೇಹಳ್ಳಿ, ಅಣ್ಣೂರು, ಪಡುವಕೋಟೆ, ಸವ್ವೆ, ನಾಗನಹಳ್ಳಿ ಮತ್ತು ಚಿಕ್ಕಕೆರೆಯೂರು ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಹಾಗೂ ಜ.4ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ಕಾಮಗಾರಿ ನಿಮಿತ್ತ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಮಾದಾಪುರ, ಕೆ.ಬೆಳ್ತೂರು, ಮನುಗನಹಳ್ಳಿ ಮತ್ತು ಬಾಚೇಗೌಡನಹಳ್ಳಿ ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮಹಿಳೆಯರಿಗೆ 2000 ಗ್ಯಾರಂಟಿ ಭಾಗ್ಯದ ಬದಲು ಬಾಣಂತಿಯರ ಸಾವು ನಿಲ್ಲಿಸಲು ಕ್ರಮ ಕೈಗೊಳ್ಳಿ

●ವಿಪಕ್ಷ ನಾಯಕ ಆರ್.ಅಶೋಕ್ ಒತ್ತಾಯ ●ದಿನೇ ದಿನೆ ಸರಣಿ ಸಾವು, ರಾಜ್ಯದ ಆತಂಕ ಸೃಷ್ಟಿಸಿದೆ ●ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸದೇ ಇರುವುದಕ್ಕೆ ಆಕ್ರೋಶ

ಬೆಂಗಳೂರು,ಜ.2(ಕೆಎಂಶಿ)– ಸರ್ಕಾರಿ ಆಸ್ಪತ್ರೆಗಳು ಬಾಣಂತಿಯರ ಪಾಲಿಗೆ ಮರಣ ಮೃದಂಗಗಳಾಗಿವೆ. ಮಹಿಳೆಯರಿಗೆ 2000 ರೂ. ಗ್ಯಾರಂಟಿ ಭಾಗ್ಯ ನೀಡುವ ಬದಲು ಬಾಣಂತಿಯರ ಸಾವು ನಿಲ್ಲಿಸುವತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಗಮನಹರಿಸಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಒತ್ತಾಯಿಸಿದ್ದಾರೆ.

ಆಸ್ಪತ್ರೆಗಳಿಗೆ ಕಳಪೆ ದ್ರಾವಣ ಪೂರೈಸಿದ ಕಂಪನಿ ವಿರುದ್ಧ ದೆಹಲಿಗೆ ಹೋಗಿ ದೂರು ಕೊಡುವುದಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದರು, ಇನ್ನೂ ಏಕೆ ದೂರು ಕೊಟ್ಟಿಲ್ಲ. ಆರೋಗ್ಯ ಸಚಿವರು ರಾಜೀನಾಮೆ ಕೊಟ್ಟರೆ, ಸಚಿವರು ಬದಲಾಗಿ, ಇಲಾಖೆ ಸಕ್ರಿಯಗೊಂಡು ಬಾಣಂತಿಯರ ಸಾವಿಗೆ ಪರಿಹಾರ ದೊರೆಯಲು ಸಾಧ್ಯವಾಗಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಣಂತಿಯರ ಸಾವು ಪ್ರಕರಣಗಳ ನ್ಯಾಯಾಂಗ ತನಿಖೆ ಆಗಬೇಕು, ಬಾಣಂತಿಯರ ಸರಣಿ ಸಾವು ಸರ್ಕಾರಿ ಪ್ರಾಯೋಜಿತ ಕೊಲೆಗೆ ಸಮನಾಗಿದೆ, ಇಷ್ಟೆಲ್ಲಾ ಆಗುತ್ತಿದ್ದರೂ ರಾಜ್ಯ ಸರ್ಕಾರಕ್ಕೆ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಅನ್ನಿಸುತ್ತಿಲ್ಲವೇ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ನಾಯಕರು ಮಹಿಳಾ ಸಬಲೀಕರಣದ ಬಗ್ಗೆ ಮಾತಾಡುತ್ತಾರೆ, 2 ಸಾವಿರ ರೂ. ನೀಡುವ ಬದಲು ಮಹಿಳೆಯರ ಜೀವ ಉಳಿಸಿ, ಬಾಣಂತಿಯರಿಗೆ ಬದುಕುವ ಗ್ಯಾರಂಟಿ ಮೊದಲು ನೀಡಲಿ.

ಇದುವರೆಗೆ ಒಟ್ಟು 736 ತಾಯಂದಿರು ಮೃತಪಟ್ಟಿದ್ದಾರೆ, ಇದಕ್ಕೆ ಸರ್ಕಾರವೇ ನೇರ ಹೊಣೆಯಾಗಿದೆ, ಹುಬ್ಬಳ್ಳಿಯಲ್ಲಿ ಬಾಣಂತಿ ಸತ್ತಿದ್ದಕ್ಕೆ ಅವರ ಪತಿಯೂ ಆತ್ಮಹತ್ಯೆಗೆ ಯತ್ನಿಸಿದ್ದಾರೆ, ತಿಪಟೂರಿನಲ್ಲೂ ಒಬ್ಬ ಬಾಣಂತಿ ಮೃತಪಟ್ಟಿದ್ದಾರೆ, ಆಸ್ಪತ್ರೆಗೆ ಪೂರೈಸಿದ ಕಳಪೆ ಐವಿ ದ್ರಾವಣದಿಂದಾಗಿ ಬಾಣಂತಿಯರು ಮೃತರಾಗುತ್ತಿದ್ದಾರೆ.

ಬೆಳಗಾವಿಯ ಕಾಂಗ್ರೆಸ್ ಸಮಾವೇಶಕ್ಕೆ ಆಗಮಿಸಿದ್ದ ಆ ಪಕ್ಷದ ಹಿರಿಯ ನಾಯಕರಲ್ಲಿ ಒಬ್ಬರೂ ಮೃತಪಟ್ಟ ಬಾಣಂತಿಯರ ಕುಟುಂಬವನ್ನು ಭೇಟಿ ಮಾಡಲಿಲ್ಲ, ಸಾಂತ್ವನ ಹೇಳಲಿಲ್ಲ. ಔಷಧ ಪೂರೈಕೆ ವಿಚಾರದಲ್ಲಿ ಡ್ರಗ್ ಕಂಟ್ರೋಲರ್ ತಪ್ಪುಗಳ ಬಗ್ಗೆ ಸರ್ಕಾರದ ಅಧೀನ ಕಾರ್ಯದರ್ಶಿ ನೋಟಿಸ್ ನೀಡಿದ್ದಾರೆ, ಆದರೆ, ಅಧಿವೇಶನದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಎಲ್ಲ ಕ್ರಮ ಕೈಗೊಂಡಿದ್ದೇವೆ ಎಂದು ಹೇಳಿದ್ದಾರೆ.

ಡೆತ್ ಆಡಿಟ್ ಬಗ್ಗೆ ಸರ್ಕಾರ ಹೇಳಿದ್ದರೂ, ಈವರೆಗೆ ವರದಿ ಬಂದಿಲ್ಲ, ಅಧಿವೇಶನದಲ್ಲಿ ನುಣುಚಿಕೊಳ್ಳಲು ಸರ್ಕಾರ ಉತ್ತರ ನೀಡಿದೆಯೇ ಹೊರತು ಯಾವುದೇ ಕಠಿಣ ಕ್ರಮ ಜರುಗಿಸಿಲ್ಲ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಪಕ್ಷ ನಾಯಕ ಆರ್.ಅಶೋಕ್.

462 ಔಷಧಿ ಕಳಪೆ: ಐವಿ ದ್ರಾವಣ ರಾಜ್ಯ ಸರ್ಕಾರ ಪೂರೈಸುತ್ತದೆ, ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರವಿಲ್ಲ, ರಾಜ್ಯ ಸರ್ಕಾರ ಔಷಧಿ ಪರೀಕ್ಷಿಸಬೇಕು, ಬೇರೆ ರಾಜ್ಯಗಳಲ್ಲಿ ಬಾಣಂತಿಯರ ಸಾವುಗಳು ಸಂಭವಿಸಿಲ್ಲ, ಕರ್ನಾಟಕದಲ್ಲಿ ಮಾತ್ರ ಈ ಘಟನೆಗಳು ನಡೆಯುತ್ತಿವೆ, 462 ಔಷಧಿಗಳು ಕಳಪೆ ಎಂಬುದಾಗಿ ಸರ್ಕಾರವೇ ಹೇಳಿದೆ, ಆದರೂ ಇದೇ ಔಷಧಿಗಳನ್ನು ಆಸ್ಪತ್ರೆಗೆ ಪೂರೈಸಲಾಗುತ್ತಿದೆ ಎಂದು ಆರ್.ಅಶೋಕ್ ಹೇಳಿದರು.

ಒಂದು ವರ್ಷದಲ್ಲಿ ಬಿಜೆಪಿ ಬಹಳಷ್ಟು ಹೋರಾಟಗಳನ್ನು ನಡೆಸಿ ತಾರ್ಕಿಕ ಅಂತ್ಯಕ್ಕೆ ಒಯ್ದಿದೆ, ಬಾಣಂತಿಯರ ಸಾವಿನ ವಿರುದ್ಧದ ಹೋರಾಟವನ್ನೂ ನಿಲ್ಲಿಸುವುದಿಲ್ಲ, ಜನವರಿ 4 ರಂದು ಕಲಬುರಗಿಯಲ್ಲಿ ಬಿಜೆಪಿ ಬೃಹತ್ ಹೋರಾಟ ನಡೆಸಲಿದೆ, ರಾಜ್ಯಪಾಲರನ್ನೂ ಭೇಟಿ ಮಾಡಲಿದ್ದೇವೆ. ಔಷಧ ನಿಯಂತ್ರಣದಲ್ಲಿ ಗೋಲ್ಮಾಲ್ ನಡೆಯುತ್ತಿರುವುದನ್ನು ತಪ್ಪಿಸಿ, ಬಾಣಂತಿಯರಿಗೆ ಬದುಕುವ ಗ್ಯಾರಂಟಿಯನ್ನು ಸರ್ಕಾರ ಕೊಡಲಿ ಎಂದರು.

ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಸಚಿವ ಪ್ರಿಯಾಂಕ್ ಖರ್ಗೆ ಹೆಸರು ಮೃತನ ಡೆತ್‌ನೋಟ್‌ನಲ್ಲಿದೆ. ಸಚಿವರ ಆಪ್ತನೇ ಈ ಘಟನೆಗೆ ಕಾರಣ. ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದ ಕೆ.ಎಸ್.ಈಶ್ವರಪ್ಪ ಅವರನ್ನು ಟಾರ್ಗೆಟ್ ಮಾಡಿ, ಅಂದು ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದ್ದರು, ಒಬ್ಬ ವ್ಯಕ್ತಿ ಆತ್ಮಹತ್ಯೆ ನಿರ್ಧಾರಕ್ಕೆ ಬರಬೇಕಾದರೆ ಎಷ್ಟು ವ್ಯಥೆಪಟ್ಟಿರಬಹುದು, ಎಷ್ಟು ಮಂದಿ ಬೀದಿಗೆ ಬಂದಿರಬಹುದು ಎಂಬುದಾಗಿ ಪ್ರಶ್ನಿಸಿದ್ದರು.

ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹ

“ಪ್ರಸ್ತುತ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದಲ್ಲಿ ಇದೇ ಪ್ರಿಯಾಂಕ್ ಖರ್ಗೆ ಏಕೆ ರಾಜೀನಾಮೆ ನೀಡುತ್ತಿಲ್ಲ, ಮಾನ, ಮರ್ಯಾದೆ ಇದ್ದರೆ ರಾಜೀನಾಮೆ ನೀಡಲಿ ಎಂದು ಆರ್.ಅಶೋಕ್ ಒತ್ತಾಯಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಎಂಬ ಕಾರಣಕ್ಕೆ ಪ್ರಿಯಾಂಕ್ ಖರ್ಗೆ ರಾಜೀನಾಮೆ ಪಡೆಯಲು ಸಿದ್ದರಾಮಯ್ಯ ನಡುಗುತ್ತಿದ್ದಾರೆ, ನಾವು ಬಟ್ಟೆಹರಿದುಕೊಳ್ಳುವ ಮೊದಲು ಅವರ ಬಟ್ಟೆ ಹರಿದು ಹೋಗಲಿದೆ ಎಂದು ವ್ಯಂಗ್ಯವಾಡಿದರು.

ರಾಜ್ಯದಲ್ಲಿ ಸರಣಿ ಆತ್ಮಹತ್ಯೆ ಸಂಭವಿಸುತ್ತಿವೆ, ಸರ್ಕಾರದ ಒತ್ತಡ ತಾಳಲಾಗದೆ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಇದು ಕೊಲೆಗಡುಕ ಸರ್ಕಾರವಾಗಿದೆ. ಗೋ ರಕ್ಷಣೆ ಎನ್ನುವುದು ಭಾರತದ ಸಂಸ್ಕೃತಿ, ಇದಕ್ಕಾಗಿ ಬಿಜೆಪಿ ಸರ್ಕಾರ ಯೋಜನೆ ರೂಪಿಸಿತ್ತು, ಈಗಿನ ರಾಜ್ಯ ಪಾಪರ್ ಸರ್ಕಾರವಾಗಿದ್ದು ಗೋವಿನ ಅನ್ನಕ್ಕೂ ಕನ್ನ ಹಾಕಿದೆ ಎಂದರು.

ಪ್ರವಾಸಿ ವಾಹನಗಳ ಚಾಲಕರಿಂದ ಹಣ ಸುಲಿಗೆ; ಕೆಆರ್‌ಎಸ್ ಠಾಣೆಯ ಮೂವರು ಪೇದೆಗಳ ಅಮಾನತು

ಮಂಡ್ಯ: ಪ್ರವಾಸಿಗರ ವಾಹನಗಳಿಂದ ಅಕ್ರಮವಾಗಿ ಹಣ ಸುಲಿಗೆ ಮಾಡಿ ಕಿರುಕುಳ ನೀಡುತ್ತಿದ್ದ ಕೆಆರ್‌ಎಸ್ ಪೊಲೀಸ್ ಠಾಣೆಯ ಮುಖ್ಯ ಪೇದೆ ಮತ್ತು ಇಬ್ಬರು ಪೊಲೀಸ್ ಪೇದೆ ಸೇರಿದಂತೆ ಮೂವರನ್ನು ಅಮಾನತು ಮಾಡಲಾಗಿದೆ.

ಠಾಣೆಯ ಮುಖ್ಯ ಪೇದೆ ಪುರುಷೋತ್ತಮ್ ಮತ್ತು ಎಸ್‌ಬಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೇದೆಗಳಾದ ಅನಿಲ್ ಕುಮಾರ್ ಹಾಗೂ ಪ್ರಭುಸ್ವಾಮಿ ಅವರುಗಳನ್ನು ಅಮಾನತುಗೊಳಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಆದೇಶ ಹೊರಡಿಸಿದ್ದಾರೆ.



ಫೈಲ್ ಚಿತ್ರ

ಕೆಆರ್‌ಎಸ್ ವೀಕ್ಷಣೆಗೆ ಪ್ರತಿನಿತ್ಯ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದರಿಂದ ಬಂದೋಬಸ್ತ್ ಮತ್ತು ಸಂಚಾರ ವ್ಯವಸ್ಥೆಯನ್ನು ಸುಗಮವಾಗಿ ನಿರ್ವಹಿಸಲು ಈ ಮೂವರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು.

ಆದರೆ ಈ ಮೂವರು ಕೆಆರ್‌ಎಸ್ ವೀಕ್ಷಣೆಗಾಗಿ ಬರುವ ಪ್ರವಾಸಿಗರ ವಾಹನಗಳಿಂದ ಹಣವನ್ನು ಬಲವಂತವಾಗಿ ಸುಲಿಗೆ ಮಾಡುತ್ತಿದ್ದರು. ಅದರಲ್ಲೂ ಹೆಚ್ಚಾಗಿ ಹೊರ ರಾಜ್ಯಗಳಾದ ತಮಿಳುನಾಡು, ಆಂಧ್ರ ಪ್ರದೇಶ, ಕೇರಳ ಸೇರಿದಂತೆ ಇತರೆಡೆಗಳಿಂದ ಬರುತ್ತಿದ್ದ ವಾಹನಗಳನ್ನು ಗುರಿಯಾಗಿಸಿಕೊಂಡು ಚಾಲಕರಿಂದ ಹಣ ವಸೂಲಿ ಮಾಡುತ್ತಿದ್ದರು ಎನ್ನಲಾಗಿದೆ.

ಈ ಬಗ್ಗೆ ಸಾರ್ವಜನಿಕರು ವೀಡಿಯೋ ಚಿತ್ರೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ಪೊಲೀಸರ ಹಣ ವಸೂಲಿ ಕುರಿತು ವೀಡಿಯೋ ಹರಿಬಿಟ್ಟಿದ್ದರು. ಜೊತೆಗೆ ಸಾರ್ವಜನಿಕರು ಸಹ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ದೂರು ನೀಡಿದ್ದರು ಎನ್ನಲಾಗಿದೆ ಈ ಸಂಬಂಧ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಅವರು ಈ ಮೂವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಕೆಆರ್‌ಎಸ್ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣವಾಗಿದ್ದು, ವೀಕ್ಷಣೆಗಾಗಿ ಬರುವ ಪ್ರವಾಸಿ ವಾಹನಗಳ ಚಾಲಕರನ್ನು ತಪಾಸಣೆ ನಡೆಸುವ ನೆಪದಲ್ಲಿ ಸುಲಿಗೆ ಮಾಡುತ್ತಿದ್ದರು ಎಂಬ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬಂದಿದ್ದವು. ಈ ಮೂವರ ಮೇಲೆ ದೂರು ಕೇಳಿ ಬಂದರೂ ಯಾರೂ ಕ್ರಮ ಕೈಗೊಂಡಿರಲಿಲ್ಲ. ಆದರೆ ವೀಡಿಯೋ ಸಾಕ್ಷ್ಯಾಧಾರಗಳು ಸಿಕ್ಕ ಹಿನ್ನೆಲೆಯಲ್ಲಿ ಪೊಲೀಸ್ ಅಧಿಕಾರಿಗಳು ಕ್ರಮ ಜರುಗಿಸಿದ್ದು ಪ್ರವಾಸಿಗರಿಗೆ ಸಮಾಧಾನ ತಂದಿದೆ.

ಗ್ರಾಮೀಣ ಪ್ರದೇಶಕ್ಕೂ ಕಾಲಿಟ್ಟ ಸರಗಳ್ಳರು

ಟೀ ಅಂಗಡಿ ಮಾಲಕಿ ಸರ ಕದ್ದು ಪರಾರಿ



ಸವಿತಮ್ಮ

ಭಾರತೀನಗರ, ಜ.2– ನಗರ ಪ್ರದೇಶಗಳಲ್ಲಿ ನಿರ್ಭಯವಾಗಿ ಸರಗಳ್ಳತನ ನಡೆಸುತ್ತಿದ್ದ ಸರಗಳ್ಳರು ಇದೀಗ ಗ್ರಾಮೀಣ ಪ್ರದೇಶಕ್ಕೂ ಕಾಲಿಟ್ಟಿದ್ದಾರೆ. ಟೀ ಅಂಗಡಿ ನಡೆಸುತ್ತಿದ್ದ ಮಹಿಳೆಯೊಬ್ಬರ ಮಂಗಲ್ಯ ಸರವನ್ನು ಹೊಂಚು ಹಾಕಿ ಕಸಿದು ಪರಾರಿಯಾಗುವ ಮೂಲಕ ಗ್ರಾಮಾಂತರ ಪ್ರದೇಶದಲ್ಲೂ ತಮ್ಮ ಕೈ ಚಳಕ ತೋರಿಸಿದ್ದಾರೆ.

ಬೈಕ್‌ನಲ್ಲಿ ಬಂದ ಇಬ್ಬರು ದುಷ್ಕರ್ಮಿಗಳು ಕೃತ್ಯವೆಸಗಿ ಪರಾರಿಯಾಗಿದ್ದಾರೆ. ದೇವರಹಳ್ಳಿ ಗೇಟ್ ಬಳಿ ಘಟನೆ ಸಂಭವಿಸಿದೆ. ಕುರಿ ಕೆಂಪನ ದೊಡ್ಡಿ ಗ್ರಾಮದ ರೈತ ಮುಖಂಡ ಕೆ.ಸಿ.ಮಾದೇ ಗೌಡರ ಪತ್ನಿ ಸವಿತಮ್ಮ ಎಂಬುವರೇ 30 ಗ್ರಾಂ ಮಾಂಗಲ್ಯ ಸರ ಕಳೆದುಕೊಂಡವರು.

ಈಕೆ ದೇವರಹಳ್ಳಿ ಗೇಟ್ ಬಳಿ ಟೀ ಅಂಗಡಿ ನಡೆಸುತ್ತಿದ್ದು, ಇಬ್ಬರು ದುಷ್ಕರ್ಮಿಗಳು ಎರಡು–ಮೂರು ಭಾರಿ ಅಂಗಡಿಗೆ ಬಂದು ಟೀ ಕುಡಿದು ಹೊಂಚು ಹಾಕಿ ಹೋಗಿದ್ದಾರೆ. ನಂತರ ಯಾರು ಇಲ್ಲದ ಸಮಯವನ್ನು ನೋಡಿ ಸವಿತಮ್ಮ ಅವರ ಕುತ್ತಿಗೆಯಲ್ಲಿದ್ದ ಮಾಂಗಲ್ಯ ಸರವನ್ನು ಕಸಿದು ಪರಾರಿಯಾಗಿದ್ದಾರೆ. ಈ ವೇಳೆ ಸಹಾಯಕ್ಕೆ ಕೂಗಿ ಕರೆದರೂ ಸನಿಹದಲ್ಲಿ ಯಾರೂ ಇಲ್ಲದಿದ್ದರಿಂದ ಯಾರೂ ಬರಲಿಲ್ಲವೆನ್ನಲಾಗಿದೆ.

ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ದೂರು ನೀಡಲಾಗಿದ್ದು, ವಿಷಯ ತಿಳಿದು ಸ್ಥಳಕ್ಕೆ ಡಿವೈಎಸ್‌ಪಿ ಕೃಷ್ಣಪ್ಪ, ಇನ್ಸ್‌ಪೆಕ್ಟರ್ ಆನಂದ್ ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬಸ್ ಡಿಕ್ಕಿ: ಬೈಕ್ ಸವಾರ ಸಾವು

ಕಿಕ್ಕೇರಿ ಬಳಿ ದುರಂತ, ಕೆಎಸ್‌ಆರ್‌ಟಿಸಿ ಬಸ್ ವಶಕ್ಕೆ

ಕಿಕ್ಕೇರಿ: ಹೋಬಳಿಯ ಗಾಂಧಿನಗರದ ಸಮೀಪದ ಕೃಷ್ಣಾಪುರ ಬಳಿ ರಾಜ್ಯ ಹೆದ್ದಾರಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್ಸೊಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ಬುಧವಾರ ರಾತ್ರಿ ಜರುಗಿದೆ.

ಗಾಂಧಿನಗರದ ಮೊಗಣ್ಣಶೆಟ್ಟಿ(60) ಮೃತ ದುರ್ದೈವಿ. ಕಿಕ್ಕೇರಿಗೆ ಅನ್ಯಕಾರ್ಯ ನಿಮಿತ್ತ ತೆರಳಿದ್ದ ಈತ ಕೆಲಸ ಮುಗಿಸಿಕೊಂಡು ಗ್ರಾಮಕ್ಕೆ ವಾಪಾಸಾಗುತ್ತಿದ್ದಾಗ ಕೃಷ್ಣಾಪುರ ಬಳಿಯ ಸುರವರ್ಧಕ ಲಿಕ್ಕರ್ ಷಾಪ್ ಬಳಿ ಕೆ.ಆರ್.ಪೇಟೆ ಮಾರ್ಗವಾಗಿ ಚನ್ನರಾಯಪಟ್ಟಣ ಕಡೆಗೆ ತೆರಳುತ್ತಿದ್ದ ರಾಜ್ಯ ಸಾರಿಗೆ ಬಸ್ ಬೈಕ್‌ಗೆ ಢಿಕ್ಕಿ ಹೊಡೆದಿದೆ. ಇದರಿಂದ ಸವಾರ ಸ್ಥಳದಲ್ಲಿಯೇ ತೀವ್ರ ರಕ್ತಸ್ರಾವವಾಗಿ ಅಸುನೀಗಿದ್ದಾನೆ. ವಿಷಯ ತಿಳಿದು ಕಿಕ್ಕೇರಿ ಇನ್ಸ್‌ಪೆಕ್ಟರ್ ರೇವತಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರಕರಣಕ್ಕೆ ಚಾಲಕನ ಅತಿ ವೇಗ, ಅಜಾಗರೂಕತೆ ಚಾಲನೆಯೇ ಕಾರಣ ಎನ್ನಲಾಗಿದೆ ಕಿಕ್ಕೇರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಬಸ್ ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ.

ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣ

ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ



ಮಂಡ್ಯ, ಜ.2– ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆಗೆ ಸಚಿವ ಪ್ರಿಯಾಂಕ ಖರ್ಗೆ ಅವರೇ ಕಾರಣರೆಂದು ಆರೋಪಿಸಿದ ಬಿಜೆಪಿ ಕಾರ್ಯಕರ್ತರು, ಸಚಿವರ ರಾಜೀನಾಮೆಗೆ ಆಗ್ರಹಿಸಿ ನಗರದಲ್ಲಿ ಪ್ರತಿಭಟನೆ ನಡೆಸಿದರು. ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ವಿಧಾನಪರಿಷತ್ ಮಾಜಿ ಸದಸ್ಯ ಹಾಗೂ ರಾಜ್ಯ ಬಿಜೆಪಿ ವಕ್ತಾರ ಅಶ್ವತ್ಥ ನಾರಾಯಣ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತಾವಧಿಯಲ್ಲಿ ಸರ್ಕಾರಿ ಪ್ರಾಯೋಜಿತ ಆತ್ಮಹತ್ಯೆಗಳು ಅಥವಾ ಸರ್ಕಾರದ ಕುಮ್ಮಕ್ಕಿನ ಆತ್ಮಹತ್ಯೆ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿದೆ. ಸಚಿವರು, ಆಡಳಿತ ಪಕ್ಷದ ಶಾಸಕರ ಕುಮ್ಮಕ್ಕಿನಿಂದ ಹಿಂದೆಂದೂ ಇಂಥ ಸರಣಿ ಆತ್ಮಹತ್ಯೆ ಪ್ರಕಣಗಳನ್ನು ಕೇಳಿರಲಿಲ್ಲ ಎಂದು ಆರೋಪಿಸಿದರು.

ಟೆಂಡರ್ ಮಾಡಿಕೊಡಲು ಶೇ.5ರಷ್ಟು ದುಡ್ಡಿನ ಬೇಡಿಕೆ ಇಟ್ಟಿರುತ್ತಾನೆ. ನಾನು ಪ್ರಿಯಾಂಕ ಖರ್ಗೆ ಹೇಳಿದ ಮಾತನ್ನು ಮೀರುವುದಿಲ್ಲ. ಸಚಿವರ ಬೆಂಬಲ ಇದೆ ಎಂದು ರಾಜು ಕಪನೂರ್ ಹೇಳಿದ್ದಾಗಿ ಸಚಿನ್ ಡೆತ್‌ನೋಟ್‌ನಲ್ಲಿ ತಿಳಿಸಿದ್ದಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ಬಳಿಕ ರಾಜ್ಯ ಸರ್ಕಾರ ಕರ್ನಾಟಕ ರಾಜ್ಯಕ್ಕೆ ಆತ್ಮಹತ್ಯೆ ಭಾಗ್ಯವನ್ನು ದಯಪಾಲಿಸಿದೆ. ಭ್ರಷ್ಟಾಚಾರ ಬಯಲಾದ್ದರಿಂದ ವಾಲ್ಮೀಕಿ ನಿಗಮದ ಅಕೌಂಟೆಂಟ್ ಚಂದ್ರಶೇಖರ್ ಮೊದಲ ಆತ್ಮಹತ್ಯೆ ಮಾಡಿಕೊಂಡಿದ್ದು, ಬಿಜೆಪಿ ಹೋರಾಟದ ಫಲವಾಗಿ ಸಚಿವ ನಾಗೇಂದ್ರ ರಾಜಿನಾಮೆ ಕೊಟ್ಟಿದ್ದರು ಎಂದು ಹೇಳಿದರು. ನಂತರ ಲಕ್ಷ್ಮಿ ಹೆಬ್ಬಾಳ್ಕರ್ ಪಿಎ ಹೆಸರು ಬರೆದಿಟ್ಟು ರುದ್ರಣ್ಣ ಯಡವಣ್ಣವರ್ ಆತ್ಮಹತ್ಯೆ ಮಾಡಿಕೊಂಡಿದ್ದರು. ದಾವಣಗೆರೆಯಲ್ಲಿ ಗುತ್ತಿಗೆದಾರರೊಬ್ಬರು ಬಾಕಿ ಹಣ ಸಿಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾಗಡಿಯಲ್ಲಿ ಕ್ರಷರ್ ಲಾರಿ ಮಾಲೀಕರೊಬ್ಬರು ಲಂಚ ಕೊಡಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯಾದಗಿರಿಯಲ್ಲಿ ಪಿಎಸ್‌ಐ ಪರಶುರಾಮ್, ಸ್ಥಳೀಯ ಶಾಸಕನ ಪುತ್ರನ ಒತ್ತಡ ತಡೆಯಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ಸಿಬಿಐ ತನಿಖೆಗೆ ಒತ್ತಾಯ: ಹಿಂದೂ ಸಮಾಜದ ಸಿದ್ದಲಿಂಗ ಸ್ವಾಮೀಜಿ, ಶಾಸಕ ಬಸವರಾಜ ಮತ್ತಿಮೂಡ, ಕಲಬುರ್ಗಿ ಬಿಜೆಪಿ ನಾಯಕ ಚಂದುಪಾಟೀಲ, ಮಣಿಕಂಠ ರಾಥೋಡ್ ಅವರ ಕೊಲೆಗೆ ಸಂಚು ರೂಪಿಸಿದ್ದಾಗಿ ಡೆತ್ ನೋಟ್ ತಿಳಿಸಿದೆ. ಸಿದ್ದಲಿಂಗಸ್ವಾಮಿಜಿ ಅವರ ಧ್ವನಿ ಅಡಗಿಸಲು ಮಹಾರಾಷ್ಟ್ರದ ಸುಪಾರಿ ಕಿಲ್ಲರ್‌ಗಳನ್ನು ಬಳಸುವ ವಿಚಾರವೂ ಡೆತ್‌ನೋಟ್‌ನಲ್ಲಿದೆ. ಹಾಗಾಗಿ ಇದೊಂದು ಗಂಭೀರ ವಿಚಾರ. ಆದ್ದರಿಂದ ಇದನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಆಗ್ರಹಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಡಾ.ಸಿದ್ದರಾಮಯ್ಯ, ಸಚ್ಚಿದಾನಂದ ಇಂಡುವಾಳು, ವಸಂತ್‌ಕುಮಾರ್, ಎಚ್.ಆರ್.ಅರವಿಂದ್, ಅಶೋಕ್‌ಕುಮಾರ್, ಅಶೋಕ್ ಜಯರಾಂ, ಶ್ರೀಧರ್, ವಿದ್ಯಾ ನಾಗೇಂದ್ರ ಸಿ.ಟಿ.ಮಂಜುನಾಥ್, ವಿವೇಕ್, ನಾಗಾನಂದ, ಹೊಸಹಳ್ಳಿ ಶಿವು, ಸಿದ್ದರಾಜುಗೌಡ, ಪೀಹಳ್ಳಿ ರಮೇಶ್ ಭಾಗವಹಿಸಿದ್ದರು.

ಮುಖ್ಯಮಂತ್ರಿಗಳಿಂದ ಗ್ರಾಪಂ ಸದಸ್ಯರಿಗೆ ಅಪಮಾನ

ಅಧಿಕಾರಕ್ಕೆ ಬಂದು ಒಂದು ಮುಕ್ಕಾಲು ವರ್ಷವಾದರೂ ಕೆ.ಆರ್.ಪೇಟೆ ತಾಲೂಕಿಗೆ ಒಂದೇ ಒಂದು ಆಶ್ರಯ ಮನೆ ಮಂಜೂರು ಮಾಡದೆ ಅನ್ಯಾಯ

ನಾನು ಸಂಕಷ್ಟದ ಪರಿಸ್ಥಿತಿಯಲ್ಲಿ ಶಾಸಕನಾಗಿದ್ದೇನೆ. ರಾಜ್ಯದ ಸಚಿವರನ್ನು ಹೊರತುಪಡಿಸಿ ನಾನು ಸೇರಿದಂತೆ ಯಾವುದೇ ಪಕ್ಷದ ಶಾಸಕರಿಗೆ ಕನಿಷ್ಠ ಅಭಿವೃದ್ಧಿಗಾದರೂ ಸೂಕ್ತ ಅನುದಾನ ನೀಡುತ್ತಿಲ್ಲ. ಇದರಿಂದ ನನ್ನ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ತೀವ್ರ ಹಿನ್ನಡೆಯಾಗಿದೆ. ಈ ಬಗ್ಗೆ ನಾನು ಎಲ್ಲಿ ಬೇಕಾದರೂ ಘಂಟಾಘೋಷವಾಗಿ ಹೇಳಬಲ್ಲೆ –ಹೆಚ್.ಟಿ.ಮಂಜು



ಭಾರತ್ ನಿರ್ಮಾಣ್ ರಾಜೀವ್ ಗಾಂಧೀ ಸೇವಾ ಕೇಂದ್ರದ ನೂತನ ಕಟ್ಟಡವನ್ನು ಶಾಸಕ ಎಚ್.ಟಿ.ಮಂಜು ಅವರು ಉದ್ಘಾಟಿಸಿದರು.

ಕೆ.ಆರ್.ಪೇಟೆ, ಜ.2– ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಸುಮಾರು ಒಂದು ಮುಕ್ಕಾಲು ವರ್ಷಗಳಾಯಿತು. ಆದರೂ ಸಹ ನನ್ನ ಕ್ಷೇತ್ರದ ಗ್ರಾಮ ಪಂಚಾಯಿತಿಗಳಿಗೆ ಒಂದೇ ಒಂದು ಆಶ್ರಯ ಮನೆ ಮಂಜೂರು ಮಾಡಿಲ್ಲ. ಇದು ಗ್ರಾಮ ಪಂಚಾಯಿತಿ ಸದಸ್ಯರಿಗೆ ಮುಖ್ಯಮಂತ್ರಿಗಳು ಹಾಗೂ ರಾಜ್ಯ ಸರ್ಕಾರವು ಮಾಡುತ್ತಿರುವ ಅವಮಾನವಾಗಿದೆ ಎಂದು ಶಾಸಕ ಹೆಚ್.ಟಿ.ಮಂಜು ಆಪಾದಿಸಿದ್ದಾರೆ.

ತಾಲೂಕಿನ ಸಾರಂಗಿ ಗ್ರಾಮ ಪಂಚಾಯತ್ ಕೇಂದ್ರದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ನಿರ್ಮಾಣ ಮಾಡಿರುವ ಭಾರತ್ ನಿರ್ಮಾಣ್ ರಾಜೀವ್ ಗಾಂಧೀ ಸೇವಾ ಕೇಂದ್ರದ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಇದರಿಂದ ಗ್ರಾಮ ಪಂಚಾಯಿತಿ ಸದಸ್ಯರು ಹಳ್ಳಿಗಳಲ್ಲಿ ತಲೆ ಎತ್ತಿ ತಿರುಗಾಡಲು ಸಾಧ್ಯವಾಗುತ್ತಿಲ್ಲ. ಅಷ್ಟೋ, ಇಷ್ಟೋ ನರೇಗಾ ಕಾಮಗಾರಿಗಳ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರು.

ಹಿಂದೆ ಬೊಮ್ಮಾಯಿ ಅವರು ಮುಖ್ಯಮಂತ್ರಿಗಳಾಗಿದ್ದ ವೇಳೆ ಒಂದು ಸಲ ಮಾತ್ರ ಪ್ರತಿ ಗ್ರಾಮ ಪಂಚಾಯಿತಿ ಸದಸ್ಯರ ಮೂಲಕ ಎರಡೆರಡು ಮನೆಗಳನ್ನು ಬಡವರಿಗೆ ಹಂಚಿಕೆ ಮಾಡಲಾಗಿತ್ತು. ನಂತರ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ತಾಲೂಕಿಗೆ ಒಂದೇ ಒಂದು ಆಶ್ರಯ ಮನೆಯನ್ನು ಮಂಜೂರು ಮಾಡದೇ ಇರುವುದು ಬಡವರಿಗೆ ಮಾಡಿದ ಮೋಸವಾಗಿದೆ. ಇದರಿಂದ ನಮ್ಮ ಗ್ರಾಮ ಪಂಚಾಯಿತಿ ಸದಸ್ಯರು ಇಂತಹ ಅವಧಿಯಲ್ಲಿ ಸದಸ್ಯರಾಗಬಾರದಿತ್ತು ಎಂದು ಹೇಳುವಂತಾಗಿದೆ. ಇನ್ನಾದರೂ ರಾಜ್ಯ ಸರ್ಕಾರವು ತಾಲೂಕಿನ ಪ್ರತಿ ಗ್ರಾಮ ಪಂಚಾಯಿತಿ ಕನಿಷ್ಠ 100 ಆಶ್ರಯ ಮನೆಗಳಂತೆ 34 ಗ್ರಾಮ ಪಂಚಾಯಿತಿಗಳಿಗೆ ತಕ್ಷಣವೇ 3500 ಮನೆಗಳನ್ನು ಮಂಜೂರು ಮಾಡಿಕೊಡಬೇಕು ಈ ಮೂಲಕ ಜಾತಕ ಪಕ್ಷಿಗಳಂತೆ ಕಾಯುತ್ತಿರುವ ಬಡವರಿಗೆ ಅನುಕೂಲ ಮಾಡಿಕೊಡಬೇಕು ಎಂದು ಶಾಸಕರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಸಾರಂಗಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಹೇಮಾಕ್ಷಮ್ಮ ಹೊನ್ನೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮಲ್ಲೇನಹಳ್ಳಿ ಮೋಹನ್, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಕೆ.ಬಿ.ನಾಗೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಚಂದ್ರಹಾಸ, ಗ್ರಾಮ ಪಂಚಾಯತಿ ಉಪಾಧ್ಯಕ್ಷ ಸಿ.ಎಸ್.ರಾಜು, ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಕೆ.ಸುಷ್ಮಾ, ತಾಲೂಕು ಯೋಜನಾಧಿಕಾರಿ ಶ್ರೀನಿವಾಸ್, ಗ್ರಾಮ ಪಂಚಾಯತ್ ಸದಸ್ಯರಾದ ರಮೇಶ್, ನಂಜೇಗೌಡ, ಸೌಭಾಗ್ಯ ಮಮತಾ, ಸಣ್ಣತಾಯಮ್ಮ, ಜೆ.ಎನ್.ಕಿಟ್ಟಿ, ಮೀನಾಕ್ಷಿ, ಮಹಾದೇವಿ, ಮಂಜುನಾಥ್, ಹೇಮಾ, ಬಸವರಾಜು, ಸುಲೋಚನಾ, ಸಾರಂಗಿ ಪಿಡಿಓ ಬಿ.ಕೆ.ಗಣೇಶ್, ಆಲಂಬಾಡಿಕಾವಲು ಗ್ರಾ.ಪಂ.ಅಧ್ಯಕ್ಷ ವೆಂಕಟೇಶ್, ಪಿಡಿಓ ಶಿವಕುಮಾರ್, ರಂಗನಾಥಪುರ ಕ್ರಾಸ್ ಗ್ರಾಪಂ ಪಿಡಿಓ ವಿನೋದ್, ತಮ್ಮಣ್ಣಾಚಾರಿ, ಇಮ್ರಾನ್ ಷರೀಫ್, ಸೇರಿದಂತೆ ಹಲವು ಗಣ್ಯರು ಹಾಗೂ ಗ್ರಾಮದ ಮುಖಂಡರು ಹಾಗೂ ನೂರಾರು ಮಂದಿ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರಾಂತೀಯ ಸಮ್ಮೇಳನ

ಮಂಡ್ಯ, ಜ.2– ಅಸೋಸಿಯೇಷನ್ ಆಫ್ ಅಲಯನ್ಸ್‌ಕ್ಲಬ್ ಇಂಟರ್‌ನ್ಯಾಷನಲ್ ಜಿಲ್ಲೆ 268.ಎಸ್‌ನ ಪ್ರಾಂತ್ಯ– 1ರ ಪ್ರಾಂತೀಯ ಸಮ್ಮೇಳನವನ್ನು ಜ.5ರಂದು ಬೆಳಿಗ್ಗೆ 10.30ಕ್ಕೆ ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಪ್ರಾಂತ್ಯ–1ರ ಅಧ್ಯಕ್ಷ ನೀನಾ ಪಟೇಲ್ ತಿಳಿಸಿದ್ದಾರೆ.

ಹುಟ್ಟು ಹಬ್ಬದ ಶುಭ ಹಾರೈಕೆ



ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕರೂ ಆದ ಯುವ ಮುಖಂಡ ಅಭಿಲೇಶ್ ಅವರಿಗೆ ಮೈಸೂರುಪಾಕ್ ಹಾರ ಅರ್ಪಿಸಿ ಅಭಿಮಾನಿಗಳು ಹಾಗೂ ಸ್ನೇಹಿತರು ಹುಟ್ಟು ಹಬ್ಬದ ಶುಭಾಶಯ ಕೋರಿದರು. ಕಾಂಗ್ರೆಸ್ ಮುಖಂಡರಾದ ಮೆಲ್ಲಹಳ್ಳಿ ರವಿ ಎನ್.ಗೌಡ, ಜೈಸ್ವಾಮಿ ಕುಮಾರ್, ಸ್ನೇಹಿತರಾದ ರಾಜೇಶ್, ಆನಂದ್, ಡಾ. ಚಂದ್ರು, ಹಿಮಾನ್, ರಂಗಸ್ವಾಮಿ, ಯಶ್ವಂತ್, ಮದನ್, ಕುಶಾನ್, ಅಜಯ್, ರಕ್ಷಿತ್ ಇನ್ನಿತರರಿದ್ದರು.

ಮೈಸೂರಿನ ಮೂವರಿಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ



ಟಿ.ಗುರುರಾಜ್



ಜಯಂತ್




ಶಿಲ್ಪಾ

ಮೈಸೂರು, ಜ.2 (ಎಸ್‌ಬಿಡಿ)– ರಾಜ್ಯ ಸರ್ಕಾರ ಎರಡು ವರ್ಷಗಳ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಘೋಷಿಸಿದ್ದು, ಮೈಸೂರಿನ ಮೂವರು ಪತ್ರಕರ್ತರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮೈಸೂರಿನ ಹಿರಿಯ ಪತ್ರಕರ್ತರೂ ಆದ 'ಹಲೋ ಮೈಸೂರು' ದಿನ ಪತ್ರಿಕೆ ಸಂಪಾದಕ ಟಿ.ಗುರುರಾಜ್, ದೂರದರ್ಶನ ಚಂದನ ವಾಹಿನಿಯ ಜಿಲ್ಲಾ ವರದಿಗಾರ ಜೆ.ಜಯಂತ್ ಅವರಿಗೆ ವಾರ್ಷಿಕ ಪ್ರಶಸ್ತಿ ಮತ್ತು ಶ್ರೀಮತಿ ಪಿ.ಶಿಲ್ಪಾ ಅವರಿಗೆ ಪ್ರಜಾ ಸಂದೇಶ ದತ್ತಿ ಪ್ರಶಸ್ತಿ ದಕ್ಕಿದೆ.

ಹಿರಿಯ ಪತ್ರಕರ್ತ ಅ.ಚ.ಶಿವಣ್ಣ 2023ನೇ ಸಾಲಿನ ಹಾಗೂ ಮಂಗಳೂರಿನ ಅಬ್ದುಸ್ಸಲಾಂ ಪುತ್ತಿಗೆ ಅವರಿಗೆ 2024ನೇ ಸಾಲಿನ ಜೀವಮಾನದ ಸಾಧನೆಯ ವಿಶೇಷ ಪ್ರಶಸ್ತಿ ಸಂದಿದೆ. ಆಂದೋಲನ ಪ್ರಶಸ್ತಿಗೆ ಸಂಜೆ ದರ್ಶನ (2023) ಹಾಗೂ ಹೊಸಪೇಟೆ ಟೈಮ್ಸ್ (2024) ಪಾತ್ರವಾಗಿವೆ. ಎರಡು ಸಾಲಿನಲ್ಲಿ ಒಟ್ಟು 60 ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿ ಹಾಗೂ 18 ಪತ್ರಕರ್ತರಿಗೆ ವಿವಿಧದತ್ತಿ ಪ್ರಶಸ್ತಿಗಳನ್ನು ಘೋಷಿಸಲಾಗಿದೆ

ಶಿವಾನಂದರಿಗೆ ಬ್ರಿಗೇಡಿಯರ್ ಪದೋನ್ನತಿ



ಮೈಸೂರು, ಜ.2(ಬಿಎಲ್‌ಯು)– ಮೈಸೂರಿನವರೇ ಆದ ಎಂ.ಎ. ಶಿವಾನಂದ ಅವರು ಭಾರತೀಯ ಸೇನೆಯಲ್ಲಿ ಬ್ರಿಗೇಡಿಯರ್ ಹುದ್ದೆಗೆ ಪದೋನ್ನತಿಗೊಂಡಿದ್ದಾರೆ.

ಮೈಸೂರಿನಲ್ಲಿ ವಾಸವಿದ್ದ ದಿವಂಗತ ಆ.ಚ.ಅಶೋಕ ಕುಮಾರ ಮತ್ತು ಆ.ಮೊ.ಸುಧಾಮಣಿರವರ ಮಗನಾದ ಶಿವಾನಂದ ಅವರು ಕಳೆದ 30 ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತೀಯ ಸೇನೆಯಲ್ಲಿ ಹಲವು ಹುದ್ದೆಗಳಿಗೆ ಪದೋನ್ನತಿ ಪಡೆದಿರುವ ಶಿವಾನಂದ ಅವರು ಈಗ ಬ್ರಿಗೇಡಿಯರ್ ಹುದ್ದೆಗೆ ಪದೋನ್ನತಿ ಪಡೆದಿದ್ದಾರೆ. ಈ ಮೂಲಕ ಪುನಃ ರೆಜಿಮೆಂಟ್ ಸೇವೆಗೆ ವರ್ಗಾವಣೆಗೊಂಡಿದ್ದು, ಇವರಿಗೆ ರಾಮಂದೂರಿನ ಮಮತ, ಗಿರೀಶ್ ಹಾಗೂ ಅತಿಗೋಡು ಬಂಧು ಬಗಳದವರು ಶುಭ ಕೋರಿದ್ದಾರೆ.

ಗುಕೇಶ್, ಮನು ಭಾಕರ್ ಸೇರಿ ನಾಲ್ವರಿಗೆ ಖೇಲ್ ರತ್ನ

ಜ.17ಕ್ಕೆ ಪ್ರಶಸ್ತಿ ಪ್ರದಾನ



ಗುಕೇಶ್



ಮನು ಭಾಕರ್

ನವದೆಹಲಿ, ಜ.3– ಪ್ರತಿಷ್ಠಿತ ಖೇಲ್ ರತ್ನ ಪ್ರಶಸ್ತಿಯನ್ನು ಕ್ರೀಡಾ ಸಚಿವಾಲಯ ಗುರುವಾರ ಪ್ರಕಟಿಸಿದೆ.

ಪ್ಯಾರಿಸ್ ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ 2 ಕಂಚಿನ ಪದಕ ಗೆದ್ದು ದೇಶದ ಕೀರ್ತಿ ಪತಾಕೆಯನ್ನು ಹಾರಿಸಿದ ಮನು ಭಾಕರ್ ಮತ್ತು ವಿಶ್ವ ಚೆಸ್ ಚಾಂಪಿಯನ್ ಶಿಪ್ ಗೆದ್ದ ಡಿ.ಗುಕೇಶ್ ಸೇರಿದಂತೆ ನಾಲ್ವರಿಗೆ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ ಘೋಷಣೆಯಾಗಿದೆ.

ಒಲಿಂಪಿಕ್ಸ್‌ನಲ್ಲಿ ಉತ್ತಮ ಸಾಧನೆಗೈದು ಕಂಚು ಗೆದ್ದ ಭಾರತದ ಪುರುಷರ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಪ್ಯಾರಾಲಿಂಪಿಯನ್ ಪ್ರವೀಣ್ ಕುಮಾರ್, ಶೂಟರ್ ಮನು ಭಾಕರ್, ವಿಶ್ವಚೆಸ್ ಚಾಂಪಿಯನ್ ಡಿ. ಗುಕೇಶ್ ಅವರು ಖೇಲ್ ರತ್ನ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ.

ಜ.17 ರಂದು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಖೇಲ್ ರತ್ನ ಪ್ರಶಸ್ತಿಯನ್ನು ಅಥ್ಲೀಟ್ಸ್‌ಗಳು ಸ್ವೀಕರಿಸಲಿದ್ದಾರೆ. ನಾಲ್ವರಿಗೆ ಖೇಲ್ ರತ್ನ ಪ್ರಶಸ್ತಿಯನ್ನು ನೀಡಲಾಗುತ್ತಿದ್ದು, 32 ಕ್ರೀಡಾಪಟುಗಳು ಅರ್ಜುನ ಪ್ರಶಸ್ತಿ ಮತ್ತು ಮೂವರು ಕೋಚ್‌ಗಳಿಗೆ ದ್ರೋಣಾಚಾರ್ಯ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಅರ್ಜುನ ಪ್ರಶಸ್ತಿ: ಜ್ಯೋತಿ ಯರ್ರಾಜಿ– ಅಥ್ಲೆಟಿಕ್ಸ್, ಅಣ್ಣು ರಾಣಿ – ಅಥ್ಲೆಟಿಕ್ಸ್, ನೀತು– ಬಾಕ್ಸಿಂಗ್, ಸವೀಟಿ– ಬಾಕ್ಸಿಂಗ್, ವಾಂತಿಕಾ ಅಗರವಾಲ್– ಚೆಸ್, ಸಲೀಮಾ ಟೆಟೆ– ಹಾಕಿ, ಅಭಿಷೇಕ್– ಹಾಕಿ, ಸಂಜಯ್– ಹಾಕಿ, ಜರ್ಮನ್ಪ್ರೀತ್ ಸಿಂಗ್– ಹಾಕಿ, ಸುಖಜೀತ್ ಸಿಂಗ್– ಹಾಕಿ, ರಾಕೇಶ್ ಕುಮಾರ್– ಪ್ಯಾರಾ–ಆರ್ಚರಿ, ಪ್ರೀತಿ ಪಾಲ್– ಪ್ಯಾರಾ–ಅಥ್ಲೆಟಿಕ್ಸ್, ಜೀವನಜಿ ದೀಪ್ತಿ– ಪ್ಯಾರಾ–ಅಥ್ಲೆಟಿಕ್ಸ್, ಅಜೀತ್ ಸಿಂಗ್– ಪ್ಯಾರಾ–ಅಥ್ಲೆಟಿಕ್ಸ್, ಸಚಿನ್ ಸರ್ಜೆರಾವ್ ಖಿಲಾರಿ – ಪ್ಯಾರಾ ಅಥ್ಲೆಟಿಕ್ಸ್, ಧರಂಬೀರ್– ಪ್ಯಾರಾ–ಅಥ್ಲೆಟಿಕ್ಸ್, ಪ್ರಣವ್ ಸೂರ್ಮಾ– ಪ್ಯಾರಾ ಅಥ್ಲೆಟಿಕ್ಸ್, ಹೆಚ್ ಹೊಕಾಟೊ ಸೆಮಾ– ಪ್ಯಾರಾ ಅಥ್ಲೆಟಿಕ್ಸ್, ಸಿಮ್ರಾನ್– ಪ್ಯಾರಾ ಅಥ್ಲೆಟಿಕ್ಸ್, ನವದೀಪ್– ಪ್ಯಾರಾ ಅಥ್ಲೆಟಿಕ್ಸ್, ನಿತೇಶ್ ಕುಮಾರ್ –ಪ್ಯಾರಾ ಬ್ಯಾಡ್ಮಿಂಟನ್, ತುಳಸಿಮತಿ ಮುರುಗೇಶನ್– ಪ್ಯಾರಾ ಬ್ಯಾಡ್ಮಿಂಟನ್ ನಿತ್ಯ ಶ್ರೀಸುಮತಿ ಶಿವನ್– ಪ್ಯಾರಾ ಬ್ಯಾಡ್ಮಿಂಟನ್, ಮನಿಶಾ ರಾಮದಾಸ್– ಪ್ಯಾರಾ ಬ್ಯಾಡ್ಮಿಂಟನ್, ಕಪಿಲ್ ಪರ್ಮಾರ್– ಪ್ಯಾರಾ ಜೂಡೋ, ಮೋನಾ ಅಗರ್ವಾಲ್– ಪ್ಯಾರಾ ಶೂಟಿಂಗ್ ರುಬಿನಾ ಫ್ರಾನ್ಸಿಸ್– ಪ್ಯಾರಾ ಶೂಟಿಂಗ್, ಸ್ವಪ್ನಿಲ್ ಸುರೇಶ್ ಕುಸಲೆ– ಶೂಟಿಂಗ್, ಸರಬ್ಜೋತ್ ಸಿಂಗ್– ಶೂಟಿಂಗ್, ಅಭಯ್ ಸಿಂಗ್– ಸ್ಕ್ವಾಷ್, ಸಜನ್ ಪ್ರಕಾಶ್– ಈಜು, ಅಮನ್– ಕುಸ್ತಿ

ಅತ್ಯುತ್ತಮ ತರಬೇತುದಾರರಿಗೆ ದ್ರೋಣಾಚಾರ್ಯ ಪ್ರಶಸ್ತಿ: ಸುಭಾಷ್ ರಾಣಾ– ಪ್ಯಾರಾ ಶೂಟಿಂಗ್, ದೀಪಾಲಿ ದೇಶಪಾಂಡೆ– ಚಿತ್ರೀಕರಣ, ಸಂದೀಪ್ ಸಾಂಗ್ವಾನ್– ಹಾಕಿ.

ಆಯ್ಕೆ




ಮೈಸೂರು: ದಿ ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿಯ 2025–29ನೇ ಸಾಲಿನ ಆಡಳಿತ ಮಂಡಳಿಗೆ ಬಿ. ನಾಗರಾಜು (ಅಂಬರೀಶ್) ಆಯ್ಕೆಯಾಗಿದ್ದಾರೆ. ಡಿ.29ರಂದು ನಡೆದ ಚುನಾವಣೆಯಲ್ಲಿ ಈ ಆಯ್ಕೆ ನಡೆದಿದೆ.

ಒಂದನೇ ಪುಟದಿಂದ

ಹೊಸ ಬಸ್ ನಿಲ್ದಾಣ

ಈ ಕೇಂದ್ರದಿಂದಲೇ ನಗರದ ವಿವಿಧ ಪ್ರದೇಶಗಳಿಗೆ ತೆರಳಲು ನಗರ ಸಾರಿಗೆ ಬಸ್‌ಗಳ ನಿಲುಗಡೆಗೂ ಇಲ್ಲಿಯೇ ಪ್ರತ್ಯೇಕವಾಗಿ ಅವಕಾಶ ಕಲ್ಪಿಸಲಾಗುತ್ತಿದೆ. ರಾಜ್ಯದಲ್ಲಿ ರಾಜಧಾನಿ ಬೆಂಗಳೂರು ಹೊರತುಪಡಿಸಿದರೆ ಸಾಂಸ್ಕೃತಿಕ ರಾಜಧಾನಿ ಮೈಸೂರಿನತ್ತ ಹೆಚ್ಚಿನ ಒಲವು ವ್ಯಕ್ತವಾಗುತ್ತಿದೆ. ಪಾರಂಪರಿಕ ನಗರಿ, ಸ್ವಚ್ಛನಗರಿ, ಪಿಂಚಣಿದಾರರ ಸ್ವರ್ಗ ಸೇರಿದಂತೆ ಎಂದೇ ಕರೆಯಲ್ಪಡುವ ಮೈಸೂರು ವೇಗವಾಗಿ ಬೆಳೆಯುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಜಿಲ್ಲೆ ಮಾತ್ರವಲ್ಲದೆ, ನೆರೆ ರಾಜ್ಯಗಳಿಂದಲೂ ಮೈಸೂರಿಗೆ ಬರುವ ಸಾರಿಗೆ ಸಂಸ್ಥೆಗಳ ಬಸ್‌ಗಳ ಸಂಖ್ಯೆ ಹೆಚ್ಚಾಗುತ್ತಿದೆ. ಹತ್ತಾರು ದಶಕಗಳ ಹಿಂದೆ ನಿರ್ಮಿಸಲಾಗಿರುವ ಸಬರ್ಬನ್ ಬಸ್ (ಗ್ರಾಮಾಂತರ) ನಿಲ್ದಾಣ ಪ್ರಸ್ತುತ ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆಗೆ ಕಿರಿದಾಗುತ್ತಿದೆ. ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಾಗುತ್ತಿದ್ದು, ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಬಸ್‌ಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಕೇವಲ 4 ಎಕರೆ ಜಾಗದಲ್ಲಿ ನಿರ್ಮಿಸಿರುವ ಹಾಲಿ ಬಸ್ ನಿಲ್ದಾಣದಲ್ಲಿ ಪ್ರತಿದಿನ 2600ಕ್ಕೂ ಹೆಚ್ಚು ಬಸ್‌ಗಳು ಸಂಚರಿಸುತ್ತಿವೆ. ಇದರಿಂದ ಬಸ್ ನಿಲ್ದಾಣದಲ್ಲಿ ಬಸ್‌ಗಳ ನಿಲುಗಡೆಗೂ ಕಷ್ಟವಾಗುತ್ತಿರುವುದನ್ನು ಮನಗಂಡು ಹೊಸ ಬಸ್ ನಿಲ್ದಾಣ ನಿರ್ಮಾಣಕ್ಕೆ ನಿರ್ಧರಿಸಲಾಗಿದೆ.

ಹಳೆ ಬಸ್ ನಿಲ್ದಾಣವೂ ಇರುತ್ತೆ: ಹೊಸ ಬಸ್ ನಿಲ್ದಾಣ ನಿರ್ಮಾಣವಾದರೂ ಹಳೆ ಗ್ರಾಮಾಂತರ ಬಸ್ ನಿಲ್ದಾಣದಲ್ಲೂ ಬಸ್‌ಗಳ ಸಂಚಾರವಿರುತ್ತದೆ. ಹೊಸ ಬಸ್ ನಿಲ್ದಾಣದಿಂದ ಬೆಂಗಳೂರು, ಶಿವಮೊಗ್ಗ ಸೇರಿದಂತೆ ದೂರದ ಜಿಲ್ಲೆಗಳಿಗೆ ಬಸ್‌ಗಳು ಸಂಚರಿಸಿದರೆ, ಹಳೆ ಗ್ರಾಮಾಂತರ ಬಸ್ ನಿಲ್ದಾಣದಿಂದ ಜಿಲ್ಲೆಯ ವಿವಿಧ ತಾಲೂಕು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಿಗೆ ತೆರಳುವ ಬಸ್‌ಗಳು ಸಂಚರಿಸಲಿವೆ.



ಮೈಸೂರು ಬನ್ನಿಮಂಟಪದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಬಸ್ ನಿಲ್ದಾಣದ ಯೋಜನಾ ನಕ್ಷೆ.

ಹೋಟೆಲ್‌ನಲ್ಲಿ ನೇಣು ಬಿಗಿದುಕೊಂಡು ಜೂನಿಯರ್ ಹೆಲ್ತ್ ಇನ್‌ಸ್ಪೆಕ್ಟರ್ ಆತ್ಮಹತ್ಯೆ



ಶಿವಕುಮಾರ್

ಮೈಸೂರು, ಜ.2(ಆರ್‌ಕೆ)– ಜೀವನದಲ್ಲಿ ಜಿಗುಪ್ಸೆಗೊಂಡ ಆರೋಗ್ಯ ಇಲಾಖೆ ಕಿರಿಯ ಆರೋಗ್ಯ ನಿರೀಕ್ಷಕ ನೋರ್ವ ಹೋಟೆಲ್ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಮೇಟಗಳ್ಳಿಯಲ್ಲಿ ಬುಧವಾರ ರಾತ್ರಿ ನಡೆದಿದೆ.

ನಜರ್‌ಬಾದಿನ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯಲ್ಲಿ ಜೂನಿಯರ್ ಹೆಲ್ತ್ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದ ಶಿವಕುಮಾರ್ (38) ನೇಣಿಗೆ ಶರಣಾದವರು. ಮೂಲತಃ ನಾಗಮಂಗಲ ತಾಲೂಕು ಇಜ್ಜಲಗುಪ್ಪೆ ಗ್ರಾಮದವರಾದ ಅವರು ಮೈಸೂರಿನ ಮಾನಸಿನಗರದಲ್ಲಿ ವಾಸಿಸುತ್ತಿದ್ದರು. ಕೌಟುಂಬಿಕ ಕಲಹದಿಂದ ಬೇಸತ್ತು ಶಿವಕುಮಾರ್, ಬುಧವಾರ ಮೇಟಗಳ್ಳಿ ಬಳಿ ಕೆಆರ್‌ಎಸ್ ರಸ್ತೆಯಲ್ಲಿರುವ ಹೋಟೆಲೊಂದರಲ್ಲಿ ಕೊಠಡಿ ಪಡೆದು ವಾಸ್ತವ್ಯ ಹೂಡಿದ್ದರು. ಇಂದು ಬೆಳಗ್ಗೆಯಾದರೂ ಬಾಗಿಲು ತೆರೆಯದ ಕಾರಣ, ಹೋಟೆಲ್ ಸಿಬ್ಬಂದಿ ಸಂಶಯಗೊಂಡು ಹೋಗಿ ನೋಡಿದಾಗ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡುಬಂತು.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದ ಮೇಟಗಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಶಿವಕುಮಾರ್ ಅವರು ಪತ್ನಿ ಹಾಗೂ ಓರ್ವ ಪುತ್ರನನ್ನು ಅಗಲಿದ್ದಾರೆ.

ಅಪರಿಚಿತ ಶವ ಪತ್ತೆ

ಮೈಸೂರು, ಜ.2– ಮೈಸೂರು ತಾಲೂಕು ಹನುಗನಹಳ್ಳಿ ಬಸ್ ನಿಲ್ದಾಣದಲ್ಲಿ ಡಿ.30 ರಂದು ಸುಮಾರು 45 ರಿಂದ 50 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತನ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಎಸ್.ಪಿ. ಅವರ ದೂ.ಸಂ: 0821–2520040, ಮೈಸೂರು ಜಿಲ್ಲಾ ಕಂಟ್ರೋಲ್ ರೂಂ. 0821–2444800 ಹಾಗೂ ವರುಣ ಪೊಲೀಸ್ ಠಾಣೆಯ ದೂ. ಸಂ:0821–2594411, 9980805052 ನ್ನು ಸಂಪರ್ಕಿಸಬಹುದು ಎಂದು ವರುಣ ಪೊಲೀಸ್ ಠಾಣೆಯ ಠಾಣಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.4, 5ರಂದು ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿ

ಮೈಸೂರು,ಜ.2–ಕಲ್ಪವೃಕ್ಷ ಸಾಂಸ್ಕೃತಿಕ ಪರಿಷತ್ ವತಿಯಿಂದ ಎರಡು ದಿನಗಳ ಕ್ರಿಕೆಟ್ ಪಂದ್ಯಾವಳಿಯನ್ನು ಜ.4 ಮತ್ತು 5ರಂದು ಮೈಸೂರಿನ ಜೆ.ಪಿ. ನಗರದಲ್ಲಿರುವ ಪುಟ್ಟರಾಜ ಗವಾಯಿ ಮೈದಾನದಲ್ಲಿ ಏರ್ಪಡಿಸಲಾಗಿದೆ. ಜ. 4 ರಂದು ಬೆಳಗ್ಗೆ 9 ಗಂಟೆಗೆ ವಂಗೀಪುರ ನಂಬಿಮಠದ ಬಿ.ವಿ.ಇಳೈ ಆಳ್ವಾರ್ ಸ್ವಾಮೀಜಿ ಸಮ್ಮುಖದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಉದ್ಘಾಟಿಸುವರು.



ಚುಟುಕು ಯೋಗಾಚಾರ್ಯ ಡಾ. ಎಂ.ಜಿ.ಆರ್.ಅರಸ್ ಅಧ್ಯಕ್ಷತೆಯಲ್ಲಿ ನಡೆಯುವ ಸಮಾರಂಭದಲ್ಲಿ ವಿಧಾನಸಭೆಯ ಮಾಜಿ ಸದಸ್ಯ ಎಂ.ಕೆ.ಸೋಮಶೇಖರ್ ಟ್ರೋಫಿ ಅನಾವರಣ ಮಾಡುವರು. ಶಾಸಕ ಗಣೇಶ್ ಪ್ರಸಾದ್ ನಾಡದೇವತೆಗೆ ಪುಷ್ಪಾರ್ಚನೆ ಮಾಡುವರು. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಉದ್ಘಾಟನೆ ಮಾಡುವರು. ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಖಜಾಂಚಿ ಗಿರೀಶ್ ಚಾಮುಂಡಯ್ಯ ಮತ್ತು ಚೆಸ್ಕಾಂ ಸಹಾಯಕ ಅಭಿಯಂತರ ಸಿ.ಎಸ್. ಪ್ರವೀಣ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಜ. 5 ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಶಿವಾರ್ಚಕರ ಸಂಘದ ಅಧ್ಯಕ್ಷ ಪ್ರೊ. ಮಲ್ಲಣ್ಣ ಸಾನ್ನಿಧ್ಯ ವಹಿಸುವರು. ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕರ ಸಂಘದ ಅಧ್ಯಕ್ಷ ಡಾ.ಪಿ. ಸತ್ಯನಾರಾಯಣ್ ಟ್ರೋಫಿ ವಿತರಿಸುವರು. ಶಾಸಕ ಟಿ.ಎಸ್.ಶ್ರೀವತ್ಸ, ಓಂಪ್ರಕಾಶ್, ಶಕ್ತಿ ಜೀವನ್, ಕರ್ನಾಟಕ ರಾಜ್ಯ ಶಿವಾರ್ಚಕರ ಸಂಘದ ಮಾಜಿ ಅಧ್ಯಕ್ಷ ಎಸ್. ಪ್ರದೀಪ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಹೆಚ್ಚಿನ ವಿವರಗಳಿಗೆ ಮೊ. 9606895286 ಸಂಪರ್ಕಿಸಬಹುದು.

ಶ್ರೀಗಳಿಂದ ಆಶೀರ್ವಾದ



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳು ಎಸ್‌ಬಿಎಂ ಮಂಜು ನೇತೃತ್ವದಲ್ಲಿ ಆದಿಚುಂಚನಗಿರಿ ಶಾಖಾಮಠದ ಶ್ರೀ ಸೋಮನಾಥ ಸ್ವಾಮೀಜಿ ಆಶೀರ್ವಾದ ಪಡೆದರು. ಈ ವೇಳೆ ಬ್ಯಾಂಕ್‌ನ ಮಾಜಿ ಅಧ್ಯಕ್ಷ, ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು (ಸಾಮಾನ್ಯ), ನಿರ್ದೇಶಕರಾದ ಎ.ಮಂಚಪ್ಪ (ಎಸ್‌ಸಿ ಮೀಸಲು), ರವಿ ರಾಜಕೀಯ (ಸಾಮಾನ್ಯ), ರವಿಕುಮಾರ್ ಎಸ್.ಆರ್.(ಬಿಸಿಎ), ಅರವಿಂದ (ಸಾಮಾನ್ಯ), ಜಿ.ಕುಮಾರ್‌ಗೌಡ (ಸಾಮಾನ್ಯ), ವಸಂತ ಮನೀಶ್ (ಮಹಿಳಾ ಮೀಸಲು), ಛಾಯಮ್ಮ (ಮಹಿಳಾ ಮೀಸಲು), ರೋಹಿತ್ ಎಸ್. (ಎಸ್‌ಟಿ ಮೀಸಲು), ವಿಕಾಸ್‌ಗೌಡ (ಸಾಮಾನ್ಯ), ಅವರಿದ್ದಾರೆ.

ಜ.5ರಂದು ಪ್ರತಿಭಾ ಪುರಸ್ಕಾರ

ಮೈಸೂರು,ಜ.2–ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ, ಗಣ್ಯರಿಗೆ ಅಭಿನಂದನೆ ಹಾಗೂ 2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಜ.5ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಯಾದವ (ಗೊಲ್ಲ) ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದು, ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು, ಪದಾಧಿಕಾರಿಗಳು ಕಾರ್ಯಕ್ರಮಕ್ಕೆ ಆಗಮಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಪುಸ್ತಕ ಖರೀದಿಗೆ ಶೇ.50 ರಿಯಾಯಿತಿ

ಮೈಸೂರು,ಜ.2–ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಗಣರಾಜ್ಯೋತ್ಸವದ ದಿನಾಚರಣೆ ಅಂಗವಾಗಿ ಜನವರಿ ತಿಂಗಳು ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು ಶೇ.50 ರಿಯಾಯಿತಿಯ ದರಗಳಲ್ಲಿ ಮಾರಾಟ ಮಾಡಲಾಗುತ್ತಿದೆ.

ಪುಸ್ತಕ ಪ್ರಿಯರು ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆಯಲ್ಲಿ ಹೆಚ್ಚಿನ ಮಾಹಿತಿಗಾಗಿ (ಸಂಪರ್ಕ ಸಂಖ್ಯೆ: 080–22107705), ಎಲ್ಲಾ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಹಾಗೂ ಪ್ರಾಧಿಕಾರದ https://kpp. karnataka. gov. inನಲ್ಲೂ ಶೇ.50 ರಿಯಾಯಿತಿ ಸೌಲಭ್ಯ ದೊರೆಯಲಿದೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ವಿ.ಕಿರಣ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬೇಡ್ಕರ್ ಬಯಸಿದ ಪ್ರಬುದ್ಧ ಭಾರತ ನಿರ್ಮಿಸಲು ದೇಶದ ದಮನಿತ ಸಮುದಾಯಗಳು ಪ್ರಜ್ಞಾವಂತರು ಜೊತೆಗೂಡಿ ಸಂಘಟಿತರಾಗಬೇಕು

ಭೀಮಾ ಕೋರೆಗಾಂವ್ 207ನೇ ವರ್ಷದ ಸಂಭ್ರಮಾಚರಣೆ ಉದ್ಘಾಟಿಸಿ ಚಿಂತಕ ರಹಮತ್ ತರೀಕೆರೆ ಅಭಿಮತ

ಮೈಸೂರು,ಜ.2(ಪಿಎಂ)– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಬಯಸಿದ ಪ್ರಬುದ್ಧ ಭಾರತ ನಿರ್ಮಿಸಲು ದೇಶದ ದಮನಿತ ಸಮುದಾಯಗಳು ಮತ್ತು ಎಲ್ಲಾ ಜಾತಿ–ಧರ್ಮದ ಪ್ರಜ್ಞಾವಂತರು ಜೊತೆಗೂಡಿ ಸಂಘಟಿತರಾಗುವ ಅಗತ್ಯವಿದೆ ಎಂದು ಚಿಂತಕ ರಹಮತ್ ತರೀಕೆರೆ ಅಭಿಪ್ರಾಯಪಟ್ಟರು.

ಮೈಸೂರಿನ ಜಯನಗರ ರೈಲ್ವೆ ಗೇಟ್ ಸಮೀಪದಲ್ಲಿ ಜೈ ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಭೀಮಾ ಕೋರೆಗಾಂವ್ 207ನೇ ವರ್ಷದ ಸಂಭ್ರಮಾಚರಣೆ ಮತ್ತು ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಪತ್ರಿಕೆ ತೆಗೆದು ನೋಡಿದರೆ ಈ ದೇಶದಲ್ಲಿ ಮೂರು ಸಮುದಾಯಗಳು ಪೆಟ್ಟು ತಿನ್ನುತ್ತಿವೆ ಎಂಬುದು ಗೊತ್ತಾಗುತ್ತದೆ. ಆದರೆ ದೃಶ್ಯ ಮಾಧ್ಯಮಗಳು ಸುಳ್ಳನ್ನು ಹೇಳುತ್ತಿದ್ದು, ಸಾಮಾಜಿಕ ಜಾಲತಾಣಗಳನ್ನು ನೋಡಿದರೆ, ದಲಿತರು, ಯಾವುದೇ ಸಮಾಜದ ಮಹಿಳೆಯರು ಮತ್ತು ಮುಸಲ್ಮಾನರು ಆಹಾರ ಸೇರಿದಂತೆ ನಾನಾ ಕಾರಣಗಳಿಗೆ ಪೆಟ್ಟು ತಿನ್ನುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಈ ಎಲ್ಲರ ಶಕ್ತಿ ಶೇ.50ಕ್ಕೂ ಮೇಲಿದೆ. ಆದರೆ ತುಂಬ ಜನಸಂಖ್ಯೆ ಇದ್ದು, ಶಕ್ತಿ ಒಂದೂಗೂಡದೇ ಇದ್ದರೆ, ರಾಜಕೀಯ ಪ್ರಜ್ಞೆಯಿಂದ ಶಕ್ತಿಯಾಗಿ ಮಾರ್ಪಡದೇ ಹೋದರೆ ನಮ್ಮ ದುಸ್ಥಿತಿ ಹೀಗೆ ಮುಂದುವರೆಯಲಿದೆ ಎಂದು ಎಚ್ಚರಿಸಿದರು. ಈ ರೀತಿಯ ಕಾರ್ಯಕ್ರಮಗಳನ್ನು ಎಲ್ಲಾ ಜಾತಿ–ಧರ್ಮದ ಪ್ರಜ್ಞಾವಂತರು ಸೇರಿ ಮಾಡಬೇಕು. ಇಂದು ದಮನಿತ ಸಮುದಾಯಗಳನ್ನು ಅಧಿಕಾರಸ್ತರು, ಉಳ್ಳವರು ಮತ್ತು ಪಕ್ಷಗಳು ಉಪಕರಣಗಳಾಗಿ ಬಳಸುತ್ತಿವೆ ಮೇಲ್ಜಾತಿಯ ರಾಜಕಾರಣಕ್ಕೆ ಕೆಳಜಾತಿಯವರನ್ನು ಅದೇ ಗುಲಾಮಗಿರಿ ಮನಸ್ಥಿತಿಯಲ್ಲಿ ಹೊಂದಾಣಿಕೆ ಮಾಡಿಸೋದು ನಡೆಯುತ್ತಿದೆ. ಇದಕ್ಕೆ ಅವಕಾಶ ನೀಡದೇ ಬಾಬಾ ಸಾಹೇಬರ ಚಿಂತನೆಯೊಂದಿಗೆ ನಾವು ಎಚ್ಚೆತ್ತುಕೊಳ್ಳಬೇಕು. ಎಲ್ಲಾ ದಮನಿತರು, ಎಲ್ಲಾ ಜಾತಿಯ ಪ್ರಜ್ಞಾವಂತರ ಜೊತೆಗೂಡಿ ಸಂಘಟನೆಯಾಗಿ ಹೋರಾಟ ಮಾಡಬೇಕು. ನಮ್ಮ ರಾಜಕೀಯ ಪ್ರಜ್ಞೆ ಇನ್ನು ಪ್ರಬುದ್ಧವಾಗಬೇಕು. ಮುಸಲ್ಮಾನರು ಸವರ್ಣೀಯ ಮನೋಭಾವದಿಂದ ಈಚೆ ಬಂದು ಬಾಬಾ ಸಾಹೇಬರು ಮತ್ತು ಸಂವಿಧಾನದ ಕಾರ್ಯಕ್ರಮಗಳನ್ನು ತಮ್ಮ ಕಾರ್ಯಕ್ರಮಗಳು ಎಂದು ಭಾವಿಸಬೇಕು ಎಂದರು. ಯಾವ ಶಕ್ತಿಗಳ ವಿರುದ್ಧ ಕ್ರಿ.ಪೂ.ದಲ್ಲಿ ಬುದ್ಧ ಹೋರಾಟ ಮಾಡಿದ್ದರೋ ಅದೇ ಶಕ್ತಿಗಳ ವಿರುದ್ಧ ನಡೆದ ಹೋರಾಟವೇ ಭೀಮಾ ಕೋರೆಗಾಂವ್ ಯುದ್ಧವಾಗಿದ್ದು, ಇದು ಬ್ರಿಟಿಷರ ಪರವಾದ ಹೋರಾಟವಲ್ಲ. ಕೆಲ ವರ್ಷಗಳ ಹಿಂದೆ ಕೋರೆಗಾಂವ್ ಯುದ್ಧದ ಸ್ಮರಣೆಯ ಕಾರ್ಯಕ್ರಮದಲ್ಲಿ ದಲಿತ ಸಂಗಾತಿಗಳನ್ನು ಒಳಗೊಂಡಂತೆ ಅನೇಕರನ್ನು ಬಂಧಿಸಲಾಯಿತು. ಹೀಗೆ ಪ್ರಭುತ್ವದ ಪಿತೂರಿಯಿಂದ ಅನೇಕ ಸಂಗಾತಿಗಳು ಜೈಲಿನಲ್ಲಿದ್ದಾರೆ. ಅವರ ಬಿಡುಗಡೆಯಾಗಲಿ ಎಂದು ಹಾರೈಸೋಣ ಎಂದು ಹೇಳಿದರು. ಭೀಮಾ ಕೋರೆಗಾಂವ್ ಯುದ್ಧ ದುಃಖದ ಸಂಗತಿಯೂ ಹೌದು. ಏಕೆಂದರೆ ನಮ್ಮ ಸೈನಿಕರು ಹುತಾತ್ಮರಾಗಿದ್ದಾರೆ. ಆದರೆ ಗೆಲುವಿನ ಸಂಭ್ರಮದ ಅಂಶವೂ ಇದೆ. ಆ ಮಹಾರ್ ಸೈನಿಕರ ಜೊತೆಯಲ್ಲಿ ಮುಸ್ಲಿಂ ಸೈನಿಕರು ಹುತಾತ್ಮರಾಗಿದ್ದಾರೆ. ರಜಪುತ್, ಮರಾಠ ಸೈನಿಕರು ತೀರಿಕೊಂಡಿದ್ದಾರೆ. ಅವರೆಲ್ಲರಿಗೂ ನಮ್ಮ ನಮನಗಳನ್ನು ಸಲ್ಲಿಸಬೇಕು. ಇಂತಹ ಕಾರ್ಯಕ್ರಮಗಳು ಎಲ್ಲಾ ಸಮುದಾಯಗಳಲ್ಲಿ ಇರುವ ದಮನಿತರ, ನೊಂದವರ ಸಾಮಾಜಿಕ, ರಾಜಕೀಯ, ಆರ್ಥಿಕ ಏಳಿಗೆಗೆ ಚಿಂತನೆ ಕಮ್ಮಟಗಳಾಗಬೇಕು ಎಂದರು. ಬ್ರಿಟಿಷರ ಎಲ್ಲಾ ವಿಚಾರಗಳನ್ನು ಸಮರ್ಥಿಸಿ ಅವರನ್ನು ವೈಭವಿಸಕರಿಸಬಾರದು. ಸಾಹು ಮಹಾ ರಾಜರು, ನಾಲ್ವಡಿ, ಸಯ್ಯಾಜಿರಾವ್ ಗಾಯಕ್‌ವಾಡ್ ಅವರೆಲ್ಲರೂ ಬ್ರಿಟಿಷರ ಆಡಳಿತ ಒಪ್ಪಿಕೊಂಡಿದ್ದವರು. ಆದರೆ ಆ ಒಪ್ಪಿಗೆ ಚೌಕಟ್ಟಿನಲ್ಲೇ ನಾಡನ್ನು ಹೇಗೆ ಆಧುನಿಕವಾಗಿ ಕಟ್ಟಬೇಕೆಂಬ ನಿಟ್ಟಿನಲ್ಲಿ ಪ್ರಯತ್ನ ಮಾಡಿದರು. ಬ್ರಿಟಿಷರ ಜೊತೆಗೆ ಬಂದ ಬಿಡುಗಡೆ ಶಕ್ತಿಯಲ್ಲಿ ನಮ್ಮ ಅನುಸಂಧಾನ ಇದೆ. ಬ್ರಿಟಿಷರು ಭಾರತೀಯರನ್ನು ಅಮಾನುಷವಾಗಿ ನಡೆಸಿಕೊಂಡ ಬಗ್ಗೆ ಅಲ್ಲ. ಈ ಎಚ್ಚರಿಕೆಯನ್ನು ಬಾಬಾ ಸಾಹೇಬರೇ ನೀಡಿದ್ದಾರೆ ಎಂದು ಹೇಳಿದರು. ಇದಕ್ಕೂ ಮುನ್ನ ಇಲ್ಲಿರುವ ಭೀಮಾ ಕೋರೆಗಾಂವ್ ಯುದ್ಧದ ವಿಜಯೋತ್ಸವದ ಮಾದರಿ ಸ್ತಂಭಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಪೂಜ್ಯ ಬೋಧಿರತ್ನ ಬಂತೇಜಿ ಸಾನಿಧ್ಯ ವಹಿಸಿದ್ದರು. ಚಿಂತಕ ಶಿವಸುಂದರ್, ರಂಗಕರ್ಮಿ ಜನಾರ್ಧನ್ (ಜನ್ನಿ), ವಿಜಯೋತ್ಸವ ಸಮಿತಿಯ ಗೌರವಾಧ್ಯಕ್ಷರೂ ಆದ ಮಾಜಿ ಮೇಯರ್ ಪುರುಷೋತ್ತಮ್, ಲೇಖಕ ಹೆಚ್.ಚನ್ನಪ್ಪ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಚಿಕ್ಕಜವರಪ್ಪ, ಪಾಲಿಕೆ ಮಾಜಿ ಸದಸ್ಯೆ ಪಲ್ಲವಿಬೇಗಂ ಮತ್ತಿತರರು ಹಾಜರಿದ್ದರು.



ಮೈಸೂರಿನ ಜಯನಗರ ರೈಲ್ವೆ ಗೇಟ್ ಸಮೀಪದ ಗುರುವಾರ ಹಮ್ಮಿಕೊಂಡಿದ್ದ ಭೀಮಾ ಕೋರೆಗಾಂವ್ 207ನೇ ವರ್ಷದ ಸಂಭ್ರಮಾಚರಣೆಯನ್ನು ಚಿಂತಕ ರಹಮತ್ ತರೀಕೆರೆ ಉದ್ಘಾಟಿಸಿದರು.

ತೀವ್ರ ಕುತೂಹಲ ಮೂಡಿಸಿರುವ ಸಚಿವ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ಡಿನ್ನರ್ ಮೀಟಿಂಗ್

ಬೆಂಗಳೂರು, ಜ.2–ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಇಂದು ಸಂಜೆ ಬೆಂಗಳೂರಿನ ತಮ್ಮ ಅಧಿಕೃತ ನಿವಾಸದಲ್ಲಿ ಡಿನ್ನರ್ ಮೀಟಿಂಗ್ ಏರ್ಪಡಿಸಿದ್ದು, ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿದೆ.



ಸತೀಶ್ ಜಾರಕಿಹೊಳಿ

ಕೆಪಿಸಿಸಿ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿದೇಶ ಪ್ರವಾಸದಲ್ಲಿರುವ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡಂತೆ ಹಿರಿಯ ಶಾಸಕರು ಹಾಗೂ ಮುಖಂಡರ ಡಿನ್ನರ್ ಮೀಟಿಂಗ್ ಅನ್ನು ಸತೀಶ್ ಜಾರಕಿಹೊಳಿ ಆಯೋಜಿಸಿರುವುದರ ಹಿಂದೆ ರಾಜಕೀಯ ತಂತ್ರಗಾರಿಕೆ ಇದೆ ಎಂದು ವಿಶ್ಲೇಷಿಸಲಾಗಿದೆ.

ಇಂದಿನ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ. ಜಿ.ಪರಮೇಶ್ವರ್, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸಹಕಾರಿ ಸಚಿವ ಕೆ.ಎನ್.ರಾಜಣ್ಣ ಸೇರಿದಂತೆ ಬಹುತೇಕ ಸಿದ್ದರಾಮಯ್ಯ ಬೆಂಬಲಿಗ ಸಚಿವರು ಹಾಗೂ ಮುಖಂಡರು ಭಾಗವಹಿಸಿದ್ದು ವಿಶೇಷವಾಗಿತ್ತು. ಇದೇ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಸಹಕಾರ ಸಚಿವ ರಾಜಣ್ಣ, ರಾಜ್ಯದ ಜನರಿಗೆ ಏನೆಲ್ಲಾ ಒಳ್ಳೆಯದು ಮಾಡಬಹುದು ಎಂಬುದರ ಚರ್ಚೆಯಾಗಿದೆ. ಸಚಿವ ಸಂಪುಟ ವಿಸ್ತರಣೆ, ಪಕ್ಷದ ಅಧ್ಯಕ್ಷರ ನೇಮಕ ವಿಚಾರವನ್ನು ವರಿಷ್ಠರು ನಿರ್ಧರಿಸುತ್ತಾರೆ ಎಂದರು.

ಡಿ.ಕೆ.ಶಿವಕುಮಾರ್ ಅವರ ಕೆಪಿಸಿಸಿ ಅಧ್ಯಕ್ಷ ಅವಧಿ ಮುಗಿದಿರುವುದರಿಂದ ಹೊಸ ಅಧ್ಯಕ್ಷರನ್ನು ನೇಮಕ ಮಾಡಬೇಕೆಂಬ ಕೂಗು ಕಾಂಗ್ರೆಸ್‌ನಲ್ಲಿ ಕೇಳಿ ಬಂದಿದೆ. ಮತ್ತೊಂದೆಡೆ ಸಂಪುಟ ಪುನರ್ ರಚನೆ ಬಗ್ಗೆಯೂ ಮಾತುಗಳು ಕೇಳಿ ಬರುತ್ತಿವೆ. ಈ ನಡುವೆ ಸತೀಶ್ ಜಾರಕಿಹೊಳಿ ಅವರು ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸಂಬಂಧ ಹೈಕಮಾಂಡ್ ಮೇಲೆ ಒತ್ತಡ ಹೇರಲು ವ್ಯೂಹ ರಚಿಸಿದ್ದಾರೆ ಎಂದು ಹೇಳಲಾಗಿದೆ.

ಇದಕ್ಕೆ ಪೂರಕವೆಂಬಂತೆ ಇತ್ತೀಚೆಗೆ ಮಾಧ್ಯಮದೊಂದಿಗೆ ಮಾತನಾಡಿದ್ದ ಸತೀಶ್ ಜಾರಕಿಹೊಳಿ, ಕಾಂಗ್ರೆಸ್‌ನಲ್ಲಿ 'ಒಬ್ಬ ವ್ಯಕ್ತಿಗೆ ಒಂದೇ ಹುದ್ದೆ' ಎಂಬ ಅಲಿಖಿತ ನಿಯಮ ಜಾರಿಯಲ್ಲಿದೆ ಎಂಬುದನ್ನು ಉಲ್ಲೇಖಿಸಿದ್ದರು. ಅಲ್ಲದೇ ಒಬ್ಬ ನಾಯಕ ಎರಡು ಮಹತ್ವದ ಹುದ್ದೆಗಳನ್ನು ನಿರ್ವಹಣೆ ಮಾಡುವುದು ಸರಿಯಲ್ಲ. ಎರಡು ಹುದ್ದೆಗಳನ್ನು ನಿರ್ವಹಿಸುವಾಗ ಒತ್ತಡಗಳು ಹೆಚ್ಚಾಗುತ್ತವೆ. ಹೀಗಾಗಿ ಒಬ್ಬರಿಗೆ ಒಂದೇ ಹುದ್ದೆ ಇರಬೇಕು ಎಂದು ಹೇಳುವ ಮೂಲಕ ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಸ್ಥಾನ ಎರಡನ್ನೂ ಹೊಂದಿರುವ ಡಿ.ಕೆ.ಶಿವಕುಮಾರ್ ಈಗಾಗಲೇ ಅವಧಿ ಮುಗಿದಿರುವುದರಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಬೇಕು ಎಂಬುದನ್ನು ಪರೋಕ್ಷವಾಗಿ ಹೇಳಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಜ.2–ಎನ್.ಜೆ.ಎಸ್. ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತ ಆಶ್ರಯದಲ್ಲಿ ಜ.7ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಹೆಚ್.ಎಸ್.ಬಸವರಾಜ್, ಮೊ. 94487 53597, ಎಂ.ಎನ್. ಜೈಪ್ರಕಾಶ್, ಮೊ. 99161 55453, 94487 38657 ಸಂಪರ್ಕಿಸಬಹುದು.

ಶಾಲಾ ವಾರ್ಷಿಕ ವರದಿಗಿಂತ ಶಿಕ್ಷಣ ಪಡೆದು ತೆರಳಿದ ವಿದ್ಯಾರ್ಥಿಗಳ ಬಗ್ಗೆ ವರದಿ ಸಿದ್ಧಪಡಿಸಿ

ಸದ್ವಿದ್ಯಾ ಶಾಲಾ ವಾರ್ಷಿಕೋತ್ಸವದಲ್ಲಿ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಸಲಹೆ

ಮೈಸೂರು, ಜ.2(ಜಿಎ)–ಮೈಸೂರಿನ ಕಲಾಮಂದಿರದಲ್ಲಿ ಸದ್ವಿದ್ಯಾ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆ ಹಾಗೂ ಪ್ರೌಢ ಶಾಲೆ ವತಿಯಿಂದ ಆಯೋಜಿಸಿದ್ದ 51ನೇ ಶಾಲಾ ವಾರ್ಷಿಕೋತ್ಸವಕ್ಕೆ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಚಾಲನೆ ನೀಡಿದರು.



ಚಕ್ರವರ್ತಿ ಸೂಲಿಬೆಲೆ

ನಂತರ ಮಾತನಾಡಿದ ಅವರು, ಎಲ್ಲಾ ಶಾಲೆಗಳಲ್ಲಿ ವಾರ್ಷಿಕ ಶಾಲಾ ವರದಿಯನ್ನು ನೋಡುತ್ತಾರೆ. ಆದರೆ, 10 ವರ್ಷಗಳ ಹಿಂದೆ ಶಾಲೆಯಲ್ಲಿ ಶಿಕ್ಷಣ ಪಡೆದು ತೆರಳಿದ ವಿದ್ಯಾರ್ಥಿಗಳು ಇಂದು ಏನು ಮಾಡುತ್ತಿದ್ದಾರೆ ಎಂಬ ವರದಿಯನ್ನು ಸಿದ್ಧಪಡಿಸುತ್ತಿಲ್ಲ. ಅದನ್ನು ಶಿಕ್ಷಣ ಸಂಸ್ಥೆಗಳು ಮಾಡಬೇಕು ಎಂದರು.



ಸದ್ವಿದ್ಯಾ ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿಗಳು ಮೈಸೂರು ರಾಜ್ಯ, ಸಂಸ್ಕೃತಿ, ರಾಜರ ಪರಂಪರೆ ಮತ್ತು ಅವರ ಕೊಡುಗೆಯನ್ನು ಪ್ರಸ್ತುತಪಡಿಸಿದರು.

ಮಕ್ಕಳಿಗೆ ನೀಡುವ ಬೇಸಿಗೆ, ದಸರಾ ಸೇರಿದಂತೆ ಇತರೆ ರಜಾ ದಿನಗಳಲ್ಲಿ ಅವರಿಗೆ ಮತ್ತೆ ಪಠ್ಯದ ಹೊರೆ ಹೊರಿಸಬಾರದು. ಅದರ ಬದಲು ಇಂದಿನ ಕಾಲಕ್ಕೆ ತಕ್ಕಂತೆ ಅವರಿಗೆ ಜೀವನ ಕೌಶಲ್ಯ ತರಬೇತಿ ನೀಡಬೇಕು. ಇದರಿಂದ ಅವರ ಜೀವನಶೈಲಿಯೂ ಬದಲಾಗುತ್ತದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಸ್ತುತ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೆಸ್ಟ್ ಅವಾರ್ಡ್ ನೀಡಿ ಪ್ರೋತ್ಸಾಹಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ಮೈಸೂರು ರಾಜ್ಯ, ಸಂಸ್ಕೃತಿ, ರಾಜರ ಪರಂಪರೆ ಮತ್ತು ಅವರ ಕೊಡುಗೆಯನ್ನು ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು.

ಈ ಸಂದರ್ಭದಲ್ಲಿ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಗೌರವಾಧ್ಯಕ್ಷ ಪ್ರೊ.ಎಂ.ಕೆ. ನರಹರಿ ಬಾಬು, ಗೌರವ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್, ಸಮಾಜ ಸೇವಕ ಡಾ.ಕೆ.ರಘುರಾವ್ ವಾಜಪೇಯಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ರಾಮಚಂದ್ರಭಟ್, ಎಸ್.ಬಾಲಜಿ, ಡಾ.ನಳಿನಿ ಚಂದ್ರ ಇನ್ನಿತರರು ಉಪಸ್ಥಿತರಿದ್ದರು.

ಸಿಎಂ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ

ಲೋಕಾಯುಕ್ತ ವಿಚಾರಣೆಗೆ ಮಾಜಿ ಶಾಸಕ ರಾಮದಾಸ್, ನಾಗೇಂದ್ರ ಹಾಜರು: ಎರಡು ತಾಸು ನಡೆದ ವಿಚಾರಣೆ



ಮೈಸೂರು ಲೋಕಾಯುಕ್ತ ಕಚೇರಿಯಲ್ಲಿ ಮಾಜಿ ಶಾಸಕರಾದ ಎಲ್.ನಾಗೇಂದ್ರ ಹಾಗೂ ಎಸ್.ಎ.ರಾಮದಾಸ್ ಮುಖಾಮುಖಿಯಾದರು.

ಮೈಸೂರು,ಜ.2(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ ಸಂಬಂಧ ಇಂದು ಮಾಜಿ ಶಾಸಕರಾದ ಎಸ್.ಎ. ರಾಮದಾಸ್ ಹಾಗೂ ಎಲ್.ನಾಗೇಂದ್ರ ಅವರನ್ನು ಲೋಕಾಯುಕ್ತ ಅಧಿಕಾರಿಗಳು ವಿಚಾರಣೆ ನಡೆಸಿದರು.

ಇಂದು ಮಧ್ಯಾಹ್ನ 3 ಗಂಟೆಗೆ ಆಗಮಿಸಿದ ರಾಮದಾಸ್ ಅವರನ್ನು ಸಂಜೆ 5 ಗಂಟೆವರೆಗೆ ಎರಡು ತಾಸು ವಿಚಾರಣೆ ಮಾಡಲಾಯಿತು. ತರುವಾಯ ಸಂಜೆ 5 ಗಂಟೆಗೆ ಆಗಮಿಸಿದ ನಾಗೇಂದ್ರ ಅವರನ್ನು 1 ಗಂಟೆ ಕಾಲ ವಿಚಾರಣೆ ಮಾಡಿದರು.

ನಾಗೇಂದ್ರ ಮುಡಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರೆ, ರಾಮದಾಸ್ ಮುಡಾ ಸದಸ್ಯರಾಗಿದ್ದರು. ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು ವಿಜಯನಗರದಲ್ಲಿ 14 ನಿವೇಶನ ಪಡೆದಿರುವ ಪ್ರಕರಣ ಸಂಬಂಧ ಲೋಕಾಯುಕ್ತ ಅಧಿಕಾರಿಗಳು ಇಬ್ಬರನ್ನು ವಿಚಾರಣೆ ಮಾಡಿದ್ದಾರೆ. ಆದರೆ ಈ ಪ್ರಕರಣದಲ್ಲಿ ಇವರ ಪಾತ್ರವೇನಿತ್ತು ಎಂಬ ಬಗ್ಗೆ ಖಚಿತ ಮಾಹಿತಿ ಇಲ್ಲ. ವಿಚಾರಣೆ ತರುವಾಯ ರಾಮದಾಸ್ ಯಾವುದೇ ಪ್ರತಿಕ್ರಿಯೆ ನೀಡದೆ ಲೋಕಾಯುಕ್ತ ಕಚೇರಿಯಿಂದ ನಿರ್ಗಮಿಸಿದರು. ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ಬಗ್ಗೆ ಜನವರಿ 30 ರಂದು ಅಂತಿಮ ವರದಿ ಸಲ್ಲಿಸಬೇಕೆಂದು ನಾಗಪ್ರಸನ್ನ ಅವರಿರುವ ಹೈಕೋರ್ಟ್‌ನ ಏಕ ಸದಸ್ಯ ಪೀಠ ಲೋಕಾಯುಕ್ತರಿಗೆ ಆದೇಶ ನೀಡಿದೆ.

ದೇಶ - ವಿದೇಶ

ಡೊನಾಲ್ಡ್ ಟ್ರಂಪ್‌ರ ಲಾಸ್ ವೇಗಾಸ್ ಹೋಟೆಲ್ ಹೊರಗೆ ಟೆಸ್ಲಾ ಟ್ರಕ್ ಸ್ಫೋಟ: ಶಂಕಿತ ಉಗ್ರ ಸಾವು

ಲಾಸ್ ವೇಗಾಸ್: ನೆವಾಡಾದ ಲಾಸ್ ವೇಗಾಸ್‌ನಲ್ಲಿರುವ ಅಮೆರಿಕಾ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಡೆತನದ ಹೋಟೆಲ್‌ನ ಹೊರಗೆ ಇಂಧನ ಕ್ಯಾನಿಸ್ಟರ್‌ಗಳು ಮತ್ತು ಪಟಾಕಿ ಮಾರ್ಟರ್‌ಗಳಿಂದ ತುಂಬಿದ ಟೆಸ್ಲಾ ಸೈಬರ್ ಟ್ರಕ್ ಸ್ಫೋಟಗೊಂಡು ಟ್ರಕ್‌ನ ಚಾಲಕ ಮೃತಪಟ್ಟು, ಏಳು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.



ಟ್ರಕ್‌ನ್ನು ಕೊಲೊರಾಡೋದಲ್ಲಿ ಬಾಡಿಗೆಗೆ ಪಡೆಯಲಾಗಿದೆ. ಸ್ಫೋಟಕ್ಕೆ 2 ಗಂಟೆಗಳ ಮೊದಲು ಇಂದು ನಸುಕಿನ ಜಾವ ಟ್ರಕ್ ನಗರಕ್ಕೆ ಆಗಮಿಸಿದೆ. ಗಾಜಿನ ಪ್ರವೇಶದ್ವಾರದ ಬಳಿ ಹೋಟೆಲ್ ಮುಂಭಾಗದಲ್ಲಿ ನಿಲ್ಲಿಸಿದ ವಾಹನದಿಂದ ಹೊಗೆ ಬರಲಾರಂಭಿಸಿ ನಂತರ ಸ್ಫೋಟಿಸಿತು. ಅಧ್ಯಕ್ಷ ಜೊ ಬೈಡನ್ ನೇತೃತ್ವದ ಶ್ವೇತ ಭವನವು ಘಟನೆಯನ್ನು ಪತ್ತೆ ಹಚ್ಚುತ್ತಿದ್ದು, ಕಾನೂನು ಜಾರಿ ನಿರ್ದೇಶನಾಲಯ ನ್ಯೂ ಓರ್ಲಿಯನ್ಸ್‌ನಲ್ಲಿನ ದಾಳಿಗೂ ಇದಕ್ಕೂ ಸಂಬಂಧವಿದೆಯೇ ಎಂದು ತನಿಖೆ ನಡೆಸುತ್ತಿದೆ. ನ್ಯೂ ಓರ್ಲಿಯನ್ಸ್ ದಾಳಿಯಲ್ಲಿ 15 ಮಂದಿ ಮೃತಪಟ್ಟಿದ್ದರು. ಟ್ರಕ್ ಬೆಡ್‌ನಲ್ಲಿ ದೊಡ್ಡ ಪಟಾಕಿಗಳೊಂದಿಗೆ ಹಲವಾರು ಇಂಧನ ಕ್ಯಾನಿಸ್ಟರ್‌ಗಳು ಸೇರಿದಂತೆ ಟ್ರಕ್ ನೇರವಾಗಿ ಹೋಟೆಲ್‌ನ ಪ್ರವೇಶ ದ್ವಾರದ ಮುಂದೆ ನಿಂತಿರುವುದನ್ನು ಸಿಸಿ ಕ್ಯಾಮರಾ ದೃಶ್ಯಾವಳಿಗಳು ತೋರಿಸಿವೆ.


ಪತಿ–ಪತ್ನಿ ಜಗಳ; ಬಾವಿಗೆ ಹಾರಿದ ವ್ಯಕ್ತಿ ರಕ್ಷಿಸಲು ಹೋದ ನಾಲ್ಕು ಮಂದಿ ಸೇರಿ ಐವರು ಸಾವು

ಜಾರ್ಖಂಡ್: ಹೆಂಡತಿ ಜೊತೆ ಜಗಳದ ನಂತರ ಕೋಪದಿಂದ ಪತಿ ಬಾವಿಗೆ ಹಾರಿದ್ದು, ಆ ವ್ಯಕ್ತಿಯನ್ನು ರಕ್ಷಿಸಲು ಹೋದ ನಾಲ್ವರು ಸಾವನ್ನಪ್ಪಿರುವ ಆಘಾತಕಾರಿ ಘಟನೆ ಜಾರ್ಖಂಡ್‌ನ ಹಜಾರಿಬಾಗ್ ಜಿಲ್ಲೆಯಲ್ಲಿ ನಡೆದಿದೆ. ಸುಂದರ್ ಕರ್ಮಾಲಿ (27) ಮೃತ ವ್ಯಕ್ತಿ. ಈತ ತನ್ನ ಪತ್ನಿ ರೂಪಾದೇವಿಯೊಂದಿಗೆ ಮನೆಯಲ್ಲಿ ಜಗಳವಾಡಿದ್ದ. ಕುಪಿತಗೊಂಡ ಸುಂದರ್ ತನ್ನ ಬೈಕ್ ವೇಗವಾಗಿ ಚಲಾಯಿಸಿ ಬೈಕ್ ಅನ್ನು ಬಾವಿಗೆ ತಳ್ಳಿದ್ದಾನೆ. ಸ್ವಲ್ಪ ಹೊತ್ತಿನ ನಂತರ ಬೈಕ್ ತೆಗೆಯಲು ಬಾವಿಗೆ ಇಳಿದ. ಆದರೆ ಅವನು ಮರಳಿ ಬರಲೇ ಇಲ್ಲ.

ಗಾಬರಿಗೊಂಡ ಪತ್ನಿ ರೂಪಾ ಪತಿಯನ್ನು ರಕ್ಷಿಸುವಂತೆ ಕಿರುಚಿದ್ದಾರೆ. ನೆರೆಮನೆಯವರು ಸುಂದರ್‌ನನ್ನು ರಕ್ಷಿಸಲು ನಾಲ್ವರು ಒಬ್ಬರ ಹಿಂದೆ ಒಬ್ಬರು ಬಾವಿಗೆ ಇಳಿದಿದ್ದಾರೆ. ಈ ಐವರು ಬಾವಿಯಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಮೃತರನ್ನು ರಾಹುಲ್ ಕರ್ಮಾಲಿ, ವಿನಯ್ ಕರ್ಮಾಲಿ, ಪಂಕಜ್ ಕರ್ಮಾಲಿ ಮತ್ತು ಸೂರಜ್ ಭುಯಾನ್ ಎಂದು ಪೊಲೀಸರು ಗುರುತಿಸಿದ್ದಾರೆ. ಮೃತರೆಲ್ಲರೂ 25ರಿಂದ 28 ವರ್ಷದೊಳಗಿನವರು.


ಸ್ವಿಜರ್ಲೆಂಡ್‌ನಲ್ಲಿ ಸಾರ್ವಜನಿಕ ಸ್ಥಳದಲ್ಲಿ ಬುರ್ಖಾ ಧರಿಸುವುದು ನಿಷೇಧ

ಸ್ವಿಜರ್ಲೆಂಡ್: ಸ್ವಿಜರ್ಲೆಂಡ್‌ನಲ್ಲಿ ಹೊಸ ವರ್ಷದಿಂದ ಹೊಸ ಕಾನೂನು ಜಾರಿಯಾಗಿದೆ. ಸ್ವಿಜರ್ಲೆಂಡ್‌ನಲ್ಲಿ ಸಾರ್ವಜನಿಕ ಸ್ಥಳದಲ್ಲಿ ಬುರ್ಖಾ ಧರಿಸುವುದನ್ನು ನಿಷೇಧ ಮಾಡಲಾಗಿದೆ. ಬುರ್ಖಾ ಹಾಕಿಕೊಂಡು, ಮುಖ ಮುಚ್ಚಿಕೊಂಡು ಓಡಾಡುವಂತಿಲ್ಲ. ಈ ಕಾನೂನು ಉಲ್ಲಂಘಿಸಿದವರಿಗೆ 1000 ಸ್ವಿಸ್ ಫ್ರಾಂಕ್‌ಗಳ ದಂಡ ವಿಧಿಸಲಾಗುವುದು. ಸ್ವಿಜರ್ಲೆಂಡ್ ಸರ್ಕಾರದ ಹೊಸ ಕಾನೂನಿನಲ್ಲಿ ಇರುವ ವಿವರಗಳ ಪ್ರಕಾರ, ಸಾರ್ವಜನಿಕ ಸ್ಥಳಗಳಲ್ಲಿ ಮೂಗು, ಬಾಯಿ, ಕಣ್ಣು ಮುಚ್ಚುವುದನ್ನು ನಿಷೇಧ ಮಾಡಲಾಗಿದೆ. ಸಾರ್ವಜನಿಕರು ಹೋಗಬಹುದಾದ ಖಾಸಗಿ ಸ್ಥಳಗಳಿಗೂ ಈ ನಿಯಮ ಅನ್ವಯವಾಗಲಿದೆ. ವಿಮಾನ, ರಾಜತಾಂತ್ರಿಕ ಪ್ರದೇಶಗಳಿಗೆ ಬುರ್ಖಾ ನಿಷೇಧ ಅನ್ವಯಿಸುವುದಿಲ್ಲ. ಪೂಜಾ ಸ್ಥಳ ಮತ್ತು ಧಾರ್ಮಿಕ ಸ್ಥಳಗಳಲ್ಲಿ ಮುಖ ಮುಚ್ಚಿಕೊಳ್ಳಬಹುದು. ಆರೋಗ್ಯ, ಸುರಕ್ಷತಾ ಕಾರಣಗಳಿಂದ ಮುಖ ಮುಚ್ಚಿಕೊಳ್ಳಲು ವಿನಾಯಿತಿ ನೀಡಲಾಗಿದೆ. ಸೋಂಕು, ಕಾಯಿಲೆಯಿದ್ದರೆ ರೋಗಿಗಳು ಮಾಸ್ಕ್ ಹಾಕಿಕೊಳ್ಳಬಹುದು. ಪೊಲೀಸರು ಮತ್ತು ಸೈನಿಕರಿಗೆ ಗ್ಯಾಸ್ ಮಾಸ್ಕ್ ಧರಿಸಲು ವಿನಾಯಿತಿ ಇರುತ್ತದೆ.



ಹಿಮಾಚಲಪ್ರದೇಶದಲ್ಲಿ ಹಳ್ಳ ಹಿಡಿದ ಗ್ಯಾರಂಟಿ ಯೋಜನೆ: ವಿದ್ಯುತ್ ಸಬ್ಸಿಡಿ ನಿಲ್ಲಿಸಲು ಚಿಂತನೆ

ಶಿಮ್ಲಾ: ಹಿಮಾಚಲಪ್ರದೇಶದಲ್ಲಿ ಗ್ಯಾರಂಟಿಗಳು ಸರ್ಕಾರದ ಬೊಕ್ಕಸಕ್ಕೆ ತೀವ್ರ ಹೊರೆಯಾಗುತ್ತಿದೆ. ತೀವ್ರ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವ ಸರ್ಕಾರ ಈಗ ವಿದ್ಯುತ್ ಸಬ್ಸಿಡಿ ನಿಲ್ಲಿಸಲು ಚಿಂತನೆ ನಡೆಸುತ್ತಿದೆ. ಇದರ ಭಾಗವಾಗಿ ಸುಸ್ಥಿತಿಯಲ್ಲಿರುವ ವಿದ್ಯುತ್ ಗ್ರಾಹಕರು ಸಬ್ಸಿಡಿಯನ್ನು ಬಿಟ್ಟುಕೊಡುವಂತೆ ಸ್ವತಃ ಸಿಎಂ ಸುಖ್ವಿಂದರ್ ಸುಖು ಮನವಿ ಮಾಡಿದ್ದಾರೆ.



ರಾಜ್ಯದ ಶ್ರೀಮಂತ ನಾಗರಿಕರು ತಮ್ಮ ವಿದ್ಯುತ್ ಸಬ್ಸಿಡಿಗಳನ್ನು ಸ್ವಯಂಪ್ರೇರಣೆಯಿಂದ ಬಿಟ್ಟುಕೊಡಬೇಕು. ಇದು ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯ ಮೇಲಿನ ಆರ್ಥಿಕ ಒತ್ತಡವನ್ನು ಕಡಿಮೆ ಮಾಡುವುದಲ್ಲದೆ ಸಮಾಜದ ಆರ್ಥಿಕವಾಗಿ ದುರ್ಬಲ ವರ್ಗಗಳನ್ನು ಬೆಂಬಲಿಸುತ್ತದೆ. ಪ್ರಸ್ತುತ, ಒಂದು ಸಂಪರ್ಕಕ್ಕೆ 125–ಯೂನಿಟ್ ಉಚಿತ ವಿದ್ಯುತ್ ನೀಡಲಾಗುತ್ತದೆ. ಅನೌಪಚಾರಿಕ ಚರ್ಚೆಯಲ್ಲಿ ರಾಜ್ಯದ ಎಲ್ಲಾ ಕ್ಯಾಬಿನೆಟ್ ಸದಸ್ಯರು ಮತ್ತು ಕಾಂಗ್ರೆಸ್ ಶಾಸಕರು ತಮ್ಮ ಸಬ್ಸಿಡಿಗಳನ್ನು ತ್ಯಜಿಸಲು ಒಪ್ಪಿಕೊಂಡಿದ್ದಾರೆ. ಸರ್ಕಾರ ವಾರ್ಷಿಕವಾಗಿ ವಿದ್ಯುತ್ ಸಬ್ಸಿಡಿಗಾಗಿ 2,200 ಕೋಟಿ, ವಿದ್ಯುತ್ ಮಂಡಳಿ ನೌಕರರ ಸಂಬಳ ಮತ್ತು ಪಿಂಚಣಿಗಾಗಿ ಮಾಸಿಕ 200 ಕೋಟಿ ಖರ್ಚು ಮಾಡುತ್ತದೆ. ಹಿಮಾಚಲ ಪ್ರದೇಶವನ್ನು ಸ್ವಾವಲಂಬಿಯನ್ನಾಗಿ ಮಾಡುವ ಮತ್ತು ರಾಜ್ಯದ ಆರ್ಥಿಕತೆಯ ಕ್ರಮೇಣ ಪುನರುಜ್ಜೀವನಕ್ಕೆ ವ್ಯವಸ್ಥೆ ಸುಧಾರಿಸಲು ಯತ್ನಿಸಲಾಗುತ್ತಿದೆ ಎಂದರು.

ಅಮಾನತುಗೊಂಡ ದಕ್ಷಿಣ ಕೊರಿಯಾ ಅಧ್ಯಕ್ಷ ಯೂನ್ ಸುಕ್ ಯೋಲ್ ವಿರುದ್ಧ ಅರೆಸ್ಟ್ ವಾರಂಟ್

ದಕ್ಷಿಣ ಕೊರಿಯಾ: ಡಿ.3ರಂದು ಮಾರ್ಷಲ್ ಕಾನೂನನ್ನು ಹೇರುವ ನಿರ್ಧಾರದ ಮೇಲೆ ಅಧಿಕಾರದಿಂದ ಅಮಾನತುಗೊಂಡ ದಕ್ಷಿಣ ಕೊರಿಯಾದ ಅಧ್ಯಕ್ಷ ಯೂನ್ ಸುಕ್ ಯೋಲ್ ವಿರುದ್ಧ ಬಂಧನ ವಾರಂಟ್ ಮತ್ತು ಸರ್ಚ್ ವಾರಂಟ್ ಎರಡನ್ನೂ ಜಾರಿಗೊಳಿಸಲಾಗಿದೆ.



ದಕ್ಷಿಣ ಕೊರಿಯಾದ ನ್ಯಾಯಾಲಯ ಯೂನ್ ಸುಕ್ ಯೋಲ್ ವಿರುದ್ಧ ಬಂಧನ ವಾರಂಟ್ ಅನುಮೋದಿಸಿದೆ ಎಂದು ತನಿಖಾ ಅಧಿಕಾರಿಗಳು ತಿಳಿಸಿದ್ದಾರೆ. ತನಿಖಾಧಿಕಾರಿಗಳು ದಂಗೆ ಮತ್ತು ಅಧಿಕಾರ ದುರುಪಯೋಗದ ಆರೋಪಗಳನ್ನು ಹೇರಿದ ನಂತರ ಸಿಯೋಲ್ ನ್ಯಾಯಾಲಯವು ಯೂನ್ ಸುಕ್ ಯೋಲ್‌ಗೆ ಬಂಧನ ವಾರಂಟ್ ಹೊರಡಿಸಿದೆ. ಉನ್ನತ ಶ್ರೇಣಿಯ ಅಧಿಕಾರಿಗಳ ಭ್ರಷ್ಟಾಚಾರ ತನಿಖಾ ಕಚೇರಿಯು ಸಿಯೋಲ್ ವೆಸ್ಟರ್ನ್ ಡಿಸ್ಟ್ರಿಕ್ಟ್ ಕೋರ್ಟ್ ವಾರಂಟ್ ಅನ್ನು ಅನುಮೋದಿಸಿದೆ ಎಂದು ದೃಢಪಡಿಸಿದೆ. ಸ್ಥಳೀಯ ಮಾಧ್ಯಮಗಳು, ದಕ್ಷಿಣ ಕೊರಿಯಾದ ಇತಿಹಾಸದಲ್ಲೇ ಹಾಲಿ ಅಧ್ಯಕ್ಷರಿಗೆ ನೀಡಲಾದ ಮೊದಲ ಬಂಧನ ವಾರಂಟ್ ಇದು ಎಂದು ಹೇಳಿವೆ. ಅಮಾನತುಗೊಂಡ ಅಧ್ಯಕ್ಷರು 3ನೇ ಬಾರಿಗೆ ವಿಚಾರಣೆಗೆ ಹಾಜರಾಗದೇ ತಪ್ಪಿಸಿಕೊಂಡಿದ್ದರು.

ಮೈಸೂರು ಮಿತ್ರ ಶುಕ್ರವಾರ 3 ಜನವರಿ 2025

ಮೃತ್ಯುಂಜಯ ದೇವಾಲಯದಲ್ಲಿ ವಸ್ತ್ರಸಂಹಿತೆ ವಿವಾದ ಹಿನ್ನೆಲೆ

ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡುವವರ ವಿರುದ್ಧ ಸುಮೋಟೋ ಕೇಸ್

ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಎಚ್ಚರಿಕೆ

ಮಡಿಕೇರಿ, ಜ.2–ಯಾವುದೇ ಸಮುದಾಯಗಳನ್ನು ಗುರಿಯಾಗಿಸಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡುವುದು ಕಂಡು ಬಂದಲ್ಲಿ ಸುಮೋಟೋ ಕೇಸ್ ದಾಖಲಿಸಿಕೊಂಡು, ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಕಟ್ಟೆಮಾಡುವಿನ ಶ್ರೀ ಮಹಾಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವ ವೇಳೆ ವಸ್ತ್ರಸಂಹಿತೆ ಸಂಬಂಧ ಉಂಟಾದ ವಿವಾದ ಸಂಬಂಧ ಸಮುದಾಯಗಳ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡುತ್ತಿರುವುದು ಕಂಡು ಬಂದಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ಎರಡು ಪ್ರತ್ಯೇಕ ದೂರುಗಳನ್ನು ಆಧರಿಸಿ ಅನುದೀಪ ಮತ್ತು ಅಯ್ಯಪ್ಪ ಎಂಬ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಂಡು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ ಎಂದು ಹೇಳಿದರು.



ಕಟ್ಟೆಮಾಡು ಗ್ರಾಮದ 5 ಕಿಮೀ ವ್ಯಾಪ್ತಿಯಲ್ಲಿ ಈಗಾಗಲೇ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಈ ಅವಧಿಯಲ್ಲಿ ಪ್ರತಿಭಟನೆ, ರ್‍ಯಾಲಿ, ಸಭೆಗಳನ್ನು ನಡೆಸಲು ಅವಕಾಶವಿಲ್ಲ. ಗ್ರಾಮದ ಹಿತದೃಷ್ಟಿಯಿಂದ ನಿಷೇಧಾಜ್ಞೆ ವ್ಯಾಪ್ತಿಯನ್ನು ದೇವಾಲಯ ಸುತ್ತಮುತ್ತಲಿನ ಪ್ರದೇಶಕ್ಕೆ ಸೀಮಿತಗೊಳಿಸುವ ಬಗ್ಗೆ ಚಿಂತನೆ ಇದೆ. ಈ ಕುರಿತು ಇನ್ನಷ್ಟೇ ನಿರ್ಧಾರ ತೆಗೆದುಕೊಳ್ಳಬೇಕಿದೆ.

–ಕೆ.ರಾಮರಾಜನ್, ಕೊಡಗು ಎಸ್‌ಪಿ

ದೇವಾಲಯ ವಿಚಾರ ಕುರಿತು ಎರಡು ಸಮುದಾಯದ ಮುಖಂಡರ ಜೊತೆಯಲ್ಲಿ ಶಾಂತಿಸಭೆ ನಡೆಸಿ ಪರಸ್ಪರ ಸಮಸ್ಯೆ ಪರಿಹರಿಸಿಕೊಳ್ಳುವಂತೆ ಈಗಾಗಲೇ ಸೂಚಿಸಲಾಗಿದೆ. ಎರಡು ಸಮುದಾಯದ ಮುಖಂಡರು ಇದಕ್ಕೆ ಒಪ್ಪಿಗೆ ಸೂಚಿಸಿದ್ದು, ಅಲ್ಲದೇ, ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದರು. ಅದರಂತೆ ಪರಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಯಾರೂ ಇಂತಹ ಕೃತ್ಯಗಳಲ್ಲಿ ಪಾಲ್ಗೊಳ್ಳದಂತೆ ಆಯಾ ಸಮುದಾಯದ ಪ್ರಮುಖರು ಮತ್ತು ಹಿರಿಯರು ಕೂಡ ಕರೆ ನೀಡಬೇಕು ಎಂದು ಎಸ್‌ಪಿ ಕೆ.ರಾಮರಾಜನ್ ಮನವಿ ಮಾಡಿದ್ದಾರೆ.

ಎಲ್ಲಾ ನಿರ್ದೇಶಕರ ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತರಿಗೆ ಜಯ



ಸಂಪಾಜೆ ಪಯಸ್ವಿನಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಜಯ ಗಳಿಸಿದ ಬಿಜೆಪಿ ಬೆಂಬಲಿತರು.

ಮಡಿಕೇರಿ, ಜ.2–ಸಂಪಾಜೆ ಪಯಸ್ವಿನಿ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯ ಎಲ್ಲಾ 13 ನಿರ್ದೇಶಕರ ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಜಯ ಗಳಿಸಿದ್ದಾರೆ.

ಹಿಂದುಳಿದ ವರ್ಗ ಎ ಕ್ಷೇತ್ರದಿಂದ ಕಿಶನ್ ಪೊನ್ನೆಟ್ಟಿಯಂಡ 1008 ಮತ, ಹಿಂದುಳಿದ ವರ್ಗ ಬಿ ಕ್ಷೇತ್ರದಿಂದ ಪುಂಡರೀಕ ಅರಂಬೂರು 986, ಪರಿಶಿಷ್ಟ ಜಾತಿ ಕ್ಷೇತ್ರದಿಂದ ಪಕೀರ 885, ಪರಿಶಿಷ್ಟ ಪಂಗಡ ಕ್ಷೇತ್ರದಿಂದ ವಸಂತ ನಾಯ್ಕ 1001, ಮಹಿಳೆಯರ ಕ್ಷೇತ್ರದಿಂದ ಪ್ರಿಯಾಂಕಾ ರೋಹಿತ್ ಹೊಸೂರು 898, ವಾಣಿ ಜಗದೀಶ್ 853, ಸಾಲಗಾರರಲ್ಲದ ಕ್ಷೇತ್ರದಿಂದ ದಿನೇಶ್ ಸಣ್ಣಮನೆ 123, ಸಾಮಾನ್ಯ 6 ಕ್ಷೇತ್ರದಲ್ಲಿ ಎಸ್.ಸಿ.ಅನಂತ, 1193, ಯಶವಂತ ದೇವರಗುಂಡ 875, ತೀರ್ಥಪ್ರಸಾದ್ ಕೋಲ್ಚಾರ್ 886, ದಯಾನಂದ ಪನೆಡ್ಕ 902, ಹೊನ್ನಪ್ಪ ಕಾಸ್ಪಾಡಿ 778 ಹಾಗೂ ರಾಮಮೂರ್ತಿ ಉಂಬಳೆ 802 ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ. ಈ ಸಂದರ್ಭ ಬಿಜೆಪಿ ಜಿಲ್ಲಾ ವಕ್ತಾರ ಸುಬ್ರಹ್ಮಣ್ಯ ಉಪಾಧ್ಯಾಯ ಮಾತನಾಡಿ, ಒಡೆದು ಆಳುವ ರಾಜಕೀಯ ತಂತ್ರಕ್ಕೆ ಸೋಲಾಗಿದೆ. ಬಿಜೆಪಿ ಕಾರ್ಯಕರ್ತರ ಒಗ್ಗಟ್ಟಿನ ಪರಿಶ್ರಮಕ್ಕೆ ಜಯ ಸಿಕ್ಕಿದೆ ಎಂದರು.

ಎನ್.ಯು.ನಾಚಪ್ಪ ವಿರುದ್ಧ ಎಸ್‌ಪಿಗೆ ದೂರು



ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹರಿಬಿಟ್ಟು ಕೊಡಗು ಗೌಡ ಸಮುದಾಯದ ವಿರುದ್ಧ ನಿಂದಿಸಲಾಗಿದೆ ಎಂದು ಆರೋಪಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೆ ದೂರು ನೀಡಲು ಆಗಮಿಸಿದ ಕೊಡಗು ಗೌಡ ಯುವ ವೇದಿಕೆ ಪದಾಧಿಕಾರಿಗಳು.

ಮಡಿಕೇರಿ, ಜ.2–ಕೊಡಗಿನ ಕಟ್ಟೆಮಾಡು ಗ್ರಾಮದ ಶ್ರೀ ಮಹಾಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವ ವೇಳೆ ವಸ್ತ್ರಸಂಹಿತೆ ಸಂಬಂಧ ಉಂಟಾದ ವಿವಾದವನ್ನು ಮುಂದಿಟ್ಟುಕೊಂಡು ಅದರ ಲಾಭ ಪಡೆಯುವ ದುರುದ್ದೇಶದಿಂದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು. ನಾಚಪ್ಪ ಅವರು ಸಾಮಾಜಿಕ ಜಾಲತಾಣದಲ್ಲಿ ಸಂದೇಶವೊಂದನ್ನು ಹರಿಬಿಟ್ಟು ಕೊಡಗಿನ ಗೌಡ ಸಮುದಾಯದವರ ವಿರುದ್ಧ ಆಕ್ಷೇಪಾರ್ಹ ಭಾಷೆ ಬಳಸಿ, ಅವಹೇಳನಕಾರಿಯಾಗಿ ನಿಂದಿಸಿದ್ದಾರೆ ಎಂದು ಆರೋಪಿಸಿ ಕೊಡಗು ಗೌಡ ಯುವ ವೇದಿಕೆ ವತಿಯಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರಿಗೆ ದೂರು ನೀಡಿದೆ.

ನಾಚಪ್ಪ ಕೊಡಗಿನ ಗೌಡ ಸಮುದಾಯದವರನ್ನು ನಿಂದಿಸಿರುವುದಲ್ಲದೆ, ಗೌಡರ ವಿರುದ್ಧ ಪ್ರಚೋದಿಸಿದ್ದಾರೆ. ವಿವಿಧ ಚಿತ್ರಗಳ ಜೋಡಣೆಯೊಂದಿಗೆ ಆಡಿಯೋ ಸಂದೇಶಗಳಾಗಿ ಎಲ್ಲೆಡೆ ಪ್ರಸಾರ ಮಾಡಿದ್ದಾರೆ. ತಮ್ಮ ಸಂದೇಶದಲ್ಲಿ ಕೊಡಗಿನ ಗೌಡರ ಬಗ್ಗೆ ಜನಾಂಗೀಯ ನಿಂದನೆ ಸಹ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಆರೋಪಿ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

ಇದೇ ವೇಳೆ ಕೊಡಗು ಗೌಡ ಯುವ ವೇದಿಕೆ ಅಧ್ಯಕ್ಷ ಜಗದೀಶ್ ಪಾಣತ್ತಲೆ, ವಕೀಲ ಕೆ.ಡಿ.ದಯಾನಂದ, ಗೌಡ ಸಂಘಟನೆಗಳ ಪ್ರಮುಖರು ಹಾಗೂ ಕಟ್ಟೆಮಾಡು ಗ್ರಾಮಸ್ಥರು ಹಾಜರಿದ್ದರು.

ವಿರಾಜಪೇಟೆಯಲ್ಲಿ ಅಯ್ಯಪ್ಪಸ್ವಾಮಿ ಮೆರವಣಿಗೆ



ಮಲೆತಿರಿಕೆ ಬೆಟ್ಟದ ಅಯ್ಯಪ್ಪಸ್ವಾಮಿ ವಾರ್ಷಿಕೋತ್ಸವ ಅಂಗವಾಗಿ ವಿರಾಜಪೇಟೆಯಲ್ಲಿ ಸ್ತಬ್ಧಚಿತ್ರ ಮೆರವಣಿಗೆ ನಡೆಸಲಾಯಿತು.

ವಿರಾಜಪೇಟೆ: ಮಲೆತಿರಿಕೆಬೆಟ್ಟದ ಶ್ರೀ ಅಯ್ಯಪ್ಪಸ್ವಾಮಿ ವಾರ್ಷಿಕೋತ್ಸವ ಅಂಗವಾಗಿ ಬುಧವಾರ ರಾತ್ರಿ ಪಟ್ಟಣದ ಮುಖ್ಯಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆಯಲ್ಲಿ ವಿದ್ಯುತ್ ದೀಪ ಅಲಂಕೃತ ಮಂಟಪದಲ್ಲಿ ಅಯ್ಯಪ್ಪಸ್ವಾಮಿ, ಮತ್ಸ್ಯ ಅವತಾರದ ಸ್ತಬ್ಧಚಿತ್ರ, ಕೇರಳದ ಚಂಡೆ ಮದ್ದಳೆ ಹಾಗೂ ಇತರ ಆಕರ್ಷಕ ಕಲಾ ತಂಡಗಳು ಭಾಗವಹಿಸಿದ್ದವು. ಮಲೆತಿರಿಕೆಬೆಟ್ಟದ ದೇವಾಲಯದಿಂದ ಪ್ರಾರಂಭವಾದ ಮೆರವಣಿಗೆ ಪಟ್ಟಣದ ತೆಲುಗರ ಬೀದಿ, ಜೈನರ ಬೀದಿ, ಫಿ.ಮಾ. ಕಾರ್ಯಪ್ಪ ರಸ್ತೆ, ಗಡಿಯಾರ ಕಂಬದ ಮಾರ್ಗವಾಗಿ ಖಾಸಗಿ ಬಸ್ ನಿಲ್ದಾಣ, ಮಲಬಾರ್ ರಸ್ತೆಯ ಮುತ್ತಪ್ಪ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಲಾಯಿತು. ಬಳಿಕ ಮೆರವಣಿಗೆ ಹಿಂದಿರುಗಿ ರಾತ್ರಿ 12.30ಕ್ಕೆ ದೇವಾಲಯದಲ್ಲಿ ಸುಬ್ರಹ್ಮಣ್ಯ ದೇವರಿಗೆ ಪೂಜೆ ಸಲ್ಲಿಸಲಾಯಿತು.

ಅಯ್ಯಪ್ಪಸ್ವಾಮಿ ಉತ್ಸವ ಮತ್ತು ಮೆರವಣಿಗೆಯಲ್ಲಿ ಹೆಚ್ಚಿನ ಭಕ್ತರು ನೆರೆದಿದ್ದರು. ಜ.14ರಂದು ಸಂಜೆ 6 ಗಂಟೆಗೆ ಅಯ್ಯಪ್ಪಸ್ವಾಮಿ ಮಕರ ಜ್ಯೋತಿ ಪೂಜೆ ನಡೆಯಲಿದೆ.

ಎಲ್ಲರೂ ಶಾಂತಿ ಕಾಪಾಡೋಣ: ಜಯ ಚಿಣ್ಣಪ್ಪ ಮನವಿ



ಕುಕ್ಕೇರ ಜಯ ಚಿಣ್ಣಪ್ಪ

ಮಡಿಕೇರಿ, ಜ.2– ತಾಲೂಕಿನ ಕಟ್ಟೆಮಾಡು ಶ್ರೀ ಮಹಾಮೃತ್ಯುಂಜಯ ದೇವಾಲಯ ವಾರ್ಷಿಕೋತ್ಸವ ವೇಳೆ ವಸ್ತ್ರಸಂಹಿತೆ ಸಂಬಂಧ ಉಂಟಾದ ವಿವಾದ ಕುರಿತು ಹೇಳಿಕೆ ಹಾಗೂ ಪ್ರತಿ ಹೇಳಿಕೆ ನೀಡಿ ಸಮಾಜದಲ್ಲಿ ಅಶಾಂತಿ ವಾತಾವರಣ ಸೃಷ್ಟಿಸುವ ಬದಲು, ಕೊಡಗಿನ ಹಿತಕ್ಕಾಗಿ ಆಗಿರುವುದನ್ನು ಮರೆತು ಬಿಡೋಣ. ಎಲ್ಲರ ಸಂಪ್ರದಾಯವನ್ನು ಎಲ್ಲರೂ ಪರಸ್ಪರ ಗೌರವಿಸಿ ಶಾಂತಿ ಕಾಪಾಡುವ ಮೂಲಕ ಸ್ನೇಹ, ಪ್ರೀತಿ ಬೆಳೆಸೋಣ ಎಂದು ಅರೆಕಾಡು ಹೊಸ್ಕೇರಿಯ ಕೊಡವ ವೆಲ್‌ಫೇರ್ ಐಂಡ್ ರಿಕ್ರಿಯೇಷನ್ ಅಸೋಸಿಯೇಷನ್ ಅಧ್ಯಕ್ಷ ಕುಕ್ಕೇರ ಜಯ ಚಿಣ್ಣಪ್ಪ ಮನವಿ ಮಾಡಿದ್ದಾರೆ.

ವಿವಾದವನ್ನು ಸರಿಪಡಿಸಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕೆ ಹೊರತು, ಬೆಂಕಿಯ ಜ್ವಾಲೆಯಾಗಲು ಬಿಡಬಾರದು. ಕೊಡಗಿನಲ್ಲಿ ನೆಲೆಸಿರುವ ಪ್ರತಿಯೊಂದು ಜನಾಂಗದವರು ಸ್ವಾಭಿಮಾನಿ, ಪ್ರಜ್ಞಾವಂತ ಹಾಗೂ ವಿದ್ಯಾವಂತರಾಗಿದ್ದಾರೆ. ಆದ್ದರಿಂದ ದೇವಾಲಯದಲ್ಲಿ ನಡೆದ ಪ್ರಕರಣವನ್ನು ಮತ್ತಷ್ಟು ಬೆಳೆಸದೆ ಸಾಮರಸ್ಯ ಮೂಲಕ ಸಮಸ್ಯೆಯನ್ನು ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಕೊಡಗಿನ ಜನರನ್ನು ಇಡೀ ಸಮಾಜ ಅತ್ಯಂತ ಪ್ರೀತಿ ಮತ್ತು ಗೌರವದಿಂದ ಕಾಣುತ್ತದೆ. ಆದರೆ, ಕಟ್ಟೆಮಾಡುವಿನ ವಿವಾದ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಪರಸ್ಪರ ಅವಮಾನಿಸುವ ಪ್ರಕರಣಗಳು ಹೆಚ್ಚಾಗಿದೆ. ಕೊಡಗಿನ ಹಿತದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆಯಲ್ಲ. ಎಲ್ಲಾ ಸಮುದಾಯದವರು ತಮ್ಮ ಪ್ರತಿಷ್ಠೆಯನ್ನು ಬದಿಗೊತ್ತಿ, ಮೃತ್ಯುಂಜಯನಲ್ಲಿ ಕ್ಷಮೆ ಕೋರಿ ಸಾಮರಸ್ಯದ ಸಮಾಜ ಕಟ್ಟಲು ಪಣತೊಡೋಣ ಎಂದು ಕುಕ್ಕೇರ ಜಯ ಚಿಣ್ಣಪ್ಪ ಮಾನವಿ ಮಾಡಿದ್ದಾರೆ.

ನಾಪೋಕ್ಲುವಿನಲ್ಲಿ ಬೆಳ್ಳಿ ಹಬ್ಬದ ಮೆರವಣಿಗೆ...



ನಾಪೋಕ್ಲುವಿನಲ್ಲಿ ನಡೆದ ಕೊಡವ ಸಮಾಜದ ಬೆಳ್ಳಿ ಹಬ್ಬದ ಮೆರವಣಿಗೆಗೆ ಮೈಸೂರು ಕೊಡವ ಸಮಾಜದ ಅಧ್ಯಕ್ಷ ಪೊಂಜಾಂಡ ಎ.ಗಣಪತಿ ಗಾಳಿಗೆ ಗುಂಡು ಹೊಡೆಯುವ ಮೂಲಕ ಚಾಲನೆ ನೀಡಿದರು. ನಾಪೋಕ್ಲು ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ಸಿ.ನಾಣಯ್ಯ, ಉಪಾಧ್ಯಕ್ಷ ಕರವಂಡ ಪಿ.ನಾಣಯ್ಯ, ಕಾರ್ಯದರ್ಶಿ ಕುಲ್ಲೇಟಿರ ಅಜಿತ್ ನಾಣಯ್ಯ, ಸಹ ಕಾರ್ಯದರ್ಶಿ ಮಾಚೆಟ್ಟಿರ ಕುಶಾಲಪ್ಪ, ಬಾಳೆಯಡ ದಿವ್ಯಾ ಮಂದಪ್ಪ, ಬೊಟ್ಟೋಳಂಡ ವಿನಿತಾ ಮಾದಪ್ಪ, ಮಾಚೆಟ್ಟಿರ ಕುಶು ಕುಶಾಲಪ್ಪ ಇದ್ದರು.

ಕೊಳ್ಳೇಗಾಲದಲ್ಲಿ ಕೋರೆಗಾಂವ್ ಮೆರವಣಿಗೆ...



ಕೊಳ್ಳೇಗಾಲದಲ್ಲಿ ಬುಧವಾರ ಭೀಮಾ ಕೋರೆಗಾಂವ್ ಸ್ವಾಭಿಮಾನೋತ್ಸವ ಮೆರವಣಿಗೆ ನಡೆಯಿತು. ಎಐಬಿಎಸ್ಪಿ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ, ಅಂಬೇಡ್ಕರ್ ವಾದಿ ಎಂ.ಗೋಪಿನಾಥ್, ನಗರಸಭೆ ಅಧ್ಯಕ್ಷೆ ರೇಖಾ, ಅಂಬೇಡ್ಕರ್ ಪ್ರತಿಮೆ ನಿರ್ಮಾತೃ ಓಲೆ ಮಹದೇವ, ಆಯೋಜಕರಾದ ಶಂಕನಪುರ ಶೇಖರ್ ಬುದ್ಧ, ನಟರಾಜು ಕಪೀಲ್, ಭೀಮನಗರ ಮಣಿ, ರಾಜು ಡಿಟಿಪಿ, ಶ್ರೀಧರ್, ಷಣ್ಮು ಇದ್ದರು.

ಕ್ಯಾಲೆಂಡರ್ ಬಿಡುಗಡೆ...



ಸರ್ಕಾರಿ ಜಿಲ್ಲಾ ವಾಹನ ಚಾಲಕರ ಸಂಘದ ಕ್ಯಾಲೆಂಡರ್ ಅನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ಬಿಡುಗಡೆ ಮಾಡಿದರು. ಸಂಘದ ಜಿಲ್ಲಾಧ್ಯಕ್ಷ ಆರ್.ಶ್ರೀನಿವಾಸ್, ಗೌರವಾಧ್ಯಕ್ಷ ಬಿ.ಪಿ.ಪ್ರಕಾಶ್, ಉಪಾಧ್ಯಕ್ಷ ಎಸ್.ಶಶಿಕುಮಾರ್, ಕಾರ್ಯದರ್ಶಿ ಎಂ.ಎಸ್.ಪ್ರಭುಸ್ವಾಮಿ, ಪಧಾದಿಕಾರಿಗಳು, ವಾಹನ ಚಾಲಕರು ಇದ್ದರು.

ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಚಾಲನೆ



ಚಾಮರಾಜನಗರ: ಚಾಮರಾಜನಗರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಹರದನಹಳ್ಳಿ, ತಾವರಕಟ್ಟೆಮೋಳೆ ಸಂಪರ್ಕ ಸೇತುವೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಹರದನಹಳ್ಳಿ, ತಾವರಕಟ್ಟೆಮೋಳೆ ಸಂಪರ್ಕ ಹಳೇ ಸೇತುವೆ ತಳಮಟ್ಟದಲ್ಲಿದ್ದು, ಮಳೆ ಬಂದರೆ ಸೇತುವೆ ಮೇಲೆ ನೀರು ನಿಲ್ಲುತ್ತಿದೆ. ಇದರಿಂದ ಶಾಲಾ ವಿದ್ಯಾರ್ಥಿಗಳು, ರೈತರು, ವಾಹನ ಸವಾರರಿಗೆ ಸಂಚರಿಸಲು ಸಮಸ್ಯೆಯಾಗಿದೆ. ಈ ಸಂಬಂಧ ಗ್ರಾಮಸ್ಥರು ಹೊಸ ಸೇತುವೆ ನಿರ್ಮಿಸುವಂತೆ ಮನವಿ ಮಾಡಿದ್ದರು. ಗ್ರಾಮಸ್ಥರ ಬೇಡಿಕೆಯಂತೆ ಸಣ್ಣ ನೀರಾವರಿ ಇಲಾಖೆ ವತಿಯಿಂದ 75 ಲಕ್ಷ ರೂ. ವೆಚ್ಚದಲ್ಲಿ ಸೇತುವೆ ನಿರ್ಮಿಸಲು ಚಾಲನೆ ನೀಡಲಾಗಿದೆ ಎಂದರು. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಹೆಚ್ಚು ಒತ್ತು ನೀಡಿ, ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ, ಸಾರ್ವಜನಿಕರ ಮುಕ್ತ ಸಂಚಾರಕ್ಕೆ ಅವಕಾಶ ನೀಡಬೇಕು ಎಂದು ಸಣ್ಣ ನೀರಾವರಿ ಇಲಾಖೆ ಇಂಜಿನಿಯರ್‌ಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಹರದನಹಳ್ಳಿ ಗ್ರಾಪಂ ಅಧ್ಯಕ್ಷ ಮಂಜು, ಸದಸ್ಯ ಮಹೇಶ್, ಡೇರಿ ಅಧ್ಯಕ್ಷ ಬಸವರಾಜು, ತಾಪಂ ಮಾಜಿ ಸದಸ್ಯ ಹೆಚ್.ಎಂ. ಮಹದೇವ ಶೆಟ್ಟಿ, ಸಣ್ಣ ನೀರಾವರಿ ಇಲಾಖೆ ಇಇ ಮಂಜುಳಾ, ಎಇಇ ಅಭಿಲಾಷ್, ಗುತ್ತಿಗೆದಾರ ಹನುಮಂತು, ಶಶಿಶೆಟ್ಟಿ, ವರ್ಕ್ ಇನ್ಸ್‌ಪೆಕ್ಟರ್ ಬಸವಣ್ಣ, ಪಿಡಿಓ ಶ್ರೀಕಂಠನಾಯ್ಕ, ಗ್ರಾಮಸ್ಥರು ಹಾಜರಿದ್ದರು.

ಸಾರನಾಥ ಬೌದ್ಧ ವಿಹಾರದಲ್ಲಿ ಕೋರೆಗಾಂವ್ ವಿಜಯೋತ್ಸವ

ಐತಿಹಾಸಿಕ ಸ್ವಾಭಿಮಾನದ ಭೀಮಾ ಕೋರೆಗಾಂವ್ ಕದನ: ಡಾ.ಶಿವಕುಮಾರ್



ಚಾಮರಾಜ ನಗರದ ಸಾರನಾಥ ಬೌದ್ಧ ವಿಹಾರದಲ್ಲಿ ಭೀಮ ಕೋರೆಗಾಂವ್ ವಿಜಯೋತ್ಸವ ಆಚರಿಸಲಾಯಿತು.

ಚಾಮರಾಜನಗರ, ಜ.2–ಜಗತ್ತಿನ ಯುದ್ಧದ ಚರಿತ್ರೆಗಳಲ್ಲಿ ಭೀಮ ಕೋರೆಗಾಂವ್ ಮಹತ್ವ ಪಡೆದಿದೆ ಎಂದು ಸಾಹಿತಿ ಡಾ.ಶಿವಕುಮಾರ್ ನಂಜಾ ಮೇಸ್ತ್ರಿ ಕಾಗಲವಾಡಿ ಹೇಳಿದರು.

ನಗರದ ಸಾರನಾಥ ಬೌದ್ಧ ವಿಹಾರದಲ್ಲಿ ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾ ಶಾಖೆ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ನಡೆದ ಭೀಮ ಕೋರೆಗಾಂವ್ ವಿಜಯೋತ್ಸವದಲ್ಲಿ ಮಾತನಾಡಿದ ಅವರು, ಕೋರೆಗಾಂವ್ ಭಾರತದ ಇತಿಹಾಸದಲ್ಲೇ ಹೆಸರಾದ ಕದನ ಹಾಗೂ ಭೂಮಿ ಇದು. ಅಸ್ಪೃಶ್ಯರ ಹಕ್ಕುಗಳಿಗೆ ತಳುಕು ಹಾಕಿಕೊಂಡಿರುವ ಸ್ಥಳವಿದು. 500 ಮಹರ್ ಸೈನಿಕರು ಆಹಾರ, ನೀರು ಹಾಗೂ ವಿಶ್ರಾಂತಿ ಇಲ್ಲದೆ 28 ಸಾವಿರ ಮಂದಿ ಇದ್ದ ಸೈನ್ಯದ ವಿರುದ್ಧ ನಿರಂತರ 12 ಗಂಟೆ ಕಾದಾಡಿದ ಸ್ಮರಣೀಯ ಕದನ ಕೋರೆಗಾಂವ್. 500 ಮಹರ್ ಸೈನಿಕರು ಇತಿಹಾಸ ಸೃಷ್ಟಿಸಿದರು ಎಂದರು.

ಭಾರತ ಇತಿಹಾಸದಲ್ಲಿ ಮರೆಮಾಚಿದ ಕೋರೆಗಾಂವ್ ಯುದ್ಧ ಡಾ.ಬಾಬಾ ಸಾಹೇಬರಿಗೆ ಸ್ಫೂರ್ತಿಯಾಗಿತ್ತು. ಏಕೆಂದರೆ, 1818ರ ಜ.1ರಲ್ಲಿ ಭಾರತ ಕರಾಳ ಅಸಮಾನತೆಗಾಗಿ ಸ್ವಾತಂತ್ರ, ಸಮಾನತೆ, ಭಾತೃತ್ವಕ್ಕಾಗಿ ತನ್ನವರ ವಿರುದ್ಧ ತನ್ನ ನೆಲದಲ್ಲಿ ನಡೆದ ಈ ಕದನ ಚರಿತ್ರೆಯೊಂದಿದ್ದರೆ, ಅದು ಮಹಾರಾಷ್ಟ್ರದ ಪೂನಾದ ಕೋರೆಗಾಂವ್ ಎಂಬ ಗ್ರಾಮದಲ್ಲಿ ನಡೆದ ಯುದ್ಧ. ಅಂಬೇಡ್ಕರ್ ಲಂಡನ್‌ನಲ್ಲಿ ಗ್ರಂಥ ಅಧ್ಯಯನ ಮಾಡಿ, ಸ್ಫೂರ್ತಿಗೊಂಡು 1927ರಲ್ಲಿ ಐತಿಹಾಸಿಕ ಸ್ಥಳಕ್ಕೆ ಭೇಟಿ ನೀಡಿ, ಮರೆಮಾಚಿದ ಇತಿಹಾಸವನ್ನು ಶೋಧಿಸಿ 65 ಅಡಿ ಎತ್ತರದ ಸ್ಮಾರಕಕ್ಕೆ ಗೌರವ ವಂದನೆ ಸಲ್ಲಿಸಿದರು ಎಂದು ತಿಳಿಸಿದರು.

ಬಿಎಸ್‌ಐ ಜಿಲ್ಲಾಧ್ಯಕ್ಷ ಆರ್.ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಸಮತಾ ಸೈನಿಕದಳ ವಿಭಾಗದ ಉಪಾಧ್ಯಕ್ಷ ಮಲ್ಲಿಕ್ ಯಲ್ಲಕ್ಕೂರು ಮಾತನಾಡಿದರು. ಡಾ. ಕೃಷ್ಣಕುಮಾರ್, ಪ್ರವಾಸ ಮತ್ತು ಪ್ರಚಾರ ವಿಭಾಗದ ಉಪಾಧ್ಯಕ್ಷ ಉಮೇಶ್ ಕುದರ್, ಸಿದ್ದರಾಜಪ್ಪ, ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್, ಪ್ರಜಾ ಪರಿವರ್ತನೆ ವೇದಿಕೆ ಅಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ, ಮಹಿಳಾ ವಿಭಾಗದ ಉಪಾಧ್ಯಕ್ಷೆ ನಾಗಶಿಲ್ಪ ಮಾತಾ ರಮಾಬಾಯಿ, ಮಹಿಳಾ ಸಂಘದ ಅಧ್ಯಕ್ಷೆ ಪುಷ್ಪ ಮರಿಸ್ವಾಮಿ, ತಾಲೂಕು ಅಧ್ಯಕ್ಷ ಕೃಷ್ಣಯ್ಯ, ಮುಖಂಡರಾದ ಚೆನ್ನಪ್ಪ ಯ.ಸಿದ್ದರಾಜು, ತಾಲೂಕು ಗೌರವಾಧ್ಯಕ್ಷ ಬಿ.ಎ.ಮಹದೇವಯ್ಯ, ಖಜಾಂಚಿ ಸೋಮಣ್ಣ ಪ್ರಧಾನ ಕಾರ್ಯದರ್ಶಿ ನಂಜುಂಡಯ್ಯ ಹಾಜರಿದ್ದರು.

ಗಾಂಜಾ ಸಾಗಣೆ: ಇಬ್ಬರ ಬಂಧನ

ಕೊಳ್ಳೇಗಾಲ: ಒಣಗಾಂಜಾ ಸಾಗಿಸುತ್ತಿದ್ದ ಇಬ್ಬರನ್ನು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ಜಕ್ಕಳ್ಳಿ ಸಮೀಪದ ಕರಿಯನಕಟ್ಟೆ ಗ್ರಾಮದ ನಂಜ(28) ಹಾಗೂ ಮತ್ತೊಬ್ಬ ನಂಜ (25) ಬಂಧಿತರು. ಇವರಿಂದ ಸುಮಾರು 250 ಗ್ರಾಂ ಒಣ ಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಗಾಂಜಾ ಸಾಗಿಸುತ್ತಿರುವ ಮಾಹಿತಿ ಮೇರೆಗೆ ಗ್ರಾಮಾಂತರ ಪೊಲೀಸ್ ಠಾಣೆ ಎಸ್ಐ ಸುಪ್ರೀತ್ ಹಾಗೂ ಸಿಬ್ಬಂದಿ ಕರಳಕಟ್ಟೆ ಡೈರಿ ಬಳಿ ದಾಳಿ ನಡೆಸಿ ಆರೋಪಿಗಳನ್ನು ವಶಕ್ಕೆ ಪಡೆದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಪೇದೆಗಳಾದ ಹೆಚ್.ಸಿ.ರಂಗಸ್ವಾಮಿ, ವಿಜಯಕುಮಾರ್, ಮನೋಹರ್, ಚಾಲಕ ನಂಜುಂಡಸ್ವಾಮಿ ಭಾಗವಹಿಸಿದ್ದರು.

ಗ್ರಾಪಂ ಅಧ್ಯಕ್ಷರ ಚುನಾವಣೆ ಮುಂದೂಡಿಕೆ

ಚಾಮರಾಜನಗರ: ಯಳಂದೂರು ತಾಲೂಕಿನ ಗುಂಬಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಆಯ್ಕೆಗೆ ಜ.2ರಂದು ನಿಗದಿಯಾಗಿದ್ದ ಚುನಾವಣೆಯನ್ನು ಮುಂದೂಡಲಾಗಿದೆ.

ಗ್ರಾಪಂ ಅಧ್ಯಕ್ಷರ ಚುನಾವಣೆ ಸಂಬಂಧ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಾಗಿರುವುದರಿಂದ ಚುನಾವಣೆಯನ್ನು ಮುಂದೂಡಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾ.ನಗರದ ವೃತ್ತ, ರಸ್ತೆಗೆ ವಿಷ್ಣುವರ್ಧನ್ ಹೆಸರಿಡಿ

ಕನ್ನಡ ನೆಲ, ಜಲ ಸಾಂಸ್ಕೃತಿಕ ವೇದಿಕೆಯಿಂದ ವಿಷ್ಣು ನೆನಪಿನೋತ್ಸವದಲ್ಲಿ ಒತ್ತಾಯ



ಚಾಮರಾಜನಗರದಲ್ಲಿ ನಡೆದ ವಿಷ್ಣು ನೆನಪಿನೋತ್ಸವ ಕಾರ್ಯಕ್ರಮವನ್ನು ನಗರಸಭಾ ಅಧ್ಯಕ್ಷ ಸುರೇಶ್ ಉದ್ಘಾಟಿಸಿದರು.

ಚಾಮರಾಜನಗರ, ಜ.2–ನಗರಸಭೆ ವತಿಯಿಂದ ನಗರದ ಪ್ರಮುಖ ವೃತ್ತ ಹಾಗೂ ರಸ್ತೆಗೆ ಡಾ.ವಿಷ್ಣುವರ್ಧನ್ ಹೆಸರು ನಾಮಕರಣ ಮಾಡಬೇಕು ಎಂದು ಕನ್ನಡ ನೆಲ–ಜಲ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಒತ್ತಾಯಿಸಿದರು.

ನಗರದ ನ್ಯಾಯಾಲಯ ರಸ್ತೆಯ ವಿಹೆಚ್‌ಪಿ ಶಾಲೆ ಸಮೀಪ ಕನ್ನಡ ನೆಲ–ಜಲ ಸಾಂಸ್ಕೃತಿಕ ವೇದಿಕೆ ವತಿಯಿಂದ ನಡೆದ 15ನೇ ವಿಷ್ಣು ನೆನಪಿನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಷುವರ್ಧನ್ ಯಾವುದೇ ಜಾತಿ, ಧರ್ಮವಿಲ್ಲದೆ ಜಾತ್ಯಾತೀತ ನಟರಾಗಿದ್ದರು. ಅವರು ಹೆಚ್ಚು ಮುಸ್ಲಿಂ ಅಭಿಮಾನಿಗಳನ್ನು ಹೊಂದಿದ್ದರು. ಅವರ ಚಿತ್ರಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತವೆ. ಆದ್ದರಿಂದ ನಗರದ ಯಾವುದಾದರೂ ವೃತ್ತ, ರಸ್ತೆಗೆ ವಿಷ್ಣು ಹೆಸರನ್ನು ಕಡ್ಡಾಯವಾಗಿ ಇಡಬೇಕು. ಇಲ್ಲದಿದ್ದರೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಕಳೆದ 14 ವರ್ಷಗಳಿಂದ ನಗರಸಭೆ, ಜಿಲ್ಲಾಡಳಿತಕ್ಕೆ ನಗರದ ವೃತ್ತ ಅಥವಾ ರಸ್ತೆಗೆ ವಿಷ್ಣುವರ್ಧನ್ ಹೆಸರು ನಾಮಕರಣ ಮಾಡುವಂತೆ ಮನವಿ ನೀಡಲಾಗುತ್ತಿದೆ. ಆದರೆ, ಯಾವುದೇ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಗರಸಭಾ ಅಧ್ಯಕ್ಷ ಸುರೇಶ್ ಕಾರ್ಯಕ್ರಮ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ 10 ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಲಾಯಿತು. ತಂಬೂರಿ ಕಲಾವಿದ ದೊಡ್ಡಗವಿ ಬಸಪ್ಪ ಅವರನ್ನು ಸನ್ಮಾನಿಸಲಾಯಿತು. ಚುಡಾ ಅಧ್ಯಕ್ಷ ಮಹಮ್ಮದ್ ಅಜ್ಗರ್, ಯುವ ಪ್ರಶಸ್ತಿ ಪುರಸ್ಕೃತ ಸುರೇಶ್, ಡಾ.ಬಸವರಾಜೇಂದ್ರ, ನಗರಸಭಾ ಉಪಾಧ್ಯಕ್ಷೆ ಮಮತಾ ಬಾಲಸುಬ್ರಹ್ಮಣ್ಯಂ, ಬಿಎಸ್‌ವಿ ಪ್ರತಿಷ್ಠಾನ ವೆಂಕಟನಾಗಪ್ಪಶೆಟ್ಟಿ ಬಾಬು, ಸರ್ಕಾರಿ ವಕೀಲರಾದ ಅರುಣ್ ಕುಮಾರ್, ಹರಿಪ್ರಸಾದ್, ಕನಿಷ್ಠ ವೇತನಾ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಉಮೇಶ್ ಎಸ್‌ಪಿಕೆ, ಆಲೂರು ಮಲ್ಲು, ಜಿ.ಸುರೇಶ್‌ನಾಗ್, ಮಹೇಶ್, ಸಿ.ಡಿ.ಪ್ರಕಾಶ್, ಕೂಸಣ್ಣ, ಪುಟ್ಟುವರ್ಧನ್, ಆನಂದ್ ಭಗೀರಥ, ಶಿವು ಇತರರು ಹಾಜರಿದ್ದರು.

ಗಣೇಶ್ ಹೊಸ ಚಿತ್ರ ರುದ್ರ ಮತ್ತು ಕ್ಷುದ್ರಶಕ್ತಿ ನಡುವಿನ ಸಂಘರ್ಷ 'ಪಿನಾಕ'



ತೆಲುಗಿನ ಪೀಪಲ್ ಮೀಡಿಯಾ ಫ್ಯಾಕ್ಟರಿಯ 49ನೇ ಚಿತ್ರ 'ಪಿನಾಕ'. ಈ ಚಿತ್ರದಲ್ಲಿ ಗೋಲ್ಡನ್‌ಸ್ಟಾರ್ ಗಣೇಶ್ ಅವರು ನಾಯಕನಾಗಿ ನಟಿಸುತ್ತಿದ್ದು, ನೃತ್ಯ ನಿರ್ದೇಶಕ ಧನಂಜಯ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಹೊಸ ವರ್ಷದ ಎರಡನೇ ದಿನವೇ ಈ ಚಿತ್ರದ ಶೀರ್ಷಿಕೆಯ ಜೊತೆಗೆ ಟೀಸರ್ ಸಹ ಬಿಡುಗಡೆಯಾಗಿದೆ. ಇದೊಂದು ಸಾಹಸಮಯ ಥ್ರಿಲ್ಲರ್ ಕಥೆಯಾಗಿದ್ದು, ಸಾಕಷ್ಟು ಕಾಮಿಡಿಯೂ ಇದೆ. ಮೇಲ್ನೋಟಕ್ಕೆ ನನ್ನದು ಅಘೋರಿಯ ಪಾತ್ರ ಎನಿಸಬಹುದು. ಆದರೆ, ಅದನ್ನು ಬಿಟ್ಟು ಬೇರೆನೋ ಆಗಿರುತ್ತದೆ ಎಂದು ನಟ ಗಣೇಶ್ ಟೀಸರ್ ಬಿಡುಗಡೆ ನಂತರ ತನ್ನ ಪಾತ್ರದ ಕುರಿತು ಹೇಳಿದರು.

ರುದ್ರ ಮತ್ತು ಕ್ಷುದ್ರದ ನಡುವಿನ ಸಂಘರ್ಷದ ಕಥೆಯಿದು ಎನ್ನುವ ಗಣೇಶ್, ಪ್ರತಿಯೊಬ್ಬರಲ್ಲಿ ಈ ಎರಡೂ ಶಕ್ತಿಗಳಿರುತ್ತವೆ. ಅವುಗಳನ್ನೇ ಚಿತ್ರದಲ್ಲಿ ಹೇಳಿದ್ದೇವೆ. ಈ ಕಥೆ ಪುರಾಣ ಮತ್ತು ಇತಿಹಾಸದ ಮಿಶ್ರಣ. ಹಲವು ಕಥೆಗಳು ಪುರಾಣದಿಂದ ಬಂದಿದ್ದು ಎಂದುಕೊಂಡರೂ, ಅದಕ್ಕೊಂದು ಐತಿಹಾಸಿಕ ಮಹತ್ವವಿರುತ್ತದೆ. ಒಂದು ಪ್ರಯೋಗಾತ್ಮಕ ಚಿತ್ರ ಮಾಡಬೇಕು ಎಂಬ ಆಸೆ ನನಗೆ ಮೊದಲಿಂದಲೂ ಇತ್ತು. ಆದರೆ ಈ ಥರದ ಕಥೆಗಳನ್ನು ಯಾರೂ ತಂದಿರಲಿಲ್ಲ. ಕಥೆಯ ಜೊತೆಗೆ ಇಂಥ ಪ್ರಯೋಗ ಮಾಡುವವರು ಬೇಕು. ಈ ಚಿತ್ರದಲ್ಲಿ ಅಂಥದ್ದೊಂದು ಕಥೆ ಮತ್ತು ಪ್ರಯೋಗ ಇದೆ. ಮುಂಗಾರು ಮಳೆಯಿಂದ ಇಲ್ಲಿವರೆಗೆ ಮಾಡಿದ ಪಾತ್ರಗಳ ಬಗ್ಗೆ ಖುಷಿ ಇದೆಯಾದರೂ, ಇದು ಬೇರೆ ಆಯಾಮದ ಪಾತ್ರ, 500 ವರ್ಷಗಳ ಹಿಂದೆ ಪ್ರಾರಂಭವಾಗುವ ಕಥೆ, ಈಗಿನ 2025ವರೆಗೂ ಮುಂದುವರೆಯುತ್ತದೆ ಎಂದರು.

ನಿರ್ಮಾಪಕ ವಿಶ್ವಪ್ರಸಾದ್ ಮಾತನಾಡಿ, ಅತೀಂದ್ರೀಯ ಶಕ್ತಿ ಮತ್ತು ಆಧ್ಯಾತ್ಮವನ್ನು ಸೇರಿಸಿ ಮಾಡಿರುವ ಕಥೆಯಿದು ಎಂದರು. ನಿರ್ದೇಶಕ ಧನಂಜಯ್ ಮಾತನಾಡಿ, ಗಣೇಶ್ ಅವರ ಹುಡುಗಾಟ, ಗಂಭೀರದ ಎರಡೂ ಮುಖಗಳನ್ನು ಈ ಚಿತ್ರದಲ್ಲಿ ತೋರಿಸಲು ಪ್ರಯತ್ನಿಸಿದ್ದೇವೆ, ಅವರಿಗೆ ಯಾವ ಪಾತ್ರಕ್ಕೆ ಬೇಕಾದರೂ ಜೀವ ತುಂಬುವ ಶಕ್ತಿ ಇದೆ. ಚಿತ್ರದಲ್ಲಿ ಮನರಂಜನೆಯ ಜೊತೆಗೆ ಸೆಂಟಿಮೆಂಟ್, ಮೌಲ್ಯ, ನಗು ಎಲ್ಲವೂ ಇದೆ ಎಂದರು.

ಪೀಪಲ್ ಮೀಡಿಯಾ ಫ್ಯಾಕ್ಟರಿ ತೆಲುಗಿನಲ್ಲಿ ಕಾರ್ತಿಕೇಯ 2, ವೆಂಕಿ ಮಾಮಾ, ಓ ಬೇಬಿ, ಧಮಾಕಾದಂಥ ಯಶಸ್ವಿ ಚಿತ್ರಗಳನ್ನು ನಿರ್ಮಿಸಿದೆ. ಈಗ ಕನ್ನಡಕ್ಕೆ ಕಾಲಿಟ್ಟಿದ್ದು, ಶ್ರೀಮುರಳಿ, ಶಿವರಾಜಕುಮಾರ್ ಮತ್ತು ಧ್ರುವ ಸರ್ಜಾ ಅಭಿನಯದ ಚಿತ್ರಗಳನ್ನು ಸಹ ನಿರ್ಮಿಸುತ್ತಿದೆ.

ಭೂಗತಲೋಕದಲ್ಲಿ ಅರಳಿದ ಪ್ರೇಮಕಥೆ ಇಂದಿನಿಂದ 'ಗನ್ಸ್ ಅಂಡ್ ರೋಸಸ್'



ಕನ್ನಡ ಚಿತ್ರರಂಗದ ಹಿರಿಯ ಸಾಹಿತಿ ಅಜಯ್‌ಕುಮಾರ್ ಅವರ ಪುತ್ರ ಅರ್ಜುನ್ ಈ ವಾರ ತೆರೆಕಾಣುತ್ತಿರುವ ಗನ್ಸ್ ಅಂಡ್ ರೋಸಸ್ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗಕ್ಕೆ ಪ್ರವೇಶಿಸಿದ್ದಾರೆ. ಹೆಚ್. ಆರ್. ನಟರಾಜ್ ಅವರ ನಿರ್ಮಾಣದ ಈ ಚಿತ್ರಕ್ಕೆ ಶ್ರೀನಿವಾಸ್ ಕುಮಾರ್ ಆಕ್ಷನ್ ಕಟ್ ಹೇಳಿದ್ದಾರೆ. ಇತ್ತೀಚೆಗೆ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ನಿರ್ಮಾಪಕರು, ಚಿತ್ರರಂಗ ನನಗೆ ಹೊಸದು. ನಿರ್ದೇಶಕ ಶ್ರೀನಿವಾಸಮೂರ್ತಿ ನನ್ನ ಸ್ನೇಹಿತರು. ಅವರು ನನಗೆ ಈ ಥರ ಕಥೆ ಇದೆ ಎಂದು ಒಂದು ಲೈನ್ ಹೇಳಿದಾಗ ನನಗೆ ತುಂಬಾ ಇಷ್ಟವಾಯಿತು. ನಂತರ ಅರ್ಜುನ್‌ರ ಫೋಟೋ ತೋರಿಸಿ ಈ ಹುಡುಗನನ್ನು ನಾಯಕನನ್ನಾಗಿ ಹಾಕಿಕೊಳ್ಳೋಣ ಎಂದರು. ಹೀಗೆ ಪ್ರಾರಂಭವಾದ ಚಿತ್ರವೀಗ ರಿಲೀಸಾಗುತ್ತಿದೆ, ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದು ಹೇಳಿದರು. ನಿರ್ದೇಶಕ ಶ್ರೀನಿವಾಸ್‌ಕುಮಾರ್ ಮಾತನಾಡುತ್ತ, ಕಳೆದ 25 ವರ್ಷಗಳಿಂದ ಸಾಕಷ್ಟು ಚಿತ್ರಗಳಿಗೆ ಸಹನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಈ ಚಿತ್ರವನ್ನು ಒಂದು ಲೈನ್‌ನಲ್ಲಿ ಹೇಳಬೇಕೆಂದರೆ ಭೂಗತ ಜಗತ್ತಿನಲ್ಲಿ ಅರಳಿದ ಪ್ರೇಮಕಥೆ ಎನ್ನಬಹುದು. ಅದೇ ಕಾರಣಕ್ಕೆ ಗನ್ಸ್ ಅಂಡ್ ರೋಸಸ್ ಎಂಬ ಟೈಟಲ್ ಇಟ್ಟಿದ್ದೇವೆ. ನಮ್ಮ ಸುತ್ತಮುತ್ತ ನಡೆಯುತ್ತಿರುವ ಡ್ರಗ್ಸ್ ಮಾಫಿಯಾ, ಅದಕ್ಕೆ ಅಂಡರ್‌ವರ್ಲ್ಡ್ ಹೇಗೆ ಲಿಂಕಾಗುತ್ತದೆ, ಈ ಮಧ್ಯೆ ರೌಡಿಯೊಬ್ಬನ ಪ್ರೇಮಕಥೆ ಹೇಗೆ ಸಾಗುತ್ತದೆ, ಕೊನೆಗೇನಾಯಿತು ಎಂಬುದನ್ನು ಈ ಚಿತ್ರದ ಮೂಲಕ ಹೇಳಲು ಪ್ರಯತ್ನಿಸಿದ್ದೇವೆ ಎಂದು ಹೇಳಿದರು.

ಸಾಹಿತಿ ಅಜಯ್‌ಕುಮಾರ್ ಮಾತನಾಡುತ್ತ, ನಾನು ಚಿತ್ರರಂಗಕ್ಕೆ ಬಂದು ನಲವತ್ತು ವರ್ಷಗಳಾಯಿತು. ಈಗ ನನ್ನ ಮಗ ನಾಯಕನಾಗಿ ಚಿತ್ರರಂಗಕ್ಕೆ ಬರುತ್ತಿದ್ದಾನೆ. ನಿಮ್ಮೆಲ್ಲರ ಪ್ರೋತ್ಸಾಹ ಅವನಿಗಿರಲಿ ಎಂದರು.

ನಂತರ ಚಿತ್ರದ ನಾಯಕ ಅರ್ಜುನ್, ನಾಯಕಿ ಯಶ್ವಿಕ ನಿಷ್ಕಲ, ನೀನಾಸಂ ಅಶ್ವಥ್, ಜೀವನ್ ರಿಚಿ, ಸಂಗೀತ ನಿರ್ದೇಶಕ ಶಶಿಕುಮಾರ್, ಛಾಯಾಗ್ರಾಹಕ ಜನಾರ್ದನ್ ಬಾಬು ಮುಂತಾದವರು ಚಿತ್ರದ ಕುರಿತಂತೆ ಮಾತನಾಡಿದರು. ಎಂಭತ್ತಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಗನ್ಸ್ ಅಂಡ್ ರೋಸಸ್ ಚಿತ್ರವನ್ನು ಬಿಡುಗಡೆ ಮಾಡುವುದಾಗಿ ವಿತರಕ ಗೋಕುಲ್‌ರಾಜ್ ಹೇಳಿದರು. ಸಂಜೀವ್ ರೆಡ್ಡಿ ಅವರ ಸಂಕಲನ ಹಾಗೂ ಥ್ರಿಲ್ಲರ್ ಮಂಜು ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದ್ದು, ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನು ಶರತ್ ಬರೆದಿದ್ದಾರೆ.

ಕೆಡಿ 'ಶಿವ ಶಿವ' ಲಿರಿಕಲ್ ಹಾಡು



ಜೋಗಿ ಪ್ರೇಮ್ ನಿರ್ದೇಶನ ಹಾಗೂ ಧ್ರುವ ಸರ್ಜಾ ಅಭಿನಯದ ಪ್ಯಾನ್ ಇಂಡಿಯಾ ಚಿತ್ರ ಕೆಡಿ ಈಗ ತನ್ನ ಹಾಡಿನ ಮೂಲಕವೇ ಸದ್ದು ಮಾಡುತ್ತಿದೆ. ಜನಪದ ಶೈಲಿಯಲ್ಲಿ ಮೂಡಿಬಂದಿರುವ ಶಿವ ಶಿವ ಎಂಬ ಲಿರಿಕಲ್ ಹಾಡನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಯಿತು. ನಿರ್ದೇಶಕ ಪ್ರೇಮ್ ಹಾಗೂ ಕೈಲಾಶ್‌ಖೇರ್ ಈ ಹಾಡಿಗೆ ದನಿಯಾಗಿದ್ದು, ಕನ್ನಡ, ಹಿಂದಿ, ತೆಲುಗು, ತಮಿಳು, ಮಲಯಾಳಂ ಭಾಷೆಗಳಲ್ಲಿ ಅಲ್ಲಿನ ಗಾಯಕರೇ ಹಾಡಿದ್ದಾರೆ.


ಪ್ರೇಮ್ ನಿರ್ದೇಶನದ ಚಿತ್ರ ಎಂದರೆ ಅಲ್ಲಿ ಹಾಡುಗಳೆ ಹೈಲೈಟ್. ಅದೇ ರೀತಿ ಈ ಚಿತ್ರದಲ್ಲೂ ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಶಿವ ಶಿವ ಹಾಡಲ್ಲಿ ಶಿವನ ವೈಭವೀಕರಣವನ್ನು ಗ್ರಾಫಿಕ್ ಮೂಲಕ ಅದ್ಭುತವಾಗಿ ಕಟ್ಟಿಕೊಡಲಾಗಿದೆ. ಹಾಡುಗಳು ಒಂದು ಚಿತ್ರದ ಇನ್‌ವಿಟೇಶನ್ ಇದ್ದಹಾಗೆ, ಶಿವ ಶಿವ ಹಾಡಿನ ಅದ್ಭುತ ವಿಶ್ಯುಯೆಲ್ಸ್, ಮೇಕಿಂಗ್, ಕಿವಿಗಪ್ಪಳಿಸುವ ಹಾಡಿನ ಟ್ಯೂನ್ ಸಂಗೀತ ಪ್ರಿಯರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಕೆಡಿ ಅಂದ್ರೆ ಕಾಳಿದಾಸ, 70ರ ದಶಕದ ಜನಪದ ಹಾಡಿನ ಸಾಲನ್ನಿಟ್ಟುಕೊಂಡು ಮಾಡಿದ ಸಾಂಗಿದು. 1970ರ ಕಾಲಮಾನವನ್ನು ತೋರಿಸೋದು ಅಷ್ಟು ಸುಲಭವಲ್ಲ, ಆಗಿನ ಬೆಂಗಳೂರಿನ ಸೆಟ್‌ನ್ನು ಮೋಹನ್ ಬಿ.ಕೆರೆ ಅವರು ನಿರ್ಮಿಸಿದ್ದರು. ಚಿತ್ರದಲ್ಲಿ 6 ಹಾಡುಗಳಿದ್ದು, ಮುಂದೆ ಬರೋ ಹಾಡುಗಳೆಲ್ಲಾ ಯೂನಿಕ್ ಆಗಿರುತ್ತವೆ. ನಾಯಕ ಧ್ರುವ ಅದ್ಭುತ ಕಲಾವಿದ, ಕಾಳಿದಾಸ ಎಷ್ಟು ಇನ್ನೋಸೆಂಟೋ, ಅಷ್ಟೇ ರಾ ಆಗಿರುತ್ತಾನೆ, ಆ ಪಾತ್ರವನ್ನು ಧ್ರುವ ನೈಜವಾಗಿ ಮಾಡಿದ್ದಾರೆ. ಈತನನ್ನು ಶಿವಣ್ಣ, ಅಪ್ಪು ಸರ್‌ಗೆ ಹೋಲಿಸುತ್ತೇನೆ, ಏಕೆಂದರೆ ಅವರಷ್ಟು ಎನರ್ಜಿ ಈತನಲ್ಲಿದೆ, ಚಲಿಸುವ ಕಾರ್ ಮೇಲೆ ಡ್ಯಾನ್ಸ್ ಮಾಡಿದ್ದಾನೆ. ಮುಂಬೈನಲ್ಲಿ ಈ ಚಿತ್ರದ ಟೀಸರ್ ಲಾಂಚ್ ಮಾಡಲಿದ್ದೇವೆ ಎಂದು ಹೇಳಿದರು.

ನಾಯಕ ಧ್ರುವ ಮಾತನಾಡಿ, ಹಾಡು ಇಷ್ಟು ಚೆನ್ನಾಗಿ ಬರಲು ಕಾರಣ ಪ್ರೇಮ್, ಅರ್ಜುನ್ ಜನ್ಯ ಕಂಪೋಜ್ ಮಾಡಿರುವ ಮ್ಯೂಸಿಕ್ ತುಂಬಾ ಚೆನ್ನಾಗಿತ್ತು ಎಂದು ಹೇಳಿದ್ದರು. ನಿರ್ಮಾಪಕ ಸುಪ್ರೀತ್ ಮಾತನಾಡುತ್ತ, ಕೆಡಿ ಚಿತ್ರದಲ್ಲಿ ಆಡಿಯೋ ಮುಖ್ಯ ಪಾತ್ರ ವಹಿಸುತ್ತದೆ. ಚಿತ್ರಕ್ಕಾಗಿ ಪ್ರತಿಯೊಬ್ಬರೂ ತುಂಬಾ ಶ್ರಮ ಹಾಕಿದ್ದಾರೆ ಎಂದರು. ನಂತರ ಅರ್ಜುನ್ ಜನ್ಯ ಮಾತನಾಡಿ, ಕೆ.ಡಿ. ಚಿತ್ರದ ಮ್ಯೂಸಿಕ್‌ಗೆ ಹಾಕಿದ ಹಣದಲ್ಲಿ ಒಂದು ದೊಡ್ಡ ಸಿನಿಮಾನೇ ಮಾಡಬಹುದಿತ್ತು. ಕೊರೊನಾ ಸಮಯದಲ್ಲಿ ನಮ್ಮಣ್ಣನ್ನ ಕಳೆದುಕೊಂಡೆ, ಆದರೆ ಪ್ರೇಮ್ ಆ ಜಾಗವನ್ನು ತುಂಬಿದ್ದಾರೆ. ಈ ಚಿತ್ರಕ್ಕಾಗಿ ಯೂರೋಪ್‌ನಲ್ಲಿ 264 ಪೀಸ್ ಆರ್ಕೆಸ್ಟ್ರಾ ಮಾಡಿಸಿದ್ದಾರೆ ಎಂದು ಹಾಡುಗಳ ಬಗ್ಗೆ ವಿವರಿಸಿದರು.

ಸಿನಿಪದಬಂಧ-558



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ರಘುವೀರ್ ಅಭಿನಯದಲ್ಲಿ ಆಗಸಕ್ಕೆ ತುಟಿಯ ಸ್ಪರ್ಶವಿದೆ	6
5.ನಾಗರ ಹಾವು ಚಿತ್ರದ "ವಿಷ್ಣುವರ್ಧನ್"	4
7.ಲೂಸ್ ಮಾದನಿಗೆ ನೆಲೆ ಇಲ್ಲ	4
8.ಮಾಲಾಶ್ರೀಗೆ ಶಶಿಕುಮಾರ್ ನಿಜ ಪತಿಯೇ!	6
11.ಸುನಿಲ್‌ಕುಮಾರ್ ದೇಸಾಯಿ ನಿರ್ದೇಶನದ ಸಸ್ಪೆನ್ಸ್ ಚಿತ್ರವಿದು	2
12.ಮಾಲಾಶ್ರೀ _ _ _	3
14.ಹಾಸ್ಯಕ್ಕಾಗಿ ಮಾಡಿದ ನಕಲು!	3
17.ಶರಣ್ ಅರಸನಾಗಿ ಮೆರೆದಿದ್ದಾನೆ	5
18.ನವರಸ ನಾಯಕ ಜಗ್ಗೇಶ್ "ಮದನ"	3
19.ರಂಜಿತಾ ಚಿತ್ರದ ನಾಯಕ	4

ಮೇಲಿನಿಂದ ಕೆಳಕ್ಕೆ

2.ಅಂಬರೀಷ್‌ನ ಬೆಟ್ಟದ ಹೆಣ್ಣು	4
3.ಕುಮಾರ್ ಬಂಗಾರಪ್ಪ ನ್ಯೂ ಸ್ಟಾರ್	4
4.ಸಿಪಾಯಿ ಚಿತ್ರದ ಹಾಡಿನಲ್ಲಿ ಬಂದ ಮೋಡದರಸ ಇಲ್ಲಿ ತಲೆ ಕೆಳಗು	4
6.ವೈ.ಆರ್.ಸ್ವಾಮಿ ನಿರ್ದೇಶನದಲ್ಲಿ ಬುದ್ಧಿವಂತ ಎಡವಿದ್ದಾನೆ	6
7."ಹಿಂದುಸ್ತಾನವು ಎಂದು ಮರೆಯದ ಭಾರತ ರತ್ನವು.... ", ಗೀತೆಯ ಚಿತ್ರ	6
9.ಕಿತ್ತೂರು ಚೆನ್ನಮ್ಮ ಚಿತ್ರದ ದೇಶದ್ರೋಹಿ ಪಾತ್ರ ನಿರ್ವಹಿಸಿದ ನಟ	7
10.ಶಶಿಕುಮಾರ್ ದೇವಲೋಕದ ಗಾಯಕ	3
13.ಹಾಲುಂಡ ತವರು ಚಿತ್ರದ ನಾಯಕಿ	3
14.ಮಹಾರಥನೊಂದಿಗೆ ಬಂದವನು	4
15.ಜಗ್ಗೇಶ್ ಅಷ್ಟ ದಿಕ್ಪಾಲಕರಲ್ಲಿದ್ದಾನೆ	3
16.ಅಂಬರೀಷ್ - ದೀಪಿಕಾ ಅಭಿನಯದ ಚಿತ್ರ	4

ಸಿನಿ ಪದಬಂಧ 557ರ ಉತ್ತರ

ಆ	ನಂ	ದ	ಸಾ	ಗ	ರ		ಆ			
	ದಾ				ವಿ		ಕ್ರ	ಚ	ಲ	ಕಾ
	ದೀ		ಮೋ		ಮಾ		ಮ			
ಅ	ಪ	ರಂ	ಜಿ		ಮ	ಸ	ಣ	ದ	ಹೂ	ವು
ಳಿ			ನ			ತ್ಯಂ			ಮ	
ಯ	ಮ		ಮ		ಶಿ	ಶಿ	ರ		ಳೆ	
ಗೆ			ದು			ವಂ		ಭೈ		
ಳೆ		ದು	ವೆ	ಮ		ಸುಂ		ರ		ಸ
ಯ		ರ್ಗಾ		ಯೂ		ದ	ಶಾ	ವ	ತಾ	ರ
		ಷ್ಟ		ರ		ರಂ				ಸ್ವ
ಗೌ	ತ	ಮಿ					ತಿ	ರು	ಪ	ತಿ

ವಿಜೇತರು: ಕೆಂಪರಾಜು, S/o ಲೇಟ್ ಚಿಕ್ಕಯ್ಯ, ಹೊಂಗನೂರು ಗ್ರಾಮ ಮತ್ತು ಅಂಚೆ, ಚಾಮರಾಜನಗರ ತಾಲೂಕು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಪಾಕಶಾಲಾ ಪ್ರವೀಣರಿಂದ 'ಪಾಠಶಾಲಾ' ಟೀಸರ್ ಬಿಡುಗಡೆ



ಕೆಲ ವರ್ಷಗಳ ಹಿಂದೆ "ಗ್ಯಾಪಲ್ಲೊಂದು ಸಿನಿಮಾ" ಮಾಡಿ ನಂತರ "ಓಮಿನಿ" ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದ ಹೆದ್ದೂರ್ ಮಂಜುನಾಥ್ ಶೆಟ್ಟಿ ಈಗ "ಪಾಠಶಾಲಾ" ಚಿತ್ರವನ್ನು ನಿರ್ದೇಶಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರನ್ನು ಒಗ್ಗರಣೆ ಡಬ್ಬಿ ಖ್ಯಾತಿಯ ಸಿಹಿಕಹಿ ಚಂದ್ರು ಹಾಗೂ ಗೀತಾ ದಂಪತಿ ಬಿಡುಗಡೆ ಮಾಡಿ ತಂಡಕ್ಕೆ ಶುಭ ಕೋರಿದರು. ಮಾಜಿ ಶಾಸಕ ನೆ.ಲ.ನರೇಂದ್ರಬಾಬು, ಹೆಚ್.ಎಸ್.ರಾಘವೇಂದ್ರ ಶೆಟ್ಟಿ, ಸಂತೋಷ್ ಕುಮಾರ್ ಶೆಟ್ಟಿ, ವಿಜಯ್‌ಶೆಟ್ಟಿ, ನಟ ಗೌರಿಶಂಕರ್, ರವೀಂದ್ರ ಸಿಂಗ್ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಚಿತ್ರದ ಕುರಿತಂತೆ ಮಾತನಾಡಿದ ನಿರ್ದೇಶಕ ಮಂಜುನಾಥ್, "ಪಾಠಶಾಲಾ" ನನ್ನ ನಿರ್ದೇಶನದ ಮೂರನೇ ಚಿತ್ರ. 15 ವರ್ಷಗಳ ಹಿಂದೆ ಮಲೆನಾಡಿನಿಂದ ಬೆಂಗಳೂರಿಗೆ ನಿರ್ದೇಶಕನಾಗಬೇಕೆಂಬ ಕನಸಿಟ್ಟುಕೊಂಡು ಬಂದೆ. ಕಿರುತೆರೆಯಲ್ಲಿ ಸುಧಾಕರ ಬನ್ನಂಜೆ, ಸಿಹಿಕಹಿ ಚಂದ್ರು ಅಲ್ಲದೆ ರವಿಚಂದ್ರನ್ ಸೇರಿದಂತೆ ಅನೇಕ ನಿರ್ದೇಶಕರ ಬಳಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದೆ. ಪಾರ್ವತಿ ಪರಮೇಶ್ವರದಲ್ಲಿ ನಾನು ಮಾಡಿದ ತುತ್ತೂರಿ ಪಾತ್ರ ನನಗೆ ದೊಡ್ಡ ಹೆಸರನ್ನು ತಂದುಕೊಟ್ಟಿತ್ತು. ಈಗ ಎಂ.ಎಸ್. ಸ್ಕ್ವೇರ್ ಮೂವೀಸ್ ಮೂಲಕ ನಾನು ಹಾಗೂ ನನ್ನ ಪತ್ನಿ ಸೇರಿ ಈ ಚಿತ್ರವನ್ನು ನಿರ್ಮಿಸಿದ್ದೇವೆ. ಹತ್ತಕ್ಕೂ ಹೆಚ್ಚು ಸ್ನೇಹಿತರು ನಮ್ಮ ಜೊತೆ ಕೈಜೋಡಿಸಿದ್ದಾರೆ. ತೊಂಭತ್ತರ ದಶಕದಲ್ಲಿ ಪಾಠಶಾಲೆಗಳು ಹೇಗಿರುತ್ತಿದ್ದವು, ಅಲ್ಲಿ ಗುರುಗಳು ಹಾಗೂ ಮಕ್ಕಳ ನಡುವಿನ ಸಂಬಂಧ ಹೇಗಿರುತ್ತಿತ್ತು ಎಂಬುದನ್ನು ಪಾಠಶಾಲಾ ಚಿತ್ರದ ಮೂಲಕ ಹೇಳೋ ಪ್ರಯತ್ನ ಮಾಡಿದ್ದೇವೆ, 80– 90ರ ಕಾಲಘಟ್ಟದಲ್ಲಿ ಶಿಕ್ಷಕರ ಹಾಗೂ ಮಕ್ಕಳ ನಡುವೆ ಇದ್ದ ಸಂಬಂಧ, ಆ ಮಕ್ಕಳು ಗುರುಗಳಿಗೆ ಯಾವ ರೀತಿ ಗೌರವ ಕೊಡುತ್ತಿದ್ದರು ಎಂಬ ವಿಷಯದ ಮೇಲೆ ಚಿತ್ರಕಥೆ ಸಾಗುತ್ತದೆ, ತೀರ್ಥಹಳ್ಳಿ ಸುತ್ತಮುತ್ತಲ ಭಾಗದ ನಲವತ್ತಕ್ಕೂ ಅಧಿಕ ಮಕ್ಕಳು ಪಾಠಶಾಲಾ ಚಿತ್ರದಲ್ಲಿ ನಟಿಸಿದ್ದಾರೆ. ಆ ಎಲ್ಲ ಮಕ್ಕಳಿಗೆ ತರಬೇತಿ ನೀಡಿ, ನಂತರ ಚಿತ್ರೀಕರಣ ನಡೆಸಬೇಕಾಯಿತು, ಈಗಾಗಲೇ ಚಿತ್ರದ ಬಹುತೇಕ ಚಿತ್ರೀಕರಣ ಪೂರ್ಣಗೊಂಡಿದ್ದು, ಡಬ್ಬಿಂಗ್ ಕೂಡ ಮುಕ್ತಾಯ ಹಂತದಲ್ಲಿದೆ.. ಬೇಸಿಗೆ ರಜೆಗೂ ಮುನ್ನ ಪಾಠಶಾಲಾ ಚಿತ್ರವನ್ನು ತೆರೆಗೆ ತರುವ ಯೋಚನೆ ನಮಗಿದೆ ಎಂದು ಮಾಹಿತಿ ನೀಡಿದರು. ಹಿರಿಯ ಕಲಾವಿದರಾದ ಬಾಲಾಜಿ ಮನೋಹರ್, ಸುಧಾಕರ ಬನ್ನಂಜೆ, ಕಿರಣ್‌ನಾಯಕ್, ನಟನ ಪ್ರಶಾಂತ್ ಮುಂತಾದವರು "ಪಾಠಶಾಲಾ" ಚಿತ್ರದಲ್ಲಿ ಅಭಿನಯಿಸಿದ್ದಾರೆ ಈ ಚಿತ್ರಕ್ಕೆ ಓದು ಅಥವಾ ಓಡೋಗು ಎಂಬ ಅಡಿಬರಹವಿದೆ

ಭತ್ತ ಖರೀದಿ ಕೇಂದ್ರ ತೆರೆಯಲು ಆಗ್ರಹಿಸಿ ಪ್ರತಿಭಟನೆ



ಭತ್ತ ಖರೀದಿ ಕೇಂದ್ರ ತೆರೆಯುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಬನ್ನೂರು, ಜ.2– ಇಲ್ಲಿನ ಸಂತೆಮಾಳದಲ್ಲಿ ಭತ್ತ ಖರೀದಿ ಕೇಂದ್ರ ತೆರೆಯುವಂತೆ ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಮೈಸೂರು–ಮಳವಳ್ಳಿ ಮುಖ್ಯ ರಸ್ತೆಯಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರಸ್ತೆ ತಡೆದು, ರಸ್ತೆಗೆ ಭತ್ತ ಸುರಿದು ಪ್ರತಿಭಟನೆ ನಡೆಸಿ ಭತ್ತ ಖರೀದಿ ಕೇಂದ್ರ ತೆರೆಯುವಂತೆ ಸರ್ಕಾರವನ್ನು ಒತ್ತಾಯಿಸಿದರು. ರಸ್ತೆ ತಡೆ ನಡೆಸಿದ್ದರಿಂದ ಮೈಸೂರು–ಮಳವಳ್ಳಿ ರಸ್ತೆಯಲ್ಲಿ 1 ಕಿಮೀ ವರೆಗೆ ವಾಹನಗಳು ನಿಂತು ಸವಾರರು ಪರದಾಡುವಂತಾಗಿತ್ತು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ದೇವರಾಜು ಮಾತನಾಡಿ, ಇಲ್ಲಿನ ಸಂತೆಮಾಳದಲ್ಲಿ ಸರ್ಕಾರ ಭತ್ತ ಖರೀದಿ ಕೇಂದ್ರ ತೆರೆದು ಭತ್ತ ಖರೀದಿ ಮಾಡಬೇಕು. ಅಲ್ಲದೇ ಖರೀದಿ ಮಾಡಿದ ಭತ್ತದ ಹಣವನ್ನು ಸಂಜೆ ವೇಳೆಗೆ ರೈತರ ಖಾತೆಗೆ ಜಮಾ ಮಾಡಬೇಕು. ಇದು ಸಾಧ್ಯವಾಗದಿದ್ದರೇ ರೈತರಿಗೆ ನಷ್ಟ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಸರ್ಕಾರ ಭತ್ತ ಖರೀದಿ ಕೇಂದ್ರ ತೆರೆಯದೆ ಕೇವಲ ನೋಂದಣಿ ಪ್ರಕ್ರಿಯೆಯಲ್ಲಿ ಕಾಲಹರಣ ಮಾಡುತ್ತಿದೆ. ಇದರಿಂದ ಬಂಡವಾಳ ಶಾಹಿಗಳು, ರೈಸ್‌ಮಿಲ್ ಮಾಲೀಕರು ಹಾಗೂ ಮಧ್ಯವರ್ತಿಗಳು ಇದರ ಲಾಭ ಪಡೆಯುತ್ತಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದರು.

ಭತ್ತ, ರಾಗಿ ಕಟಾವು ಆರಂಭವಾಗಿ ತಿಂಗಳುಗಳೇ ಕಳೆದಿವೆ. ಸರ್ಕಾರ ಖರೀದಿ ಕೇಂದ್ರ ತೆರೆಯದ ಹಿನ್ನೆಲೆಯಲ್ಲಿ ಇದರ ಸದುಪಯೋಗ ಪಡೆಯುತ್ತಿರುವ ಮಧ್ಯವರ್ತಿಗಳು ಭತ್ತವನ್ನು ರೈತರ ಕಣದಲ್ಲಿಯೇ 2 ಸಾವಿರದಿಂದ 2100 ರೂ.ಗಳಿಗೆ ಖರೀದಿಸುತ್ತಿದ್ದಾರೆ ಎಂದು ಆರೋಪಿಸಿದ ಅವರು ಸರ್ಕಾರದ ಬೆಂಬಲ ಬೆಲೆ 2320 ಇದ್ದು, ಕೂಡಲೇ ಖರೀದಿ ಕೇಂದ್ರ ತೆರೆದು ರೈತರ ಭತ್ತ ಖರೀದಿ ಮಾಡಿ, ರೈತರ ಸಂಕಷ್ಟ ಪರಿಹರಿಸಿ ಎಂದು ಮನವಿ ಮಾಡಿದರು.

ರೈತ ತಾನು ಬೆಳೆದ ಭತ್ತಕ್ಕೆ ಬೆಂಬಲ ಬೆಲೆ ಸಿಗದೆ ಸಂಕಷ್ಟಕ್ಕೆ ಸಿಲುಕಿದ್ದು, ವ್ಯವಸಾಯಕ್ಕೆ ಮಾಡಿದ ಸಾಲ ತೀರಿಸಲಾಗದೇ ಆತ್ಮಹತ್ಯೆಯ ಹಾದಿ ಹಿಡಿಯುವಂತಾಗಿದೆ. ಇದಕ್ಕೆಲ್ಲಾ ಕಠಿಣ ಕಾನೂನು ಇಲ್ಲದಿರುವುದೇ ಕಾರಣವಾಗಿದೆ. ಅಲ್ಲದೇ ಜನಪ್ರತಿನಿಧಿಗಳು ಸಹ ಕಂಡು ಕಾಣದಂತೆ ಜಾಣ ಕುರುಡರಂತೆ ವರ್ತಿಸುತ್ತಿರುವುದು ಸರಿಯಲ್ಲ. ಕನಿಷ್ಠ ಬೆಲೆಗೆ ರೈತರ ಭತ್ತ ಖರೀದಿಸಿರುವ ರೈಸ್ ಮಿಲ್ ಹಾಗೂ ಬಂಡವಾಳಶಾಹಿಗಳ ವಿರುದ್ಧ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಆ ಮೂಲಕ ರೈತರ ಬೆಳೆಗೆ ಬೆಂಬಲ ಸಿಗುವಂತೆ ಮಾಡಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಸ್ಥಳಕ್ಕೆ ಆಗಮಿಸಿದ ಉಪ ತಹಸೀಲ್ದಾರ್ ರೂಪಾ ಅವರಿಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿ ಪ್ರತಿಭಟನೆ ಹಿಂಪಡೆದರು. ವೃತ್ತ ನಿರೀಕ್ಷಕ ಮನೋಜ್ ಕುಮಾರ್ ಹಾಗೂ ಸಿಬ್ಬಂದಿ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. ಪ್ರತಿಭಟನೆಯಲ್ಲಿ ನಾಗರಾಜು, ನೀಲ ಕಂಠಪ್ಪ, ಸೂರಿ, ಶಂಕರ್, ರವಿ, ಸಿದ್ದೇಶ್, ಪ್ರದೀಪ್, ಲೋಕೇಶ್, ಕುಳ್ಳೇಗೌಡ, ಸ್ವಾಮಿ, ಮಹೇಶ್, ಚೇತನ್, ಕರಿಯಪ್ಪ, ಕುಮಾರ್ ಸೇರಿದಂತೆ ಸುತ್ತಮುತ್ತಲಿನ ರೈತರು ಭಾಗವಹಿಸಿದ್ದರು.

ಸಿದ್ದೇಶ್ವರ ಸ್ವಾಮೀಜಿ, ಶಿವಾನಂದ ಶರ್ಮರ ಪುಣ್ಯಸ್ಮರಣೆ



ಶ್ರೀಸಿದ್ದೇಶ್ವರ ಸಾಮೀಜಿ, ಶಿವಾನಂದ ಶರ್ಮರ ಪುಣ್ಯಸ್ಮರಣೆ ನಡೆಯಿತು.

ತಿ.ನರಸೀಪುರ, ಜ.2– ನಾಡಿಗೆ ಜ್ಞಾನ ಹಾಗೂ ಶಿಕ್ಷಣ ದಾಸೋಹದ ಮಹತ್ವ ಸಾರಿದ ಮಹಾನ್ ವ್ಯಕ್ತಿಗಳಲ್ಲಿ ಸಿದ್ದೇಶ್ವರ ಸ್ವಾಮೀಜಿ ಮತ್ತು ಶಿವಾನಂದ ಶರ್ಮ ಅವರ ಕೊಡುಗೆ ಅಪಾರ ಎಂದು ವಾಟಾಳು ಮಠದ ಪೀಠಾಧ್ಯಕ್ಷ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಶಾಂತ ಮಲ್ಲಿಕಾರ್ಜುನ ಎಜುಕೇಶನ್ ಟ್ರಸ್ಟ್‌ನಲ್ಲಿ ಶ್ರೀಸಿದ್ದೇಶ್ವರ ಸಾಮೀಜಿಗಳ 2ನೇ ವರ್ಷ ಹಾಗೂ ಶಿವಾನಂದ ಶರ್ಮರ 56ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಾಡ್ರಳ್ಳಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಸರಳ ವ್ಯಕ್ತಿತ್ವ, ಪ್ರವಚನಕ್ಕೆ ಹೆಸರಾಗಿ ನಾಡಿನ ಜನತೆಯ ಮೌಢ್ಯಗಳನ್ನು ದೂರ ಸರಿಸಲು ಸಿದ್ದೇಶ್ವರ ಶ್ರೀಗಳು ಶ್ರಮಿಸಿದ್ದರು. ಪ್ರಾಪಂಚಿಕ ಸುಖ ಭೋಗಗಳನ್ನು ತ್ಯಜಿಸಿ ಸತ್ಸಂಗ ಪರಿತ್ಯಾಗಿಗಳಾಗಿ ಸಮಾಜಕ್ಕಾಗಿ ಜೀವ ಸವೆಸಿದ ಮಹಾನ್ ಪುರುಷರು. ಶಿಕ್ಷಣ ಕೆಲವರ ಸ್ವತ್ತಲ್ಲ ಹಲವರ ಸ್ವತ್ತು ಎಂಬುದನ್ನು ಸಾಬೀತು ಪಡಿಸಲು ಗ್ರಾಮೀಣ ಭಾಗದಲ್ಲೂ ಶಿಕ್ಷಣ ಮತ್ತು ದಾಸೋಹಕ್ಕೆ ಒತ್ತು ಕೊಟ್ಟವರು ಶಿವಾನಂದ ಶರ್ಮರು ಎಂದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರ್, ಕೆಇಬಿ ಸಿದ್ಧಲಿಂಗಸ್ವಾಮಿ, ಪೂಜಿತ್ ಮೆಡಿಕಲ್ ಕುಮಾರ್, ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ. ಶಿವಮಲ್ಲಪ್ಪ, ಗೌಡರ ಪ್ರಭು, ಆಲಗೂಡು ನಾಗರಾಜು, ಸೋವಾಶ್ರಯ ಫೌಂಡೇಷನ್ ಅಧ್ಯಕ್ಷ, ಮಣಿಕಂಠರಾಜ್‌ಗೌಡ, ವಿಚಾರವಾದಿ ಪ್ರಭುಸ್ವಾಮಿ, ಶರಣ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಮಹದೇವಸ್ವಾಮಿ, ಹಾಲಿನ ನಾಗರಾಜು, ಕುರುಬೂರು ನಾಗರಾಜು, ಶ್ರೀಕಾಂತ್, ಡಾ.ಎಂ.ಮಾದೇಶ್, ಬಿಎಸ್‌ಎನ್‌ಎಲ್ ಶಿವಮೂರ್ತಿ, ಹೊಸೂರುಹುಂಡಿ ತೊಂಟೇಶ್, ಹಿರಿಯೂರು ಪ್ರಕಾಶ್, ಆದಿಬೆಟ್ಟಳ್ಳಿ ಕುಮಾರ್, ಕೊತ್ತೇಗಾಲ ವೀರೇಶ, ವಕೀಲ ಜ್ಞಾನೇಂದ್ರಮೂರ್ತಿ, ಮೂಗೂರು ಕುಮಾರಸ್ವಾಮಿ, ಕರೋಹಟ್ಟಿ ರಾಜಶೇಖರ್ ಹಾಜರಿದ್ದರು.

ಹೆಡಿಯಾಲದಲ್ಲಿ ಕ್ಯಾಲೆಂಡರ್ ಬಿಡುಗಡೆ



ನಂಜನಗೂಡು ತಾಲೂಕಿನ ಹೆಡಿಯಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಸಂಘದ ಅಧ್ಯಕ್ಷ ಎಂ.ಮಂಜುನಾಥ್ ಬಿಡುಗಡೆಗೊಳಿಸಿದರು. ಉಪಾಧ್ಯಕ್ಷ ಶಿವರುದ್ರಪ್ಪ, ಸದಸ್ಯರಾದ ಬಸವಣ್ಣ, ಶಿವಮ್ಮ, ಶಿವರುದ್ರಪ್ಪ, ಕೆಂಪಾಲಮ್ಮ, ಅನ್ವರ್, ಶಿವಯ್ಯ, ರಂಗನಾಯಕ, ನಿರಂಜನ್, ಸಿಇಓ ಶಿವಕುಮಾರ್, ಸಿಬ್ಬಂದಿಗಳಾದ ತಾಜುದ್ದೀನ್, ನಾಗಣ್ಣ ಇತರರಿದ್ದರು.

ನಗರದಲ್ಲಿ ಒಂದು ಹಾಡಿ ಯೋಜನೆಗೆ ಜಾಗ ನೀಡಲು ಮನವಿ



ಹುಡಾ ಅಧ್ಯಕ್ಷ ಅಮರನಾಥ್ ಅವರನ್ನು ಸನ್ಮಾನಿಸಲಾಯಿತು.

ನಗರದಲ್ಲಿ ಹುಡಾ ಅಧ್ಯಕ್ಷ ಅಮರನಾಥ್ ಭೇಟಿ ಮಾಡಿ ಸನ್ಮಾನಿಸಿ ಮನವಿ ಸಲ್ಲಿಸಿ ಮಾತನಾಡಿದ ಶ್ರೀಕಾಂತ್, ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಪರಿಶಿಷ್ಟ ಪಂಗಡದ ಪ್ರಧಾನ ಕಾರ್ಯದರ್ಶಿ ಅವರಿಗೆ ನಗರದಲ್ಲಿ ಒಂದು ಹಾಡಿ ಯೋಜನೆಯನ್ನು ಹುಣಸೂರಿನಲ್ಲಿ ಮೊದಲು

ಹುಣಸೂರು, ಜ.2– ನಗರದಲ್ಲಿ ಒಂದು ಹಾಡಿ ಯೋಜನೆಗೆ ಹೆಚ್.ಡಿ. ಕೋಟೆ ಅಥವಾ ಮಡಿಕೇರಿ ರಸ್ತೆಗೆ ಹೊಂದಿಕೊಂಡಂತೆ 10 ಎಕರೆ ಜಾಗ ನಿಗದಿಪಡಿಸುವಂತೆ ಹುಣಸೂರು ನಗರಾಭಿವೃದ್ಧಿ ಯೋಜನೆ ಅಧ್ಯಕ್ಷ ಹೆಚ್.ಪಿ. ಅಮರನಾಥ್ ಅವರಿಗೆ ಡೀಡ್ ನಿರ್ದೇಶಕ ಡಾ.ಎಸ್.ಶ್ರೀಕಾಂತ್ ಮನವಿ ಸಲ್ಲಿಸಿದರು.

ಜಾರಿಗೊಳಿಸಲು ನೆರವಾಗಬೇಕೆಂದು ವಿನಂತಿಸಿರುವುದಾಗಿ ತಿಳಿಸಿದರು. ಅಲ್ಲದೇ ಶಾಸಕ ಜಿ.ಡಿ. ಹರೀಶ್ ಗೌಡರಿಗೂ ಸರ್ಕಾರದ ಮಟ್ಟದಲ್ಲಿ ಆದಿವಾಸಿಗಳ ಪರವಾಗಿ ನಿಲ್ಲುವಂತೆ ಮನವಿ ಮಾಡಿರುವುದಾಗಿ ತಿಳಿಸಿದರು.

ಈ ವೇಳೆ ಸಂಯೋಜಕ ಎ. ಪ್ರಕಾಶ್, ಬಿಳಿಕೆರೆ ಮಧು ಇದ್ದರು.

ಅಮಿತ್ ಶಾ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ



ಅಮಿತ್ ಶಾ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಹಂಪಾಪುರ, ಜ.2– ಡಾ.ಅಂಬೇಡ್ಕರ್ ಕುರಿತು ಲಘುವಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ ದಸಂಸ ಹಾಗೂ ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದಿಂದ ಗ್ರಾಮದಲ್ಲಿ ಪ್ರತಿಭಟನೆ ನಡೆಸಲಾಯಿತು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಮಾತನಾಡಿ, ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿರುವ ಅಮಿತ್ ಶಾ ಅವರನ್ನು ಕೂಡಲೇ ಕೇಂದ್ರ ಸರ್ಕಾರ ಸಚಿವ ಸಂಪುಟದಿಂದ ವಜಾಗೊಳಿಸಿ, ಬಂಧಿಸಬೇಕು. ಇಲ್ಲದಿದ್ದರೆ ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ಸಾಮಾಜಿಕ ಹೋರಾಟಗಾರ ಡಾ.ಎಸ್. ಮರಿದೇವಯ್ಯ ಮಾತನಾಡಿ, ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದಲೂ ಸಂವಿಧಾನ ಮತ್ತು ಅಂಬೇಡ್ಕರ್ ವಿರುದ್ಧ ನಿರಂತರವಾಗಿ ವಿವಾದ ಹುಟ್ಟು ಹಾಕುತ್ತಿದೆ. ಪ್ರಸ್ತುತ ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ನಿರ್ಮಾಣವಾಗಿದ್ದು, ಸಂವಿಧಾನ ಮತ್ತು ಪ್ರಜಾಪ್ರಭುತ್ವ ಅಪಾಯದಲ್ಲಿದೆ. ಹಾಗಾಗಿ ಬಹುಜನ ಬಂಧುಗಳು ಒಂದಾಗಿ ಹೋರಾಟಕ್ಕೆ ಸಿದ್ಧರಾಗಬೇಕು ಎಂದು ಕರೆ ನೀಡಿದರು.

ಇದೇ ವೇಳೆ ಹಂಪಾಪುರ ನಾಡ ಕಚೇರಿ ಆರ್‌ಐ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ದಸಂಸ ಮುಖಂಡರಾದ ನಿಂಗರಾಜು, ದಾಸಯ್ಯ, ಮುತ್ತು, ರಾಜೇಶ್, ಸಿದ್ದೇಶ್, ಯೋಗೇಶ್, ಅವಿನಾಶ್, ಮುಖಂಡರಾದ ಶಿವನಂಜಯ್ಯ, ಸಿದ್ದರಾಜು, ಪುಟ್ಟಯ್ಯ, ಮರಿಚಿಕ್ಕಯ್ಯ, ರವಿಕುಮಾರ್, ನಟರಾಜು, ಮಹಾದೇವ್, ಡಿ.ಪ್ರಕಾಶ್, ರಾಹುಲ್, ಮಂಜು, ಮಹಾದೇವ, ಶಿವು, ದರ್ಶನ್, ಜ್ಯೋತಿ, ಪ್ರತಾಪ್, ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆ ಪದಾಧಿಕಾರಿಗಳು ಹಾಗೂ ಹಂಪಾಪುರ ಹೋಬಳಿಯ ಅಕ್ಕಪಕ್ಕದ ಗ್ರಾಮಗಳ ಮುಖಂಡರು, ಗ್ರಾಪಂ ಸದಸ್ಯರು ಇದ್ದರು.

ಡೈರಿ ನೂತನ ನಿರ್ದೇಶಕರಿಗೆ ಸನ್ಮಾನ



ಹೆಚ್.ಡಿ.ಕೋಟೆ ತಾಲೂಕಿನ ಕ್ಯಾತನಹಳ್ಳಿ ಡೈರಿಗೆ ಆಯ್ಕೆಯಾದ ನೂತನ ನಿರ್ದೇಶಕರನ್ನು ಮೈಮುಲ್ ನಿರ್ದೇಶಕ ಕೆ.ಈರೇಗೌಡ ಸನ್ಮಾನಿಸಿದರು. ಈ ವೇಳೆ ನೂತನ ಆಡಳಿತ ಮಂಡಳಿ ನಿರ್ದೇಶಕ ಕೆ.ಪಿ.ಚಲುವರಾಜು, ಕಲ್ಯಾಣ ಕುಮಾರ್, ರಾಮಚಂದ್ರ, ಕೃಷ್ಣೇಗೌಡ, ಬಸಪ್ಪ, ಜಯಮ್ಮ, ಜಯಮ್ಮ, ಮನೋಹರ, ಕುಮಾರ, ಬಸವರಾಜು, ಗಿರೀಶ್, ರಮೇಶ್, ಮುಖಂಡರಾದ ಬಸವರಾಜು, ಕಮಲಾಕ್ಷ, ಮಧು, ನಂಜು, ಮಹದೇವಸ್ವಾಮಿ, ಸ್ವಾಮಿ, ಗಿರೀಶ್ ಉಪಸ್ಥಿತರಿದ್ದರು.

ಕೊಳತ್ತೂರು ಡೈರಿಯಲ್ಲಿ ದಿನದರ್ಶಿಕೆ ಬಿಡುಗಡೆ



ತಿ.ನರಸೀಪುರ ತಾಲೂಕಿನ ಕೊಳತ್ತೂರು ಡೈರಿಯಲ್ಲಿ 2025ನೇ ಸಾಲಿನ ದಿನದರ್ಶಿಕೆಯನ್ನು ಅಧ್ಯಕ್ಷ ಕೆ.ಎನ್.ಕುಮಾರ್ ಬಿಡುಗಡೆಗೊಳಿಸಿದರು. ಈ ವೇಳೆ ಉಪಾಧ್ಯಕ್ಷ ಕಾಳಯ್ಯ, ನಿರ್ದೇಶಕರಾದ ಆರ್.ಸೋಮಣ್ಣ, ಕೆ.ಶಂಕರ್, ತಿಮ್ಮರಾಯಗೌಡ, ಲೋಕೇಶ್, ಮಹದೇವಶೆಟ್ಟಿ, ಪದ್ಮ, ರತ್ನಮ್ಮ, ನಿಂಗರಾಜು, ರತ್ನಮ್ಮ ಸಿಬ್ಬಂದಿಗಳಾದ ಸಿದ್ದರಾಜು, ಗೋವಿಂದ, ಧನರಾಜ್, ಚಂದು, ರೋಹಿತ್ ಹಾಜರಿದ್ದರು.

ಉಪ್ಪಾರ ಸಮಾಜದ ಜನಸಂಖ್ಯಾ ಆಂದೋಲನಕ್ಕೆ ಚಾಲನೆ



ಉಪ್ಪಾರ ಸಮಾಜದ ಜನಸಂಖ್ಯಾ ಆಂದೋಲನಕ್ಕೆ ಚಾಲನೆ ನೀಡಲಾಯಿತು.

ತಿ.ನರಸೀಪುರ, ಜ.2– ತಾಲೂಕಿನಲ್ಲಿ ಉಪ್ಪಾರ ಸಮಾಜದ ಜನಸಂಖ್ಯಾ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಭಗೀರಥ ಉಪ್ಪಾರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಸಿದ್ಧಶೆಟ್ಟಿ ತಿಳಿಸಿದರು.

ತಾಲೂಕಿನ ಕೇತಹಳ್ಳಿ ಗ್ರಾಮದ ದೇವಸ್ಥಾನದ ಆವರಣದಲ್ಲಿ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಉಪ್ಪಾರ ಸಮಾಜದ ಜನಸಂಖ್ಯಾ ಆಂದೋಲನವನ್ನು, ನಾವು ಈ ಗ್ರಾಮದಿಂದಲೇ ಆರಂಭಿಸುತ್ತಿದ್ದೇವೆ. ಇದಕ್ಕಾಗಿ ಸಮುದಾಯದ ಹಿರಿಯ ಮುಖಂಡ ಹಾಗೂ ಪ್ರಾಂಶುಪಾಲ ಸೋಮಣ್ಣ ಅವರಿಗೆ ಆಂದೋಲನ ನಡೆಸಲು ಪುಸ್ತಕ ನೀಡುತ್ತಿದ್ದೇವೆ. ಸಮುದಾಯದ ಮುಖಂಡರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ತೀರ್ಮಾನಿಸಲಾಯಿತು. ಮುಖಂಡರಾದ ಗುರುಮೂರ್ತಿ, ಕಾವೇರಿಪುರ ನಂಜುಂಡ, ಮಾವಿನಹಳ್ಳಿ ರಾಜಣ್ಣ, ಮಣಿಕಂಠ, ನಟರಾಜು, ಪುಟ್ಟ ಮಾದಶೆಟ್ಟಿ, ಹರೀಶ, ನಾಗರಾಜು, ಮಹೇಶ, ಗ್ರಾಮದ ಯಜಮಾನರಾದ ಮಹೇಶ್, ಸೋಮಣ್ಣ, ಕುಮಾರ, ಮಹದೇವ, ಜಯಣ್ಣ, ಕೆಂಪಶೆಟ್ಟಿ, ಮಂಜು, ಪ್ರಶಾಂತ್, ವೆಂಕಟರಮಣ ಹಾಜರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ತಿ.ನರಸೀಪುರ: ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದ ಉಪ್ಪಾರ ಸಮುದಾಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜ.20 ಕೊನೆ ದಿನ. ಮಾಹಿತಿಗೆ ಮೊ.8453077381 ಸಂಪರ್ಕಿಸಿ.

ಚುಂಚನಕಟ್ಟೆ ಜಾತ್ರಾ ಮಹೋತ್ಸವ ಅಂಗವಾಗಿ

ಶ್ರೀರಾಮನ ಬ್ರಹ್ಮರಥ ಪರೀಕ್ಷೆ



ರಥವನ್ನು ಪರೀಕ್ಷೆ ಮಾಡಲಾಯಿತು.

ಚುಂಚನಕಟ್ಟೆ, ಜ.2– ಇತಿಹಾಸ ಪ್ರಸಿದ್ಧ ಚುಂಚನಕಟ್ಟೆ ಜಾತ್ರಾ ಮಹೋತ್ಸವ ಅಂಗವಾಗಿ ದೇವಾಲಯದ ಆವರಣದಲ್ಲಿ ಗುರುವಾರ ಶ್ರೀಕೋದಂಡ ರಾಮ ಬ್ರಹ್ಮರಥವನ್ನು ಕ್ರೇನ್ ಮೂಲಕ ಎಳೆದು ಪರೀಕ್ಷೆ ನಡೆಸಲಾಯಿತು.

ಚುಂಚನಕಟ್ಟೆಯಲ್ಲಿ ಜನವರಿ ಮೊದಲ ವಾರ ಜಾನುವಾರು ಜಾತ್ರೆ ಆರಂಭವಾಗಲಿದ್ದು, ಜ.15ರಂದು ಶ್ರೀರಾಮ ದೇವರ ಬ್ರಹ್ಮರಥೋತ್ಸವ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆ ಎಇಇ ಸುಮಿತ್ರಾ ಹಾಗೂ ದೇವಾಲಯದ ಪಾರುಪತ್ತೇದಾರ ಯತಿರಾಜು, ರಥ ನಿರ್ವಹಣೆಕಾರ ಕ್ಷೇತ್ರಪಾಲ ಸಮ್ಮುಖದಲ್ಲಿ ಕ್ರೇನ್ ಮೂಲಕ ದೇಗುಲದ ಆವರಣದಲ್ಲಿ ರಥ ಎಳೆದು ಚಕ್ರಗಳ ಗುಣಮಟ್ಟ ಹಾಗೂ ದಕ್ಷತೆ ಪರೀಕ್ಷಿಸಿ ರಥೋತ್ಸವದ ಮೊದಲ ಹಂತದ ಸಿದ್ಧತೆ ನಡೆಸಲಾಯಿತು.

ಈ ಹಿಂದೆ ರಥದ ಚಕ್ರಗಳು ಶಿಥಿಲಗೊಂಡಿದ್ದ ಹಿನ್ನೆಲೆಯಲ್ಲಿ ಕಳೆದ ವರ್ಷ ಗುಣಮಟ್ಟದ ಹಳೆಯ ಕಾಡು ಬಾಗೆ ಮರದಲ್ಲಿ ರಥದ ಚಕ್ರಗಳನ್ನು ನಿರ್ಮಿಸಿ ಅಳವಡಿಸಲಾಗಿತ್ತು. ಅಲ್ಲದೇ ರಥೋತ್ಸವ ಸುಸೂತ್ರವಾಗಿ ಜರುಗಿತ್ತು. ಇದೀಗ ಮತ್ತೆ ರಥೋತ್ಸವ ಬಂದಿರುವುದರಿಂದ ರಥದ ಚಕ್ರ ಹಾಗೂ ಅಡ್ಡಪಟ್ಟಿಗಳು ಮತ್ತು ಹೃದಯ ಭಾಗಗಳನ್ನು ಪರೀಕ್ಷಿಸಲಾಯಿತು. ಅಲ್ಲದೇ ರಥಕ್ಕೆ ಅಳವಡಿಸುವ ಕಬ್ಬಿಣದ ಪರಿಕರಗಳನ್ನು ಪರೀಕ್ಷಿಸುವಂತೆ ಪಿಡಬ್ಲ್ಯೂಡಿ ಎಇಇ ಸುಮಿತ್ರಾ ದೇಗುಲದ ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ಉಪ ತಹಸೀಲ್ದಾರ್ ಕೆ.ಜೆ.ಶರತ್ ಕುಮಾರ್, ವಿಜಯ್, ದೇಗುಲದ ಸಿಬ್ಬಂದಿಗಳಾದ ಹರೀಶ್, ಅನಂತ್, ಚಂದ್ರ ತಿಮ್ಮಣ್ಣ, ತಬಲಾ ಮಂಜು, ಅರ್ಚಕ ನಾರಾಯಣ ಅಯ್ಯಂಗಾರ್, ವಾಸುದೇವ್ ಸೇರಿದಂತೆ ಮತ್ತಿತರರಿದ್ದರು.

ಶಿವಕುಮಾರಸ್ವಾಮಿಗಳ ಸಂಘಕ್ಕೆ ಅಧ್ಯಕ್ಷರ ಆಯ್ಕೆ



ಬೆಟ್ಟದಪುರ ಸಮೀಪದ ಕೂರ್ಗಲ್ಲು ಗ್ರಾಮದ ಸಿದ್ಧಗಂಗಾ ಮಠದ ಶಿವಕುಮಾರಸ್ವಾಮಿಗಳ ಸಂಘದ ಅಧ್ಯಕ್ಷರಾಗಿ ತೋಂಟಪ್ಪಶೆಟ್ಟಿ ಅವರನ್ನು ಆಯ್ಕೆ ಮಾಡಲಾಯಿತು. ಈ ವೇಳೆ ತಾಲೂಕು ಅಧ್ಯಕ್ಷ ಕುಮಾರಸ್ವಾಮಿ, ಶಾಂತಕುಮಾರ್, ಸದಸ್ಯರಾದ ಮಹದೇವ್, ಗಿರೀಶ್, ಮಹದೇವ, ಪರಮೇಶ, ಶಿವಶಂಕರ್, ಸ್ವಾಮಿ, ಗಣೇಶ್, ಮಹೇಶ್ ಇತರರಿದ್ದರು.

ಜ.23ಕ್ಕೆ, ಶಾಸಕರುಗಳೊಂದಿಗೆ ರೈತರ ಮುಖಾಮುಖಿ ಚರ್ಚೆ



ಸಭೆಯಲ್ಲಿ ರಾಜ್ಯ ರೈತ ಸಂಘದ ಮುಖಂಡ ಪಚ್ಚೆ ನಂಜುಂಡಸ್ವಾಮಿ ಮಾತನಾಡಿದರು.

> ರಾಜ್ಯದ ವಿವಿಧ ರೈತ ಸಂಘಗಳ ಬಣಗಳು ರೈತ ಮುಖಂಡ ಪಚ್ಚೆ ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ಏಕೀಕರಣಗೊಳ್ಳಲು ತೀರ್ಮಾನಿಸಿದ್ದು, ಅದರಂತೆ ರೈತ ಮುಖಂಡರು ತಮ್ಮಲ್ಲಿನ ಭಿನ್ನಾಭಿಪ್ರಾಯ ಮರೆತು ಒಟ್ಟಾಗಿ ಬೆಳಗಾವಿ ಅಧಿವೇಶನ ನಡೆಯುವ ಸಂದರ್ಭ ರಾಜ್ಯದ ವಿವಿಧ ಭಾಗಗಳಿಂದ ಬೆಳಗಾವಿಗೆ ತೆರಳಿ ಚಳವಳಿ ನಡೆಸಿದ್ದೇವು. ಜಿಲ್ಲೆಯಲ್ಲಿ ರೈತ ಸಂಘಕ್ಕೆ ಒಂದು ಲಕ್ಷ ಹೊಸ ಸದಸ್ಯರನ್ನು ನೇಮಕ ಮಾಡಲು ತೀರ್ಮಾನಿಸಲಾಗಿದ್ದು, ರೈತ ಸಂಘಟನೆ ಬಲಪಡಿಸಲಾಗುವುದು.
>
> – ವಿದ್ಯಾಸಾಗರ್, ರೈತ ಸಂಘದ ಜಿಲ್ಲಾಧ್ಯಕ್ಷ.

ನಂಜನಗೂಡು, ಜ.2– ತಾಲೂಕಿನ ತಾಂಡವಪುರದಲ್ಲಿ ಜ.23 ರಂದು ಜಿಲ್ಲೆಯ ಶಾಸಕರುಗಳೊಂದಿಗೆ ರೈತರ ಮುಖಾಮುಖಿ ಕಾರ್ಯಕ್ರಮ ಆಯೋಜಿಸಲಾಗಿದ್ದು, ರೈತರ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಸೂಚಿಸುವಂತೆ ಮನವಿ ಮಾಡಲಾಗುವುದು ಎಂದು ರಾಜ್ಯ ರೈತ ಸಂಘದ ಮುಖಂಡ ಪಚ್ಚೆ ನಂಜುಂಡಸ್ವಾಮಿ ತಿಳಿಸಿದರು.

ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸಭಾಂಗಣದಲ್ಲಿ ಗುರುವಾರ ನಡೆದ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಅಂದು ಶಾಸಕರಾದ ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ಡಾ.ಯತೀಂದ್ರ ಸಿದ್ದರಾಮಯ್ಯ, ಗಣೇಶ್ ಪ್ರಸಾದ್, ರವಿಶಂಕರ್, ದರ್ಶನ್ ಪುಟ್ಟಣ್ಣಯ್ಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದು, ಜಿಲ್ಲೆಯ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಿ ಸರ್ಕಾರದಿಂದ ಪರಿಹಾರ ಕಂಡುಕೊಳ್ಳಲು, ಶಾಸಕರು ಜಿಲ್ಲೆಯ ರೈತರೊಂದಿಗೆ ಮುಖಾಮುಖಿ ಚರ್ಚಿಸಲು, ರೈತರ ಬೇಡಿಕೆಗಳನ್ನು ಈಡೇರಿಸಲು ಶಾಸಕರುಗಳ ಮೂಲಕ ಸರ್ಕಾರಕ್ಕೆ ಗಡುವು ನೀಡಲು ತೀರ್ಮಾನಿಸಲಾಗಿದೆ ಎಂದರು.

ರೈತರು ಬೆಳೆದ ಟನ್ ಕಬ್ಬಿಗೆ ಐದೂವರೆ ಸಾವಿರ ನೀಡಬೇಕು. ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರು ಜಮೀನಿನ ಮಂಜೂರಾತಿ ಪಡೆಯಲು ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಡುತ್ತಿದ್ದು, ಹಣ ನೀಡಿದವರಿಗೆ ಮಾತ್ರ ಜಮೀನು ಮಂಜೂರಾತಿ ಪತ್ರ ನೀಡುತ್ತಿದ್ದಾರೆ. ನೂರಾರು ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರಿಗೆ ಮಂಜೂರಾತಿ ನೀಡಬೇಕು. ಗ್ರಾಮಗಳು ಗ್ರಾಮದ 10 ಪಟ್ಟು ವ್ಯಾಪ್ತಿ ಮೀರಿ ಬೆಳೆದಿವೆ. ಹೀಗಾಗಿ ಗ್ರಾಮ ಠಾಣಾ ವಿಸ್ತರಿಸಿ ಎ ಖಾತೆ ಮಾಡಿಕೊಡಬೇಕು. ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರಿಗೆ ಬಡ್ಡಿ ರಹಿತ ಸಾಲ ನೀಡಲು ಕೇಂದ್ರ ಸರ್ಕಾರಕ್ಕೆ 18 ಸಾವಿರ ಕೋಟಿ ನೀಡುವಂತೆ ರಾಜ್ಯ ಸರ್ಕಾರ ಮನವಿ ಮಾಡಿತ್ತು. ಕೇಂದ್ರ ಸರ್ಕಾರ ರಾಜ್ಯದ ಬೇಡಿಕೆಯಷ್ಟು ಸಾಲ ಮಂಜೂರಾತಿ ಮಾಡದೆ ಇರುವುದರಿಂದ ರೈತರು ಖಾಸಗಿ ಬ್ಯಾಂಕುಗಳಲ್ಲಿ ಅಧಿಕ ಬಡ್ಡಿ ದರದಲ್ಲಿ ನೀಡಿ ಸಾಲ ಪಡೆಯಬೇಕಾಗಿದೆ. ಕೇಂದ್ರ ರಾಜ್ಯದ ಮನವಿ ಪುರಸ್ಕರಿಸಿ ನಮ್ಮ ರಾಜ್ಯದ ಪಾಲಿನ ಹಣವನ್ನು ಬಿಡುಗಡೆ ಮಾಡಬೇಕು. ರೈತರ ಜಮೀನುಗಳಿಗೆ 12 ಗಂಟೆ ಕಾಲ ತ್ರೀಫೇಸ್ ವಿದ್ಯುತ್ ನೀಡಬೇಕು. ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ದಾಳಿಯಿಂದ ಪ್ರಾಣ ಕಳೆದುಕೊಂಡ ಪ್ರಕರಣಗಳಲ್ಲಿ 15 ದಿನಗಳ ಒಳಗೆ ಸರ್ಕಾರ ಪರಿಹಾರ ಧನ ವಿತರಿಸಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್‌ರಾವ್, ತಾಲೂಕು ಹಸಿರು ಸೇನೆ ಅಧ್ಯಕ್ಷ ಬಂಗಾರುಸ್ವಾಮಿ, ಹಿಮ್ಮಾವು ರಘು, ವೇಣುಗೋಪಾಲ್, ಮಹದೇವನಾಯ್ಕ ಉಪಸ್ಥಿತರಿದ್ದರು.

ಜಿ.ಬಿ.ಸರಗೂರು ಗ್ರಾಪಂಗೆ ಈರೇಗೌಡ ಅಧ್ಯಕ್ಷ



ಜಿ.ಬಿ. ಸರಗೂರು ಗ್ರಾಪಂ ಅಧ್ಯಕ್ಷರಾಗಿ ಈರೇಗೌಡ ಅವಿರೋಧವಾಗಿ ಆಯ್ಕೆಯಾದರು.

ಹೆಚ್.ಡಿ.ಕೋಟೆ, ಜ.2– ತಾಲೂಕಿನ ಜಿ.ಬಿ.ಸರಗೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಈರೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷ ಶಿವರಾಜು ಅವರು ರಾಜೀನಾಮೆ ನೀಡಿದ ಕಾರಣ ಅವರಿಂದ ತೆರವಾದ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಈರೇಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ವಸಂತ್ ಕುಮಾರ್ ಘೋಷಿಸಿದರು. ಈ ವೇಳೆ ಗ್ರಾಪಂ ಆವರಣದಲ್ಲಿ ನೆರೆದಿದ್ದ ಬೆಂಬಲಿಗರು, ಹಿತೈಷಿಗಳು, ಸದಸ್ಯರು, ಗ್ರಾಮಸ್ಥರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.


ಒಟ್ಟು 17 ಸದಸ್ಯ ಬಲದ ಗ್ರಾಪಂನಲ್ಲಿ ಕಾಂಗ್ರೆಸ್ ಬೆಂಬಲಿತ 7 ಸದಸ್ಯರು ಚುನಾವಣೆಗೆ ಗೈರಾಗಿದ್ದರು. ಉಳಿದ 10 ಜೆಡಿಎಸ್ ಬೆಂಬಲಿತ ಸದಸ್ಯರು ಅವಿರೋಧ ಆಯ್ಕೆಗೆ ಸಹಕಾರ ನೀಡಿದರು.

ನೂತನ ಅಧ್ಯಕ್ಷ ಈರೇಗೌಡ ಮಾತನಾಡಿ, ಪಕ್ಷದ ಎಲ್ಲಾ ಮುಖಂಡರು, ಗ್ರಾಪಂ ಸದಸ್ಯರು ಹಾಗೂ ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗ್ರಾಮದ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು.


ಗ್ರಾಪಂ ಉಪಾಧ್ಯಕ್ಷೆ ವೆಂಕಟಮ್ಮ, ಸದಸ್ಯರಾದ ಶಿವರಾಜು, ರಾಜು, ವಿಜಯ, ಸುಧಾ, ತಿಮ್ಮಚಾರ್, ಗೌರಮ್ಮ, ಈರಾಜು, ಕುಮಾರ್ ಮತ್ತು ವಿದ್ಯಾಸಾಗರ್ ಅವರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು. ಮುಖಂಡರಾದ ತಾಪಂ ಉಪಾಧ್ಯಕ್ಷ ಕೃಷ್ಣೇಗೌಡ, ನಾಗೇಗೌಡ, ಸಣ್ಣತಮ್ಮೇಗೌಡ, ಅರಸೇಗೌಡ, ಬಸವರಾಜು, ನಾಗಣ್ಣ, ಜಯಣ್ಣ, ಬಿಜೆಪಿ ಮುಖಂಡ ಕೆ.ಎಂ.ಅನುರಾಜು, ಜಯರಾವ್, ಮರಿಸಿದ್ದೇಗೌಡ, ಕುಮಾರ್ ಸೇರಿದಂತೆ ಇತರರಿದ್ದರು.

'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ನಾಮಕರಣ ಪ್ರಸ್ತಾಪ ವಿವಾದ

'ಪ್ರಿನ್ಸೆಸ್ ರಸ್ತೆ' ಎಂಬುದಕ್ಕೆ ಇಲ್ಲಿವೆ ತಾಜಾ ಪುರಾವೆಗಳು



1976ರ ದಾಖಲೆ: 1976ರಲ್ಲಿ ಕೇಂದ್ರ ಸರ್ಕಾರದ ಸರ್ವೇಕ್ಷಣಾ ಇಲಾಖೆ ಬಿಡುಗಡೆ ಮಾಡಿದ 'ಮೈಸೂರು ಪ್ರವಾಸ ನಕ್ಷೆ' ಅಥವಾ 'ಮೈಸೂರು ಮಾರ್ಗದರ್ಶಿ ನಕ್ಷೆ'ಯಲ್ಲಿ 'ಪ್ರಿನ್ಸೆಸ್ ರಸ್ತೆ' ಉಲ್ಲೇಖವಿದೆ. ನಕ್ಷೆಯು ಪ್ರದೇಶದ ಹೆಗ್ಗುರುತುಗಳ ಜೊತೆಗೆ ಮುಖ್ಯ ರಸ್ತೆಗಳು ಮತ್ತು ಛೇದಿಸುವ ರಸ್ತೆಗಳ ವಿವರವನ್ನು ಹೊಂದಿದೆ.



1930ರ ಪೋಸ್ಟ್‌ಕಾರ್ಡ್: 1930ರ ಅಂಚೆ ಲಕೋಟೆಯಲ್ಲಿ ಆರ್.ಎನ್.ಮಿರ್ಜಾ, ಸರ್ ಮಿರ್ಜಾ ಇಸ್ಮಾಯಿಲ್ ಅವರ ಸಂಬಂಧಿ, 'ಪ್ರಿನ್ಸೆಸ್ ರಸ್ತೆ', ವೊಂಟಿಕೊಪ್ಪಲ್ ಪಿ.ಒ., ಮೈಸೂರು ಸ್ಟೇಟ್' ವಿಳಾಸವನ್ನು ದಾಖಲಿಸಲಾಗಿದೆ.

ಮೈಸೂರು, ಜ.2(ಆರ್‌ಕೆ)–ಪ್ರಸ್ತುತ ಕೆಆರ್‌ಎಸ್ ರಸ್ತೆ ಎಂದು ಕರೆಯುತ್ತಿರುವ ಮೈಸೂರಿನ 'ಪ್ರಿನ್ಸೆಸ್ ರಸ್ತೆ'ಯನ್ನು ಸಾರ್ವಜನಿಕರು ಬಹುತೇಕ ಮರೆತಿದ್ದಾರೆ.

ಆದರೆ 'ಪ್ರಿನ್ಸೆಸ್ ರಸ್ತೆ' ಇತ್ತು ಎಂಬ ಸತ್ಯಾಸತ್ಯತೆ ಮತ್ತು ಐತಿಹಾಸಿಕ ಅಸ್ತಿತ್ವವನ್ನು ಎತ್ತಿ ಹಿಡಿಯುವ ನಕ್ಷೆ (Map)ಗಳು ಹಾಗೂ ಅಂಚೆ ಕಾರ್ಡ್ (Post Card)ಗಳು ತಾಜಾ ಪುರಾವೆಗಳನ್ನು ಒದಗಿಸುತ್ತಿವೆ. ಕೆಆರ್‌ಎಸ್ ರಸ್ತೆ ಎಂದು ಕರೆಯಲ್ಪಡುತ್ತಿರುವ ಈ ರಸ್ತೆಯನ್ನು 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂದು ಮರು ನಾಮಕರಣ ಮಾಡಲು ಪ್ರಸ್ತಾಪ ಸಲ್ಲಿಸಲಾಗಿದ್ದು, ಅದಕ್ಕೆ ಪಾಲಿಕೆ ಅನುಮೋದಿಸಿ, ಆಕ್ಷೇಪಣೆ ಆಹ್ವಾನಿಸಿದೆ.

ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರು 1921ರ ನಕ್ಷೆಯನ್ನು ಪ್ರದರ್ಶಿಸಿರುವುದು ಅಧಿಕೃತವಾಗಿ 'ಪ್ರಿನ್ಸೆಸ್ ರಸ್ತೆ' ಹೆಸರಿಡಲಾಗಿತ್ತು ಎಂಬುದನ್ನು ಸಾಬೀತುಪಡಿಸುತ್ತದೆ. ಈ ಬಗ್ಗೆ ಹಿಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ (CITB)ಯ ದಾಖಲೆಗಳಲ್ಲಿ ನಮೂದಾಗಿದೆ ಎಂದು ತಿಳಿಸಿದ್ದಾರೆ.

1930ರ ಅಂಚೆ ಕಾರ್ಡ್‌ನಲ್ಲಿ ಪ್ರಿನ್ಸೆಸ್ ರಸ್ತೆಯ ನಮೂದಿಸಿಯೇ ವಿಳಾಸವನ್ನು ಬರೆಯಲಾಗಿತ್ತು. 'ಮೈಸೂರು ಟೂರ್ ಮ್ಯಾಪ್' ಅಥವಾ 'ಗೈಡ್ ಮ್ಯಾಪ್' ಅನ್ನು ಕೇಂದ್ರ ಸರ್ಕಾರವು 1976ರಲ್ಲಿ ಬಿಡುಗಡೆ ಮಾಡಿತ್ತು. ಅದರಲ್ಲಿ 1950ರ ನಕ್ಷೆಯೂ ಇದೆ. ಇಲ್ಲಿಯೂ 'ಪ್ರಿನ್ಸೆಸ್ ರಸ್ತೆ' ಎಂದು ಹೆಸರಿತ್ತು ಎಂಬುದಕ್ಕೆ ಐತಿಹಾಸಿಕ ಪುರಾವೆಗಳನ್ನು ಪುಷ್ಟೀಕರಿಸುತ್ತವೆ.

ಮೈಸೂರು, ಜೈಪುರ ಮತ್ತು ಹೈದರಾಬಾದ್ ದಿವಾನರಾಗಿದ್ದ ಖ್ಯಾತ ರಾಜ ನೀತಿಜ್ಞ ಹಾಗೂ ಪೊಲೀಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಸಂಬಂಧಿ ಆರ್.ಎನ್.ಮಿರ್ಜಾ ಅವರು 1930ರಲ್ಲಿ ಬರೆದಿದ್ದ ಅಂಚೆ ಲಕೋಟೆ ಮೇಲೆ ಪ್ರಿನ್ಸೆಸ್ ರಸ್ತೆ, ಒಂಟಿಕೊಪ್ಪಲ್ ಅಂಚೆ ಕಚೇರಿ, ಮೈಸೂರು ಸ್ಟೇಟ್' ಎಂಬ ವಿಳಾಸವಿರುವುದು ಮತ್ತೊಂದು ಮಹತ್ವದ ಪುರಾವೆಯಾಗಿದೆ.

ಮೈಸೂರು ರಾಜವಂಶಸ್ಥರ ಸದಸ್ಯರಲ್ಲೊಬ್ಬರಾದ ಆರ್.ರಾಜಾಚಂದ್ರ ಅವರು ಅಧಿಕೃತ ದಾಖಲೆಗಳಲ್ಲಿ 'ಪ್ರಿನ್ಸೆಸ್ ರಸ್ತೆ' ಉಲ್ಲೇಖವಿಲ್ಲ ಎಂಬ ಹೇಳಿಕೆಗಳನ್ನು ತಳ್ಳಿ ಹಾಕಿದ್ದು, 'ಮೈಸೂರು ಮಿತ್ರ'ನ ಗಮನಕ್ಕೆ ಕೆಲ ಪುರಾವೆಗಳನ್ನು ನೀಡಿದ್ದಾರೆ. ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರು ನೀಡಿರುವ ಸಲಹೆಯಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮಧ್ಯೆ ಪ್ರವೇಶಿಸಿ ಈ ವಿವಾದವನ್ನು ಬಗೆಹರಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದ್ದಾರೆ.

ಈ ಪುರಾವೆಗಳಿಗೆ ಪುಷ್ಟಿ ನೀಡಲು ಖ್ಯಾತ ಇತಿಹಾಸಕಾರರಾದ ಸೋಷಿಯಲ್ ಮೀಡಿಯಾ ಪ್ರಭಾವಿ ಧರ್ಮೇಂದ್ರ ಕುಮಾರ್ ಅವರು 1976ರಲ್ಲಿ ಭಾರತ ಸರ್ಕಾರದ ಸರ್ವೇಕ್ಷಣಾ ಇಲಾಖೆ ಪ್ರಕಟಿಸಿದ 'ಮೈಸೂರು ಮಾರ್ಗದರ್ಶಿ ನಕ್ಷೆ (Mysore Guide Map)ಯಲ್ಲಿ 'ಪ್ರಿನ್ಸೆಸ್ ರಸ್ತೆ' ಇತ್ತು ಎಂಬುದನ್ನು ಪ್ರಸ್ತುತಪಡಿಸಿದ್ದಾರೆ.

ಕರ್ನಾಟಕದ ಪರಂಪರೆಯನ್ನು ಆಳವಾಗಿ ಅಧ್ಯಯನ ಮಾಡಿರುವ ಅವರು, 1950ರ ನಕ್ಷೆಯನ್ನೂ ಉಲ್ಲೇಖಿಸಿದ್ದು, ಅದರಲ್ಲಿ 'ಪ್ರಿನ್ಸೆಸ್ ರೋಡ್' ನಾಮಕರಣ ಮಾಡಲಾಗಿತ್ತು ಎಂಬುದನ್ನು ಸಾಕ್ಷೀಕರಿಸುತ್ತದೆ. ಜೊತೆಗೆ ಮೈಸೂರು ಜಿಲ್ಲೆಯ ಅಧಿಕೃತ ವೆಬ್‌ಸೈಟ್‌ನ ರೈಲ್ವೆ ಮ್ಯೂಸಿಯಂ ಅಡಿ ಪ್ರಿನ್ಸೆಸ್ ರಸ್ತೆಯನ್ನು ಉಲ್ಲೇಖಿಸಿದೆ.

ಪ್ರಿನ್ಸೆಸ್ ರಸ್ತೆಯಲ್ಲಿ ಸಿಎಫ್‌ಟಿಆರ್‌ಐ ಮುಖ್ಯ ದ್ವಾರದ ಎದುರಿನ ರೈಲ್ವೆ ಸಂಗ್ರಹಾಲಯವನ್ನು 1979ರಲ್ಲಿ ಪಿ.ಎಂ.ಜೋಸೆಫ್ ಅವರ ಪ್ರಯತ್ನದಿಂದ ಸ್ಥಾಪಿಸಲಾಗಿತ್ತು. ಈ ಸಂಗ್ರಹಾಲಯವು ಛಾಯಾಚಿತ್ರಗಳು ಮತ್ತು ವರ್ಣಚಿತ್ರಗಳ ಜೊತೆಗೆ ಭಾರತೀಯ ರೈಲ್ವೆಯ ಬೆಳವಣಿಗೆಯನ್ನು ವಿವರಿಸುವ ಗ್ರಾಫಿಕ್ಸ್ ಅನ್ನು ಪ್ರದರ್ಶಿಸುತ್ತವೆ.

ಈ ಮಧ್ಯೆ ನಿನ್ನೆಯಷ್ಟೇ ಕೆಲವರು ಚೆಲುವಾಂಬ ಪಾರ್ಕ್ ಬಳಿ ಅಂಟಿಸಿದ್ದ ಪ್ರಿನ್ಸೆಸ್ ರಸ್ತೆ ಸ್ಟಿಕ್ಕರ್ ಅನ್ನು ಕಿತ್ತು ಬಿಸಾಡಲಾಗಿದೆ

ಗುಡುಮಾದನಹಳ್ಳಿಯಲ್ಲಿ ಮಹಿಳೆ ಮೇಲೆ ಹಲ್ಲೆ

ಮೂವರ ವಿರುದ್ಧ ದಕ್ಷಿಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್

ಮೈಸೂರು, ಜ.2(ಆರ್‌ಕೆ)–ಜಾಗದ ವಿಚಾರದಲ್ಲಿ ಮಹಿಳೆ ಮೇಲೆ ಮೂವರು ಹಲ್ಲೆ ನಡೆಸಿರುವ ಘಟನೆ ಮೈಸೂರು ತಾಲೂಕು ಗುಡುಮಾದನಹಳ್ಳಿಯಲ್ಲಿ ಮಂಗಳವಾರ ಸಂಭವಿಸಿದೆ.

ಗ್ರಾಮದ ಕೆ.ಮಹದೇವ ಅವರ ಪತ್ನಿ ಬಿ.ಎನ್.ಮಂಗಳಗೌರಿ(49) ಎಂಬುವರು ಹಲ್ಲೆಗೊಳಗಾದವರು. ಈ ಸಂಬಂಧ ಹಲ್ಲೆ ನಡೆಸಿದ ಗುಡುಮಾದನಹಳ್ಳಿ ಗ್ರಾಮದ ರಾಘವೇಂದ್ರ, ಕೋಮಲ ಹಾಗೂ ನಾಗಮ್ಮ ಎಂಬುವರ ವಿರುದ್ಧ 2024ರ ಡಿಸೆಂಬರ್ 31ರಂದು ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾಗದ ವಿಚಾರದಲ್ಲಿ ಮಂಗಳವಾರ ಸಂಜೆ 6 ಗಂಟೆ ವೇಳೆ ಜಗಳ ತೆಗೆದ ಮೂವರು, ತಮ್ಮ ಮೇಲೆ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಬಟ್ಟೆ ಹರಿದು ಹಾಕಿ ಕೊಲೆ ಮಾಡುವುದಾಗಿ ಬೆದರಿಸಿದ್ದಾರೆ ಎಂದು ಮಂಗಳಗೌರಿ ಅವರು ದೂರು ನೀಡಿದ್ದಾರೆ. ಈ ಸಂಬಂಧ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 2023ರ ಕಲಂ 74, 79, 3(5) ರೀತ್ಯಾ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಪ್ರಶಸ್ತಿ ಪುರಸ್ಕೃತ ಉಪನ್ಯಾಸಕರಿಗೆ ಸನ್ಮಾನ



ಕುವೆಂಪು ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಉಪನ್ಯಾಸಕರಾದ ಹೆಚ್.ಎನ್. ಗಿರೀಶ್ ಅವರನ್ನು, ಯಾಚೇನಹಳ್ಳಿ ಮಠದ ಶ್ರೀ ನಾದಾನಂದ ಸ್ವಾಮೀಜಿ ಅಭಿನಂದಿಸಿದರು. ಪ್ರಗತಿಪರ ಸಾವಯವ ಕೃಷಿಕರೂ ಆದ ಹಿರಿಯ ಸಹಕಾರಿ ವೈ.ಎನ್. ಶಂಕರೇಗೌಡ, ಕಸಾಪ ಮಾಜಿ ಅಧ್ಯಕ್ಷ ವೈ.ಡಿ. ರಾಜಣ್ಣ, ಮಹೇಶ್ ಈ ವೇಳೆ ಉಪಸ್ಥಿತರಿದ್ದಾರೆ.

ಕನ್ನಡ ಚಳುವಳಿ ಕೇಂದ್ರ ಸಮಿತಿಯಿಂದ ಸಾಧಕರಿಗೆ ಸನ್ಮಾನ



ಸುವರ್ಣ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕನ್ನಡ ಚಳವಳಿ ಕೇಂದ್ರ ಸಮಿತಿ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಅಭಿನಂದಿಸಲಾಯಿತು.

ಮೈಸೂರು,ಜ.2(ಎಂಟಿವೈ)– ಸುವರ್ಣ ಕರ್ನಾಟಕ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ಕನ್ನಡ ಚಳವಳಿ ಕೇಂದ್ರ ಸಮಿತಿ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಚಳವಳಿ ಕೇಂದ್ರ ಸಮಿತಿ ಆಯೋಜಿಸಿದ್ದ ಸುವರ್ಣ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ವೈದ್ಯಕೀಯ ಕ್ಷೇತ್ರದಿಂದ ಡಾ.ಹೆಚ್.ಬಿ. ರಾಜಶೇಖರ್, ಸಾಂಸ್ಕೃತಿಕ ಕ್ಷೇತ್ರದಿಂದ ಎ.ಪಿ.ನಾಗೇಶ್, ಸಮಾಜ ಸೇವಾ ಕ್ಷೇತ್ರದಿಂದ ಎ.ಸಿ ಜಗದೀಶ್ ಹಾಗೂ ಕೈಗಾರಿಕಾ ಕ್ಷೇತ್ರದಿಂದ ಚನ್ನಪ್ಪಾಜಿ ಅವರನ್ನು ಅಭಿನಂದಿಸಲಾಯಿತು.

ಸನ್ಮಾನ ಸ್ವೀಕರಿಸಿದ ಬಳಿಕ ಡಾ.ಹೆಚ್.ಬಿ. ರಾಜಶೇಖರ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕನ್ನಡಿಗರಿಗೆ ಕನ್ನಡ ಭಾಷೆಯ ಮೇಲಿನ ಪ್ರೀತಿ ಕಡಿಮೆ ಆಗುತ್ತಿರುವುದು ವಿಷಾದನೀಯ. ಆದರೂ ಕನ್ನಡ ವಿಶ್ವಮಾನ್ಯವಾಗಿ ಬೆಳೆಯುತ್ತಿರುವುದು ಸಂತಸದ ಸಂಗತಿಯಾಗಿದೆ. ಎಲ್ಲರೂ ಹೆಚ್ಚಾಗಿ ಕನ್ನಡ ಬಳಸಬೇಕು. ನಮ್ಮ ಭಾಷೆಯನ್ನು ನಾವೇ ಬೆಳೆಸಬೇಕು ಎಂದರು.

ಇತ್ತೀಚಿನ ಜಾಗತಿಕ ವಿದ್ಯಮಾನದ ಸಂದರ್ಭದಲ್ಲಿ ಬಹಳಷ್ಟು ಮಂದಿ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಎಲ್ಲ ಕಾಯಿಲೆಗಳಿಗೂ ಒತ್ತಡವೇ ಮೂಲವಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ಮುಂದಾಗಬೇಕು. ಅಗತ್ಯವಾದ ಚಿಕಿತ್ಸೆ ಪಡೆಯುವ ಮೂಲಕ ಇದನ್ನು ಹೋಗಲಾಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಮಾತನಾಡಿ, ಕನ್ನಡ ರಾಜ್ಯೋತ್ಸವ ಕೇವಲ ನವೆಂಬರ್ ಒಂದಕ್ಕೆ ಮಾತ್ರ ಸೀಮಿತವಾಗಿರುವುದು ಸರಿಯಲ್ಲ. ಹೀಗಾಗಿ ತಮ್ಮ ಸಮಿತಿ ನವೆಂಬರ್ ಕಳೆದ ನಂತರವೂ ಕನ್ನಡ ಪ್ರೀತಿ ಜಾಗೃತಿಗೊಳಿಸುವ ನಿಟ್ಟಿನಲ್ಲಿ ಈ ರೀತಿಯ ಕಾರ್ಯಕ್ರಮ ಆಯೋಜಿಸುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಅಭಿನಂದಿಸುವ ಸಂಪ್ರದಾಯವನ್ನು ಕನ್ನಡ ಚಳವಳಿ ಕೇಂದ್ರ ಸಮಿತಿ ಅನುಸರಿಸುತ್ತಾ ಬಂದಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕವಯತ್ರಿ ಡಾ.ಲತಾ ರಾಜಶೇಖರ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಡಾ.ಅಂಬೇಡ್ಕರ್ ವಿಚಾರವಾಗಿ ಅಮಿತ್ ಶಾ ಹೇಳಿಕೆ ಖಂಡಿಸಿ ಜ.7ಕ್ಕೆ 'ಮೈಸೂರು ಬಂದ್'ಗೆ ಕರೆ

●ಶಾಲಾ–ಕಾಲೇಜು, ಸರ್ಕಾರಿ ಕಚೇರಿ ಬಂದ್ ●ಕೆಎಸ್‌ಆರ್‌ಟಿಸಿ, ಖಾಸಗಿ ಬಸ್ ಸಂಚಾರಕ್ಕೂ ನಿರ್ಬಂಧ ●ರಿಂಗ್ ರಸ್ತೆ ಜಂಕ್ಷನ್‌ಗಳಲ್ಲಿ ಪ್ರತಿಭಟನೆ ●ಅಗತ್ಯ ವಸ್ತುಗಳ ಖರೀದಿಗೆ ವಿನಾಯಿತಿ

ಮೈಸೂರು, ಜ.2(ಬಿಎಲ್‌ಯು)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ಡಾ.ಬಿ.ಆರ್.ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿ ಜ.7ರಂದು 'ಮೈಸೂರು ಬಂದ್'ಗೆ ಕರೆ ನೀಡಿದೆ.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 6 ರಿಂದ ಸಂಜೆ 4 ಗಂಟೆವರೆಗೆ 'ಮೈಸೂರು ಬಂದ್' ಮಾಡಲು ನಗರದ ಎಲ್ಲರೂ ಸ್ವಯಂ ಪ್ರೇರಣೆಯಿಂದ ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಡಿಸೆಂಬರ್ 17ರಂದು ಸಂಸತ್ ಅಧಿವೇಶನದಲ್ಲಿ ಅಮಿತ್ ಶಾ ಅವರು ಡಾ. ಅಂಬೇಡ್ಕರ್ ಬಗ್ಗೆ ಅಗೌರವದಿಂದ ಮಾತನಾಡಿದ್ದಾರೆ. ಅವರ ಹೇಳಿಕೆಯನ್ನು ದೇಶದ ಪ್ರತಿಯೊಬ್ಬ ಪ್ರಜೆಯೂ ಖಂಡಿಸಬೇಕು. ಮೈಸೂರು ಬಂದ್ ಸಂದರ್ಭದಲ್ಲಿ ನಗರದ ಎಲ್ಲಾ ಅಂಗಡಿ, ಮುಂಗಟ್ಟು ಬಂದ್ ಮಾಡಬೇಕು. ಶಾಲಾ–ಕಾಲೇಜು, ಸರ್ಕಾರಿ ಕಚೇರಿಗಳು, ಸಿನಿಮಾ ಥಿಯೇಟರ್ ಸೇರಿದಂತೆ ಎಲ್ಲಾ ರೀತಿಯ ವ್ಯಾಪಾರ ವಹಿವಾಟು ಸ್ಥಗಿತ ಮಾಡಿ ಬಂದ್‌ಗೆ ಸಂಪೂರ್ಣ ಬೆಂಬಲ ನೀಡಬೇಕು. ಆಟೋ, ಟ್ಯಾಕ್ಸಿ, ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್‌ಗಳ ಸಂಚಾರ ಸಂಪೂರ್ಣ ಸ್ಥಗಿತಗೊಳ್ಳಬೇಕು ಎಂದು ಪುರುಷೋತ್ತಮ್ ಒತ್ತಾಯಿಸಿದರು.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡುತ್ತಿರುವುದು

ಮೈಸೂರಿಗೆ ಸಂಪರ್ಕ ಕಲ್ಪಿಸುವ ರಿಂಗ್ ರೋಡ್‌ನ ತಿ.ನರಸೀಪುರ ರಸ್ತೆ, ಬನ್ನೂರು ರಸ್ತೆ, ಬೆಂಗಳೂರು ರಸ್ತೆ, ಕೆಆರ್‌ಎಸ್ ರಸ್ತೆ, ಹುಣಸೂರು ರಸ್ತೆ, ಹೆಚ್.ಡಿ. ಕೋಟೆ ರಸ್ತೆ ಹಾಗೂ ನಂಜನಗೂಡು ರಸ್ತೆ ಜಂಕ್ಷನ್‌ಗಳಲ್ಲಿ ಪ್ರತಿಭಟನೆ ನಡೆಸಲಾಗುವುದು. ಈ ಮೂಲಕ 'ಮೈಸೂರು ಬಂದ್' ಸಂಪೂರ್ಣ ಯಶಸ್ವಿಗೊಳಿಸಲು ಎಲ್ಲಾ ರೀತಿಯ ಕಾರ್ಯತಂತ್ರ ರೂಪಿಸಲಾಗಿದೆ ಎಂದು ತಿಳಿಸಿದರು.

ಮೆಡಿಕಲ್ ಸ್ಟೋರ್, ಹಾಲಿನ ಬೂತ್ ಸೇರಿದಂತೆ ಅಗತ್ಯ ವಸ್ತುಗಳ ಖರೀದಿಗೆ ಹಾಗೂ ಆಂಬುಲೆನ್ಸ್ ಸಂಚಾರಕ್ಕೆ ನಿರ್ಬಂಧ ಹೇರುವುದಿಲ್ಲ. ಆದರೆ ಇತರೆ ವ್ಯಾಪಾರ ವಹಿವಾಟುಗಳನ್ನು ನಿರ್ಬಂಧಿಸಲಾಗುವುದು. ನಾವು ಒತ್ತಡ ಹೇರಿ ಬಂದ್ ಮಾಡಿಸುವ ಬದಲು ಜನರೇ ಸ್ವಯಂ ಪ್ರೇರಣೆಯಿಂದ ಬಂದ್ ಮಾಡಿ ನಮ್ಮ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಪುರುಷೋತ್ತಮ್ ಮನವಿ ಮಾಡಿದರು.

ಅಮಿತ್ ಶಾ ಹೇಳಿಕೆ ಖಂಡಿಸಿ ನಡೆಸುತ್ತಿರುವ ಹೋರಾಟ 'ಮೈಸೂರು ಬಂದ್'ಗೆ ಮಾತ್ರ ಸೀಮಿತಗೊಳ್ಳದೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲೂ ತೀವ್ರ ಸ್ವರೂಪ ಪಡೆಯಲಿದೆ. ಈ ಮೂಲಕ ಅಮಿತ್ ಶಾ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವ ತನಕ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಇದು ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸಂಬಂಧಿಸಿದ ಹೋರಾಟವಾಗದೆ ಪಕ್ಷಾತೀತವಾಗಿ ಎಲ್ಲರೂ ಭಾಗಿಯಾಗುವ ಪ್ರತಿಭಟನೆಯಾಗಿದೆ. ಇದಕ್ಕೆ ನಗರದ ವ್ಯಾಪಾರಸ್ಥರು, ವಿದ್ಯಾರ್ಥಿ ಸಂಘಟನೆಗಳು, ಕನ್ನಡ ಪರ ಹೋರಾಟಗಾರರು ಕೈ ಜೋಡಿಸಬೇಕು. ಈ ಮೂಲಕ ಮೈಸೂರು ಬಂದ್ ಯಶಸ್ವಿಗೊಳಿಸಬೇಕು ಎಂದು ಕೋರಿದರು.

> ಅಮಿತ್ ಶಾ ಹೇಳಿಕೆ ಖಂಡಿಸಿ 'ಮೈಸೂರು ಬಂದ್'ಗೆ ಕರೆ ನೀಡಿರುವ ಜ.7ರಂದು ಸ್ವಚ್ಛತಾ ಕಾರ್ಯ ಕೈಗೊಳ್ಳುವುದಿಲ್ಲ. ನಗರದ ಸಾವಿರಾರು ಪೌರ ಕಾರ್ಮಿಕರು ಅಂದು ಕರ್ತವ್ಯಕ್ಕೆ ಗೈರಾಗಿ ಪ್ರತಿಭಟನೆಯಲ್ಲಿ ಭಾಗಿಯಾಗುತ್ತಾರೆ.
> -ಎನ್.ಮಾರ, ಪೌರಕಾರ್ಮಿಕರ ಸಂಘಟನೆ ಅಧ್ಯಕ್ಷ

> ಕೇಂದ್ರದ ಬಿಜೆಪಿ ಸರ್ಕಾರ ಆರ್‌ಎಸ್‌ಎಸ್ ಕೈಗೊಂಬೆಯಾಗಿ ಕೆಲಸ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರು ನಗರದ ಆರ್‌ಎಸ್‌ಎಸ್ ಕಚೇರಿಗೆ ಮುತ್ತಿಗೆ ಹಾಕಲಾಗುವುದು. ಈ ಮೂಲಕ ಮುಂದೆ ಇಂತಹ ಹೇಳಿಕೆ ನೀಡದಂತೆ ಎಚ್ಚರಿಸಲಾಗುವುದು.
> -ಭಾಸ್ಕರ್, ಕೆಪಿಸಿಸಿ ಕಾರ್ಯದರ್ಶಿ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಐಡೆಂಟಿಟಿ (ತ) + ಐಡೆಂಟಿಟಿ (ಮ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವನವಾಸ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗನ ಅಂಡ್ ರೋಜಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ವಿಡುದಲೈ–2(ತ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಗನ್ ಅಂಡ್ ರೋಜಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೋ (ಹಿಂ): ರಾ.7ಕ್ಕೆ, ಮಾರ್ಕೋ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸ್

8ನೇ ದಿನ, ಶುಕ್ರವಾರ, 3–1–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಬರ್ಡ್ ಸೆಂಚುರಿ ಪ್ಲೇಟ್ ಡಿII–1100 ಮೀ. ರೇಟೆಡ್ 40 ರಿಂದ 65. ಮ.2.00ಕ್ಕೆ
1. ಇನ್ ಎಕ್ಸಾಸ್ಟಿಬಲ್ 2. ಫ್ಲೈಯಿಂಗ್ ಫಾಲ್ಕನ್ 3. ಪ್ರೌಡ್

II. ನೆಲಮಂಗಲ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಮಿರಾಕಲ್ ಹನಿ 2. ದುರಂಧರ್ 3. ದಿ ಏಂಜಲ್ ಪವರ್

III ಬರ್ಡ್ ಸೆಂಚುರಿ ಪ್ಲೇಟ್ ಡಿI–1100 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1. ರಿವರ್ ಆಫ್ ಗೋಲ್ಡ್ 2. ಫಸ್ಟ್ ಇಂಪ್ರೆಷನ್ 3. ನಿವೇದಾ ಗೋಲ್ಡ್

IV. ನಂದಿ ದುರ್ಗಾ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಸ್ಪಿರಿಚುಯಲ್ ಫೋರ್ಸ್ 2. ಎಲಿವಾಡೋ 3. ನ್ಯಾಚುರಲ್ ಫೋರ್ಸ್

V. ಚಾಮುಂಡಿ ಮಿಲಿಯನ್ –2000 ಮೀ. 4 ವರ್ಷದ ಟರ್ಮ್ಸ್. ಮ.4.00ಕ್ಕೆ
1. ಐರನ್ ಕ್ಲಾಡ್ 2. ಶುಭಾಂಕರ್ 3. ಕಾಲಾ ಮಿಸ್ಟಿ

VI. ರಾಜೇಂದ್ರ ವಿಲಾಸ್ ಪ್ಲೇಟ್–1800 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂಜೆ 4.30ಕ್ಕೆ
1. ಮ್ಯಾಗ್ನಸ್ 2. ಆಭೂಷನ್ 3. ಫೆರೆರಿಟಿ

VII. ತಾಜ್‌ಮಹಲ್ ಪ್ಲೇಟ್– 1600 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಔರ್ಲಿ 2. ಡಿ ಲಾರ್ಡ್ 3. ಬ್ರೇಕ್ ಅವೇ

ದಿನದ ಅತ್ಯುತ್ತಮ	ಮ್ಯಾಗ್ನಸ್
ಡಬ್ಬಲ್	ಮಿರಾಕಲ್ ಹನಿ, ಔರ್ಲಿ
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ವಿದ್ಯಾರ್ಥಿ ನಾಪತ್ತೆ

ತಿ.ನರಸೀಪುರ, ಜ.2–ವಿದ್ಯಾರ್ಥಿಯೋರ್ವ ನಾಪತ್ತೆಯಾಗಿರುವ ಬಗ್ಗೆ ತಿ.ನರಸೀಪುರದ ದಾಸನಾಯಕರ ಬೀದಿಯಿಂದ ವರದಿಯಾಗಿದೆ.

ಅಲ್ಲಿನ ನಿವಾಸಿ ರವಿ ಎಂಬುವರ ಪುತ್ರ ಬನ್ನೂರಿನ ವಿವೇಕಾನಂದ ಕಾಲೇಜಿನ ಪ್ರಥಮ ವರ್ಷದ ಪಿಯುಸಿ ವಿದ್ಯಾರ್ಥಿ ಆರ್.ಪುನೀತ್(16) ಡಿ.25ರಂದು ರಾತ್ರಿ ಮನೆಯಿಂದ ಹೊರ ಹೋದವನು ಈವರೆಗೂ ವಾಪಸ್ಸಾಗಿಲ್ಲ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈತನ ಬಗ್ಗೆ ಮಾಹಿತಿ ಇರುವವರು ತಿ.ನರಸೀಪುರ ಠಾಣೆ ದೂರವಾಣಿ ಸಂಖ್ಯೆ 08227–261227ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಸರ್ಕಾರದ ವಿವಿಧ ಯೋಜನೆಯಡಿ ನಿರ್ಮಾಣವಾದ ಬಡಾವಣೆಗಳ ಸಂಪೂರ್ಣ ಅಭಿವೃದ್ಧಿಪಡಿಸಿದ ನಂತರವೇ
ಆಯಾಯ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿ

- ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರು ತಾಕೀತು
- ಇಂತಹ ಬಡಾವಣೆಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಸಿಎಂ, ಸಂಬಂಧಿಸಿದ ಸಚಿವರಿಗೆ ಮನವಿ ಮಾಡಿದ್ದೇನೆ
- ಶೀಘ್ರವೇ ಇದಕ್ಕೆ ಅನುದಾನ ಲಭಿಸುವ ವಿಶ್ವಾಸವಿದೆ



ಶಾಸಕ ಜಿ.ಟಿ.ದೇವೇಗೌಡರು ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದ ವಿವಿಧ ಯೋಜನೆಯಡಿ ನಿರ್ಮಾಣವಾದ ಬಡಾವಣೆಗಳ ಹಸ್ತಾಂತರ ಸಂಬಂಧ ಸಭೆ ನಡೆಸಿದರು.

ಮೈಸೂರು, ಜ.2(ಎಸ್‌ಬಿಡಿ)– ಸರ್ಕಾರಿ ಯೋಜನೆಗಳಡಿ ನಿರ್ಮಿಸಿರುವ ಬಡಾವಣೆಗಳನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರವೇ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿರುವ ಶಾಸಕರ ಕಚೇರಿಯಲ್ಲಿ ಇಂದು ಶ್ರೀರಾಂಪುರ, ಬೋಗಾದಿ, ಕಡಕೊಳ ಮತ್ತು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು ಹಾಗೂ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳ ಸಭೆ ನಡೆಸಿದ ಅವರು, ಜೆಎನ್‌ನರ್ಮ್–ಬಿ.ಎಸ್.ಯು.ಪಿ ಯೋಜನೆಯಡಿ ನಿರ್ಮಾಣಗೊಂಡಿರುವ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುವ ಮುನ್ನ ಪೂರ್ಣ ಪ್ರಮಾಣದಲ್ಲಿ ಅಭಿವೃದಿಪಡಿಸಿರಬೇಕು ಎಂದು ತಿಳಿಸಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಏಕಲವ್ಯನಗರದಲ್ಲಿ 1040 ಮನೆಗಳು, ಬೋಗಾದಿ ರೂಪನಗರ (ನಿಂಗರಾಜನಕಟ್ಟೆ)ದಲ್ಲಿ 156, ಹಂಚ್ಯಾ ಸಾತಗಳ್ಳಿ(ಭಾರತ್‌ನಗರ)ಯಲ್ಲಿ 432, ಕುಪ್ಪಲೂರು(ಮಹದೇವಪುರ) 336, ಮಂಡಕಳ್ಳಿ 576, ಸಾತಗಳ್ಳಿ(ವಿಟಿಯು ಕಾಲೇಜು ಹಿಂಭಾಗ) 560, ರಾಜೀವ್ ನಗರ 552, ಹಳೇ ಕೆಸರೆ(ನಂ. 484/1/2) 252 ಸೇರಿ ಒಟ್ಟು 3904 ಮನೆಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಿಸಿ, ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. ಆದರೆ ಅಲ್ಲಿನ ನಿವಾಸಿಗಳು ಮೂಲಭೂತ ಸೌಕರ್ಯವಿಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಈ ಬಡಾವಣೆಗಳನ್ನು ಮೊದಲು ಪರಿಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರವೇ ಹಸ್ತಾಂತರ ಮಾಡಬೇಕು ಎಂದರು.

ಈಗಾಗಲೇ ಮುಖ್ಯಮಂತ್ರಿಗಳು ಮತ್ತು ವಸತಿ ಸಚಿವರನ್ನು ಖುದ್ದಾಗಿ ಬೇಟಿ ಮಾಡಿ ಈ ಬಡಾವಣೆಗಳ ಅಭಿವೃದ್ಧಿಗೆ ಅನುದಾನವನ್ನು ನೀಡುವಂತೆ ಮನವಿ ಸಲ್ಲಿಸಿದ್ದು, ಶೀಘ್ರ ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ್ದಾರೆ. ಆದ್ದರಿಂದ ಮಂಡಳಿಯ ಇಂಜಿನಿಯರ್‌ಗಳು, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು, ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಒಟ್ಟಿಗೆ ಈ ಬಡಾವಣೆಗಳಿಗೆ ತೆರಳಿ ಕುಂದುಕೊರತೆ ಸಭೆ ನಡೆಸಬೇಕು. ಕುಡಿಯುವ ನೀರು, ಒಳಚರಂಡಿ, ರಸ್ತೆ, ಅಂಗನವಾಡಿ, ಶಾಲೆ, ಸ್ಮಶಾನ ಸೇರಿದಂತೆ ಅತ್ಯವಶ್ಯಕ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ, ಮಂಡಳಿಗೆ ಸಲ್ಲಿಸಬೇಕು ಎಂದು ಸೂಚನೆ ನೀಡಿದರು. ಈವರೆಗೆ ಮುಡಾ ವ್ಯಾಪ್ತಿಯಲ್ಲಿದ್ದ ಎಲ್ಲಾ ಖಾಸಗಿ ಬಡಾವಣೆಗಳು ಹಾಗೂ ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಾದ ಪಟ್ಟಣ ಪಂಚಾಯ್ತಿ, ನಗರಸಭೆಗೆ ಹಾಗೂ ಗ್ರಾಮ ಪಂಚಾಯ್ತಿಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಆದರೆ ಹತ್ತಾರು ವರ್ಷಗಳಿಂದ ಯಾವುದೇ ಮೂಲಭೂತ ಸೌಕರ್ಯಗಳನ್ನು ಮುಡಾ ಒದಗಿಸಿಲ್ಲ. ಆದ್ದರಿಂದ ಹಸ್ತಾಂತರ ಮಾಡಿಕೊಳ್ಳುವ ಪ್ರತಿ ಬಡಾವಣೆಗಳಿಗೆ ಬೇಟಿ ನೀಡಿ ಅಲ್ಲಿನ ನಿವಾಸಿಗಳೊಡನೆ ಸಭೆ ನಡೆಸಿ, ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಆ ಬಡಾವಣೆಯ ಕಂದಾಯ ಮತ್ತು ಅಭಿವೃದ್ಧಿ ಶುಲ್ಕವನ್ನು ಅದೇ ಬಡಾವಣೆಯ ಅಭಿವೃದಿಗೆ ಖರ್ಚು ಮಾಡುತ್ತೇವೆಂದು ತೀರ್ಮಾನಿಸಿ, ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಸ್ವಚ್ಛತೆ, ಕುಡಿಯುವ ನೀರು, ವಿದ್ಯುತ್, ಒಳಚರಂಡಿ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಿ, ಜನತೆಯ ಪ್ರಶಂಸೆ ಪಡೆಯಬೇಕು ಎಂದು ಸಲಹೆ ನೀಡಿದರು. ಬಡಾವಣೆಗಳ ಹಸ್ತಾಂತರ ಸಂದರ್ಭದಲ್ಲಿ ಖಾತೆ ಸೇರಿದಂತೆ ಯಾವುದೇ ಸಮಸ್ಯೆಗಳು ಎದುರಾಗದಂತೆ ಕ್ರಮ ಕೈಗೊಳ್ಳಬೇಕು. ಪಟ್ಟಣ ಪಂಚಾಯ್ತಿ ವತಿಯಿಂದ ಕಸ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು. ಅಧಿಕಾರಿಗಳು ಪ್ರತಿ ಬಡಾವಣೆಗಳಿಗೆ ಭೇಟಿ ನೀಡಬೇಕು. ಶಾಲೆಗಳು, ಅಂಗನವಾಡಿ ಕಟ್ಟಡ ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಪಟ್ಟಣ ಪಂಚಾಯ್ತಿಗಳ ಮುಖ್ಯಾಧಿಕಾರಿಗಳಾದ ದೀಪಾ, ಬಸವರಾಜು, ರವಿಕೀರ್ತಿ, ಸುರೇಶ್, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳು, ಮುಖಂಡರಾದ ಗೆಜ್ಜಗಳ್ಳಿ ಲೋಕೇಶ್, ಪರಸಯ್ಯನ ಹುಂಡಿ ಸುರೇಶ್, ಬೋಗಾದಿ ಚಂದ್ರಶೇಖರ್ ಮತ್ತಿತರರು ಭಾಗವಹಿಸಿದ್ದರು.

ಫೆ.28ರಿಂದ 3 ದಿನಗಳ ಕಾಲ ಅದ್ದೂರಿ ಹಂಪಿ ಉತ್ಸವ

ಬೆಂಗಳೂರು, ಜ.2– ಹಂಪಿ ಉತ್ಸವಕ್ಕೆ ಕೊನೆಗೂ ದಿನಾಂಕ ನಿಗದಿಯಾಗಿದೆ. ಈ ಬಾರಿ ಒಂದು ತಿಂಗಳು ವಿಳಂಬವಾಗಿ ಹಂಪಿ ಉತ್ಸವ ನಡೆಯಲಿದೆ. ಫೆ.28ರಿಂದ ಮೂರು ದಿನಗಳ ಕಾಲ ಹಂಪಿ ಉತ್ಸವ ನಡೆಯಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ತಿಳಿಸಿದ್ದಾರೆ. ಫೆ.28ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಂಪಿ ಉತ್ಸವ ಉದ್ಘಾಟಿಸಲಿದ್ದಾರೆ. ಫೆ.28ರಿಂದ ಮಾರ್ಚ್ 2ರವರೆಗೆ ಹಂಪಿ ಉತ್ಸವ ಜರುಗಲಿದೆ. ಮಾರ್ಚ್ 1 ಮತ್ತು 2ರಂದು ಸಾಂಸ್ಕೃತಿಕ ವೈಭವಗಳು, ಕಾರ್ಯಕ್ರಮಗಳು ಪ್ರೇಕ್ಷಕರನ್ನು ರಂಜಿಸಲಿವೆ. ಮಾರ್ಚ್ 2ರಂದು ಸಮಾರೋಪ ಸಮಾರಂಭ ನಡೆಯಲಿದೆ. ಈ ಬಾರಿ ಅದ್ದೂರಿಯಾಗಿ ಹಾಗೂ ಸಾಂಪ್ರದಾಯಿಕವಾಗಿ ಹಂಪಿ ಉತ್ಸವ ಆಚರಿಸಲಾಗುವುದು. ಉತ್ಸವದ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

CHANGE OF NAME

I, SHANTHI VIJAY HEGDE W/o Vijay prasad Hegde, residing at No. 376, Mathru krupa, 7th Main, Vishweshwaranagar, Near Subramanyaswamy Temple, Mysuru-570008, Karnataka, have changed my name from SHANTHI VIJAYPRASAD HEGDE to SHANTHI VIJAY HEGDE vide affidavit sworn before Notary S.V. Nagendra, Mysuru dated 2-1-2025

Sd/- SHANTHI VIJAY HEGDE

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





ಕ.ರಾ.ರ.ಸಾರಿಗೆ ನಿಗಮಕ್ಕೆ (KSRTC)

ಹೊರಗುತ್ತಿಗೆ ಆಧಾರದ ಮೇಲೆ Mechanic/ತಾಂತ್ರಿಕ ಸಹಾಯಕರು/Technical Assistants ಬೇಕಾಗಿದ್ದಾರೆ:

- ITI/DIPLOMA/APPRENTICE training in any trade.
- ITI ಪದವಿಯಲ್ಲಿ ಯಾವುದೇ ಕೋರ್ಸ್ ಮಾಡಿರುವ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗುವುದು ಹಾಗೂ DIPLOMA/APPRENTICE ತರಬೇತಿಯಲ್ಲಿ ಯಾವುದೇ ಕೋರ್ಸ್ ಮಾಡಿರುವ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗುವುದು. Bus Pass ಸೌಲಭ್ಯ ಇರುತ್ತದೆ

ಬೇಕಾಗಿರುವ ಅಭ್ಯರ್ಥಿಗಳ ಮೀಸಲಾತಿಯ ವಿವರ,
ಪರಿಶಿಷ್ಟ ಜಾತಿ(SC) ಮತ್ತು ಪರಿಶಿಷ್ಟ ಪಂಗಡ(ST) , ಪ್ರವರ್ಗ 1, ಪ್ರವರ್ಗ 2ಎ, ಪ್ರವರ್ಗ 2ಬಿ, ಪ್ರವರ್ಗ 3ಎ, ಪ್ರವರ್ಗ 3ಬಿ ವರ್ಗದವರು.

ಮೀಸಲಾತಿಯ ಅಭ್ಯರ್ಥಿಗಳು ಬೇಕಾಗಿದ್ದಾರೆ.

ಕೆಲಸದ ಸ್ಥಳ : ಮೈಸೂರು ಗ್ರಾಮಾಂತರ ವಿಭಾಗ ಮತ್ತು ಮೈಸೂರು ನಗರ ವಿಭಾಗ, ಹಾಗೂ ಹಾಸನ ವಿಭಾಗ, ಮಂಡ್ಯ ವಿಭಾಗ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
08213588801, 9110692229, 8678949513.

ನಗರಸಭಾ ಕಾರ್ಯಾಲಯ, ಹುಣಸೂರು

ಸಂ:ಹುನಕಾ:/ಆಶ್ರಯ/ಪಿ.ಆರ್/01/2024–25 ದಿನಾಂಕ : 02/01/2025

ಸಾರ್ವಜನಿಕ ಪ್ರಕಟಣೆ

ಹುಣಸೂರು ಪಟ್ಟಣದಲ್ಲಿ ಈ ಹಿಂದೆ ಪುರಸಭೆಯಿಂದ 870 ಫಲಾನುಭವಿಗಳನ್ನುಆಯ್ಕೆಮಾಡಿ ಹಕ್ಕು ಪತ್ರ ವಿತರಿಸಿರುವ ಫಲಾನುಭವಿಗಳಿಂದ ಅವಶ್ಯ ದಾಖಲಾತಿ ಗಳನ್ನು, ಹಕ್ಕು ಪತ್ರದೊಂದಿಗೆ ಕಛೇರಿಗೆ ಅರ್ಜಿ ಸಲ್ಲಿಸಲು ದಿನಾಂಕ 06–12–2024 ರಂದು ನಡೆದ ನಗರ ಆಶ್ರಯ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಈ ಹಿಂದೆ ಹುಣಸೂರು ಪುರಸಭೆಯಿಂದ ಹಕ್ಕು ಪತ್ರ ಪಡೆದಿರುವ ಫಲಾನುಭವಿಗಳು ದಿನಾಂಕ 02–01–2025 ರಿಂದ 31–01–2025ರ ಒಳಗಾಗಿ ಹಕ್ಕು ಪತ್ರ ಹಾಗೂ ಈ ಕೆಳಕಂಡ ದಾಖಲಾತಿಗಳನ್ನು ಹುಣಸೂರು ನಗರಸಭೆಗೆ ಸಲ್ಲಿಸಲು ಸೂಚಿಸಲಾಗಿದೆ.

- ಹಕ್ಕುಪತ್ರ ಜೆರಾಕ್ಸ್ ಪ್ರತಿ
- ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ
- ಪಡಿತರ ಚೀಟಿ ಜೆರಾಕ್ಸ್ ಪ್ರತಿ

ಸಹಿ/– ಕಾರ್ಯದರ್ಶಿ/ಪೌರಾಯುಕ್ತರು, ನಗರ ಆಶ್ರಯ ಸಮಿತಿ, ಹುಣಸೂರು

ಸಹಿ/– ಅಧ್ಯಕ್ಷರು ಹಾಗೂ ಶಾಸಕರು, ನಗರ ಆಶ್ರಯ ಸಮಿತಿ, ಹುಣಸೂರು

ದಿ ಮೈಸೂರು ಕೋ - ಆಪರೇಟಿವ್ ಬ್ಯಾಂಕ್ ನಿ.,

ಗಾಂಧಿ ಚೌಕ, ಮೈಸೂರು

ಚುನಾವಣಾ ವೇಳಾಪಟ್ಟಿ, ಪ್ರಕಟಣೆ

ದಿ ಮೈಸೂರು ಕೋ - ಆಪರೇಟಿವ್ ಬ್ಯಾಂಕ್ ನಿ., ಗಾಂಧಿ ಚೌಕ, ಮೈಸೂರು ಈ ಬ್ಯಾಂಕ್‌ನ ಆಡಳಿತ ಮಂಡಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಈ ಕೆಳಕಂಡಂತೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಚುನಾವಣೆ ಮೂಲಕ ಆಯ್ಕೆ ಮಾಡಬೇಕಾದ ಸದಸ್ಯರ ಸಂಖ್ಯೆ ಒಟ್ಟು 13 ಸ್ಥಾನಗಳು ಈ ಪೈಕಿ ಒಂದು ಸ್ಥಾನ ಪರಿಶಿಷ್ಟ ಜಾತಿಯವರಿಗೆ, ಒಂದು ಸ್ಥಾನ ಪರಿಶಿಷ್ಟ ಪಂಗಡವರಿಗೆ, ಒಂದು ಸ್ಥಾನ ಹಿಂದುಳಿಗ ವರ್ಗ (ಪ್ರವರ್ಗ ಎ) ಗೆ, ಒಂದು ಸ್ಥಾನ ಹಿಂದುಳಿಗ ವರ್ಗ (ಪ್ರವರ್ಗ ಬಿ) ಗೆ, ಎರಡು ಸ್ಥಾನ ಮಹಿಳೆಯರಿಗೆ ಮೀಸಲಿರಿಸಲಾಗಿದ್ದು ಉಳಿದಂತೆ ಏಳು ಸ್ಥಾನಗಳು ಸಾಮಾನ್ಯ ಸ್ಥಾನಗಳಾಗಿರುತ್ತದೆ

1. ನಾಮಪತ್ರವನ್ನು ಸ್ವೀಕರಿಸಲು ಪ್ರಾರಂಭದ ದಿನಾಂಕ	ದಿ:05-01-2025ನೇ ಭಾನುವಾರದಿಂದ ಬೆಳಗ್ಗೆ 11-00 ರಿಂದ ಮಧ್ಯಾಹ್ನ 3-00 ಗಂಟೆವರೆಗೆ
2. ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನಾಂಕ	ದಿ:11-01-2025ನೇ ಶನಿವಾರ ಬೆಳಗ್ಗೆ 11-00 ರಿಂದ ಮಧ್ಯಾಹ್ನ 3-00 ಗಂಟೆವರೆಗೆ
3. ನಾಮಪತ್ರಗಳ ಪರಿಶೀಲನೆ	ದಿ : 12-01-2025ನೇ ಭಾನುವಾರ ಬೆಳಗ್ಗೆ 11-00 ಗಂಟೆಗೆ
4. ನಾಮಪತ್ರವನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ	ದಿ:13-01-2025ನೇ ಸೋಮವಾರ ಮಧ್ಯಾಹ್ನ 3-00 ಗಂಟೆಯ ಒಳಗೆ
5. ಚುನಾವಣೆ ನಡೆಯುವ ದಿನಾಂಕ, ಸ್ಥಳ ಮತ್ತು ವೇಳೆ	ದಿ : **19-01-2025**ನೇ ಭಾನುವಾರ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣ, ದೊಡ್ಡಕೆರೆ ಮೈದಾನ, ಮೈಸೂರು ಬೆಳಗ್ಗೆ **9-00** ಗಂಟೆಯಿಂದ ಸಂಜೆ **4-00** ಗಂಟೆಯವರೆಗೆ
6. ಮತಗಳ ಎಣಿಕೆಯ ಮತ್ತು ಫಲಿತಾಂಶ ಪ್ರಕಟಣೆ	ದಿ:19-01-2025ರಂದು ಭಾನುವಾರ ಮತದಾನ ಮುಕ್ತಾಯವಾದ ನಂತರ

ಸಹಿ /-
ರಿಟರ್ನಿಂಗ್ ಆಫೀಸರ್,
ದಿ ಮೈಸೂರು ಕೋ - ಆಪರೇಟಿವ್ ಬ್ಯಾಂಕ್ ನಿ.,
ಮೈಸೂರು

ನಗರಸಭಾ ಕಾರ್ಯಾಲಯ, ಹುಣಸೂರು, ಮೈಸೂರು ಜಿಲ್ಲೆ – 571105

E-mail : itstaff_ulb_hunsur@yahoo.co.in ಫೋನ್: 08222–252048

ಸಂ:ಹುನಕಾ/ಜೆಇ/01/ಸಾ.ನಿ/ಟೆ.ಪ್ರ/07/2024–25 ದಿನಾಂಕ: 26.12.2024

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪದ್ಧತಿಯಲ್ಲಿ)

ಹುಣಸೂರು ನಗರಸಭೆ ವ್ಯಾಪ್ತಿಯಲ್ಲಿ ನಗರಸಭಾ ನಿಧಿಯಡಿ ಕಾಮಗಾರಿಯನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಗುತ್ತಿಗೆದಾರರಿಂದ KW-1ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000 ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು https://kppp.karnataka.gov.in ನಿಂದ ಟೆಂಡರ್ ಷರತ್ತು, ಇಎಂಡಿ ವಿವರ ಹಾಗೂ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಕಾಮಗಾರಿ ವಿವರ 1)DMA/2024-25/OW/WORK_INDENT32553 ಅಂದಾಜು ಮೊತ್ತ 4.50 ಲಕ್ಷಗಳು 2) DMA/2024-25/OW/WORK_INDENT 32936 ಅಂದಾಜು ಮೊತ್ತ 6.75 ಲಕ್ಷಗಳು ಟೆಂಡರ್ ಆಕ್ಷೇಪಣೆಗಳನ್ನು ಸಲ್ಲಿಸುವ ಮತ್ತು ಟೆಂಡರ್ ಪಾರಂ ಡೌನ್ ಲೋಡ್ ಮಾಡಿಕೊಳ್ಳುವ ಹಾಗೂ ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿನಾಂಕ: 07.01.2025 ಟೆಂಡರ್ ತೆರೆಯುವ ದಿನಾಂಕ: 09.01.2025 ಬೆಳಿಗ್ಗೆ 11.30 ಗಂಟೆಗೆ. ಹೆಚ್ಚಿನ ಮಾಹಿತಿ, ಕಾಮಗಾರಿ ನಿಭಂದನೆ ಹಾಗೂ ಷರತ್ತುಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
(ಶ್ರೀ.ಎಸ್. ಶರವಣ)	(ಶ್ರೀಮತಿ.ಹೆಚ್.ಡಿ.ಆಶಾ)	(ಶ್ರೀಹರೀಶ್)	(ಶ್ರೀಮತಿ. ಮಾನಸ ಎಂ.)
ಅಧ್ಯಕ್ಷರು	ಉಪಾಧ್ಯಕ್ಷರು	ಸ್ಥಾಯಿಸಮಿತಿ ಅಧ್ಯಕ್ಷರು	ಪೌರಾಯುಕ್ತರು
ನಗರಸಭೆ, ಹುಣಸೂರು	ನಗರಸಭೆ, ಹುಣಸೂರು	ನಗರಸಭೆ, ಹುಣಸೂರು	ನಗರಸಭೆ, ಹುಣಸೂರು

DIPR/DDMYS/1031/KSMCA//2024-25